24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 24 | ಸಂಚಿಕೆ 103 | ನವದೆಹಲಿ | ಬೆಲೆ ₹10 | ಅಕ್ಟೋಬರ್, 8, 2026, ಗುರುವಾರ

## ಒಳಪುಟಗಳಲ್ಲಿ

ಜ್ಞಾನೇಶ್ ರಾಜೀನಾಮೆ ನೀಡಿದ್ರೂ ಅಭಿಯಾನ ವಿರುದ್ಧ ಪ್ರತಿಭಟನೆ: ಸಿಜೆಪಿ - ಪು.4

ವಿಶ್ವ ಆರೋಗ್ಯ ಸಂಸ್ಥೆಯಿಂದ (ಡಬ್ಲ್ಯು.ಎಚ್.ಒ) ಒನ್‌ಸೈಟ್ ಎಸ್ಸಿಲಾರ್ ಲಕೋಟಿಕಾ ಫೌಂಡೇಶನ್ ಮತ್ತು ಕರ್ನಾಟಕ ಸರ್ಕಾರದ ದೂರದೃಷ್ಟಿಯ ಆಶಾಕಿರಣ ಉಪಕ್ರಮಕ್ಕೆ ಪ್ರಶಂಸೆ - ಪು/5

ವೇತನವಿಲ್ಲ, ಹೊಟ್ಟೆಗೆ ಹಿಟ್ಟಿಲ್ಲ, ಸಮಾಜ ಕಲ್ಯಾಣ ಇಲಾಖೆ ವಿರುದ್ಧ ಸಿಡಿದೆದ್ದ ಹೊರಗುತ್ತಿಗೆ ನೌಕರರು - ಪು.6

# ಜ್ಞಾನೇಶ್‌ಕುಮಾರ್ ವಿರುದ್ಧ ಪ್ರತಿಪಕ್ಷಗಳ ಹೋರಾಟ ತೀವ್ರ

**ನವದೆಹಲಿ, ಅ. 7:** ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ರಾಜೀನಾಮೆ ನೀಡುವವರೆಗೂ ನಮ್ಮ ಪ್ರತಿಭಟನೆ ನಿಲ್ಲುವುದಿಲ್ಲ ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಪುನರುಚ್ಚರಿಸಿದ್ದಾರೆ. ನಮ್ಮನ್ನು ತಡೆಯಲು ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರಿಗೆ ಸಾಧ್ಯವಿಲ್ಲ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸವಾಲು ಹಾಕಿದ್ದಾರೆ.

**ರಾಹುಲ್, ಪ್ರಿಯಾಂಕಾ ವಿರುದ್ಧ ಎಫ್‌ಐಆರ್:** ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ವಿರುದ್ಧದ ಪ್ರತಿಪಕ್ಷಗಳ ಪ್ರತಿಭಟನೆ ವೇಳೆ ಆಕಾಶವಾಣಿ ಭವನಕ್ಕೆ ಅನುಮತಿಯಿಲ್ಲದೆ ಬಲವಂತವಾಗಿ ಪ್ರವೇಶಿಸಿದ್ದಾರೆ ಎಂಬ ಆರೋಪದಡಿ ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ವಾದ್ರಾ ಸೇರಿದಂತೆ ಅವರ ಬೆಂಬಲಿಗರ ವಿರುದ್ಧ ದೆಹಲಿ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ. ಅಕ್ಟೋಬರ್ 6ರಂದು ಚುನಾವಣಾ ಆಯೋಗದ ಕಚೇರಿಯತ್ತ ಇಂಡಿಯಾ ಮೈತ್ರಿಕೂಟದ ನಾಯಕರು ನಡೆಸಿದ ಮೆರವಣಿಗೆಯನ್ನು ಪೊಲೀಸರು ತಡೆದ ಬಳಿಕ, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಹಾಗೂ ಇತರ ನಾಯಕರು ಆಕಾಶವಾಣಿ ಭವನದ ಆವರಣದಲ್ಲಿ ಸುಮಾರು 8 ಗಂಟೆಗೂ ಹೆಚ್ಚು ಕಾಲ ಧರಣಿ ನಡೆಸಿದ್ದರು. ಬಳಿಕ ರಾಹುಲ್, ಪ್ರಿಯಾಂಕಾ ಸೇರಿದಂತೆ ಸುಮಾರು 260 ಮಂದಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದರು. ಆಕಾಶವಾಣಿ ಭವನದ ಆವರಣಕ್ಕೆ ಅನುಮತಿಯಿಲ್ಲದೆ ಪ್ರವೇಶಿಸಲಾಗಿದೆ ಎಂದು ಆರೋಪಿಸಿ ಸಲ್ಲಿಸಲಾದ ದೂರಿನ ಆಧಾರದ ಮೇಲೆ ಎಫ್‌ಐಆರ್ ದಾಖಲಿಸಲಾಗಿದೆ ಎಂದು ದೆಹಲಿ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ, ಅವರ ಬೆಂಬಲಿಗರು ಹಾಗೂ ಅವರೊಂದಿಗೆ ತೆರಳಿದ್ದ ಇತರ ಸಂಸದರು ಅನುಮತಿ ಪಡೆಯದೆ ಆವರಣ ಪ್ರವೇಶಿಸಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ. ಮಂಗಳವಾರ ಇಂಡಿಯಾ ಮೈತ್ರಿಕೂಟದ ನಾಯಕರು ಸಂಸತ್ ಭವನದಿಂದ ಚುನಾವಣಾ ಆಯೋಗದ ಕಚೇರಿಯತ್ತ ಮೆರವಣಿಗೆ ನಡೆಸಲು ಮುಂದಾಗಿದ್ದರು. ಆದರೆ ಮೆರವಣಿಗೆಗೆ ಅನುಮತಿ ಪಡೆದಿರಲಿಲ್ಲ. ಮೆರವಣಿಗೆಗೆ ಅನುಮತಿ ಕೋರಿ ನವದೆಹಲಿ ಡಿಸಿಪಿ ಕಚೇರಿಗೆ ಯಾವುದೇ ಅರ್ಜಿ ಸಲ್ಲಿಕೆಯಾಗಿರಲಿಲ್ಲ. ಹೀಗಾಗಿ ಮೆರವಣಿಗೆ ನಡೆಸಲು ಯಾವುದೇ ಅನುಮತಿ ನೀಡಿರಲಿಲ್ಲ ಎಂದು ದೆಹಲಿ ಪೊಲೀಸರು ತಿಳಿಸಿದ್ದಾರೆ.

### ಲೋಕಸಭೆ ವಿರೋಧ ಪಕ್ಷ ನಾಯಕ ರಾಹುಲ್ ಪುನರುಚ್ಚಾರ



### ಪ್ರತಿ ಎಫ್‌ಐಆರ್ ಪದಕವಿದ್ದಂತೆ

ನನ್ನ ವಿರುದ್ಧ ದಾಖಲಾಗಿರುವ ಪ್ರತಿಯೊಂದು ಎಫ್‌ಐಆರ್ ಕೂಡ ನನ್ನ ಎದೆಯ ಮೇಲೆ ಬೀಳುವ ಪದಕವಿದ್ದಂತೆ ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ. ಈ ಸಂಬಂಧ ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ರಾಹುಲ್, ಸದ್ಯ ನನ್ನ ವಿರುದ್ಧ 45 ಪ್ರಕರಣಗಳಿವೆ. ಶತಕ ಗಳಿಸುವುದು ನನ್ನ ಗುರಿಯಾಗಿದೆ ಎಂದು ಹೇಳಿದ್ದಾರೆ. ಎಷ್ಟೇ ಪ್ರಕರಣಗಳು ದಾಖಲಾದರೂ ಸಂವಿಧಾನ ರಕ್ಷಣೆಗಾಗಿ ನಮ್ಮ ಹೋರಾಟ ಮುಂದು ವರಿಯಲಿದೆ ಎಂದು ರಾಹುಲ್ ಪುನರುಚ್ಚರಿಸಿದ್ದಾರೆ.

## ಮತದ ಹಕ್ಕು ಕಳಕೊಂಡವರ ನೆರವಿಗೆ ಕಾಂಗ್ರೆಸ್ ಅಭಿಯಾನ

**ನವದೆಹಲಿ, ಅ. 7:** ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯ ಮೂಲಕ ಮತದಾರರ ಪಟ್ಟಿಯಿಂದ ಅಳಿಸಿಹಾಕಲಾಗಿದೆ ಎನ್ನಲಾದ 13.3 ಕೋಟಿಗೂ ಹೆಚ್ಚು ಮತದಾರರನ್ನು ಮತ್ತೆ ಮತದಾನದ ಪಟ್ಟಿಯಲ್ಲಿ ಸೇರ್ಪಡೆಗೊಳಿಸಲು ಕಾಂಗ್ರೆಸ್ ದೇಶಾದ್ಯಂತ ಬೂತ್ ಮಟ್ಟದಲ್ಲಿ "ಮತರಕ್ಷಕರು "(ವೋಟ್ ರಕ್ಷಕ್)? ಎಂಬ ಕಾರ್ಯಕರ್ತರನ್ನು ನೇಮಿಸಲು ನಿರ್ಧರಿಸಿದೆ. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಹಿರಿಯ ನಾಯಕ ರಾಹುಲ್ ಗಾಂಧಿ ಅವರ ಸಮ್ಮುಖದಲ್ಲಿ ನಡೆದ ಪ್ರಮುಖ ಸಭೆಯ ನಂತರ, ಪಕ್ಷದ ಸಂಘಟನಾ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಮತ್ತು ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಈ ನೂತನ ಅಭಿಯಾನವನ್ನು ಘೋಷಿಸಿದ್ದಾರೆ.

ದೇಶದ ಪ್ರತಿಯೊಂದು ಮತಗಟ್ಟೆ (ಬೂತ್) ಹಂತದಲ್ಲಿ ವೋಟ್ ರಕ್ಷಕ್‌ಗಳನ್ನು ನೇಮಿಸಲಾಗುತ್ತದೆ. ಈ ಕಾರ್ಯಕರ್ತರು ತಮ್ಮ ವ್ಯಾಪ್ತಿಯಲ್ಲಿ ವಿನಾಕಾರಣ ಅಥವಾ ಅಕ್ರಮವಾಗಿ ಪಟ್ಟಿಯಿಂದ ತೆಗೆದುಹಾಕಲಾದ ಅರ್ಹ ಮತದಾರರನ್ನು ಗುರುತಿಸಿ, ಅವರ ಮರುಸೇರ್ಪಡೆಗಾಗಿ ಫಾರ್ಮ್ 6 ತುಂಬಲು ಮತ್ತು ಇತರ ಪ್ರಕ್ರಿಯೆಗಳಿಗೆ ಸಹಾಯ ಮಾಡಲಿದ್ದಾರೆ ಎಂದರು.

# 75 ವರ್ಷದ ನಂತರ ಕರ್ನಾಟಕದಲ್ಲಿ ಭೀಕರ ಬರ: ಶೇ.90ರಷ್ಟು ಬೆಳೆಹಾನಿ

### ರೈತರಿಗೆ ಅಗತ್ಯ ನೆರವು ಕಲ್ಪಿಸಲು ರಾಜ್ಯ ಸರ್ಕಾರದ ಆದ್ಯತೆ: ಡಿಸಿಎಂ ಡಾ.ಪರಮೇಶ್ವರ್

**ಬಳ್ಳಾರಿ, ಅ.7:** 75 ವರ್ಷಗಳ ನಂತರ ರಾಜ್ಯದಲ್ಲಿ ಭೀಕರ ಬರ ಬಂದಿದೆ. ರೈತರಿಗೆ ಅಗತ್ಯ ನೆರವು ಕಲ್ಪಿಸುವುದೇ ಸರ್ಕಾರದ ಆದ್ಯತೆಯಾಗಿದೆ ಎಂದು ಡಿಸಿಎಂ ಹಾಗೂ ಕಂದಾಯ ಸಚಿವ ಡಾ. ಜಿ. ಪರಮೇಶ್ವರ್ ಹೇಳಿದ್ದಾರೆ.

ಬಳ್ಳಾರಿ ತಾಲ್ಲೂಕಿನ ಬರಪೀಡಿತ ಹಲಕುಂದಿ ಗ್ರಾಮದಲ್ಲಿ ತೊಗರಿ ಬಿತ್ತನೆ ಮಾಡಿರುವ ಜಮೀನಿಗೆ ಭೇಟಿ ನೀಡಿ ಬೆಳೆ ಪರಿಸ್ಥಿತಿಯನ್ನು ಪರಿಶೀಲಿಸಿದ ನಂತರ ಮಾತನಾಡಿ, ರಾಜ್ಯದಲ್ಲಿ ಶೇ.90ರಷ್ಟು ಬೆಳೆ ಹಾನಿಯಾಗಿದೆ. ಬೆಳೆ ಕಳೆದುಕೊಂಡು ಸಂಕಷ್ಟದಲ್ಲಿರುವ ರೈತರ ನೆರವಿಗೆ ಅಗತ್ಯವಿರುವ ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ

ಕರ್ನಾಟಕದ ಸುಮಾರು 240 ತಾಲೂಕುಗಳ ಪೈಕಿ ಕರಾವಳಿ ಭಾಗದ ಕೆಲವೇ ತಾಲೂಕುಗಳನ್ನು ಹೊರತುಪಡಿಸಿ ಬಹುತೇಕ ಎಲ್ಲ ತಾಲೂಕುಗಳಲ್ಲಿಯೂ ಬರದ ಪರಿಣಾಮ ಗೋಚರಿಸುತ್ತಿದೆ. ಈಗಾಗಲೇ 217 ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದ್ದು, ಇನ್ನೂ 23 ತಾಲೂಕುಗಳಲ್ಲಿ ಗ್ರೌಂಡ್ ಟ್ರೂತಿಂಗ್ ನಡೆಯುತ್ತಿದೆ. ಅವುಗಳಲ್ಲಿ ಸುಮಾರು 10ರಿಂದ 15 ತಾಲೂಕುಗಳು



ಬರಪೀಡಿತ ಪ್ರದೇಶಗಳ ಪಟ್ಟಿಗೆ ಸೇರುವ ಸಾಧ್ಯತೆಯಿದೆ ಎಂದು ಹೇಳಿದ್ದಾರೆ.

**ಮೊದಲ ಕಂತಿನ ಪರಿಹಾರ ಬಿಡುಗಡೆಗೆ ಕ್ರಮ:** ಕೇಂದ್ರ ಸರ್ಕಾರದ ಮಾರ್ಗಸೂಚಿಯಲ್ಲಿ ಒಂದು ಹೆಕ್ಟೇರ್‌ಗೆ 8,500 ರೂ. ಪರಿಹಾರ ನೀಡುವ ವ್ಯವಸ್ಥೆ ಇದೆ.

ಆದರೆ ಕೇಂದ್ರದಿಂದ ಇದುವರೆಗೆ ಯಾವುದೇ ಹಣ ಬಿಡುಗಡೆ ಯಾಗಿಲ್ಲ. ಆದರೂ ಕೇಂದ್ರದ ಹಣಕ್ಕಾಗಿ ಕಾಯದೆ ರಾಜ್ಯ ಸರ್ಕಾರ ತನ್ನ ಪಾಲಿನಿಂದ ರೈತರಿಗೆ ಮೊದಲ ಕಂತಾಗಿ 2,500 ರೂ. ನೀಡಲು ಕ್ರಮ ಕೈಗೊಂಡಿದೆ. ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿ ತಕ್ಷಣ ಹಣ ಬಿಡುಗಡೆ ಮಾಡಲಾಗುವುದು ಎಂದರು.

**ಕೇಂದ್ರಕ್ಕೆ 11,000–11,500 ಕೋಟಿ ನೆರವಿಗೆ ಮನವಿ:** ಬರ ಪರಿಸ್ಥಿತಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಈಗಾಗಲೇ ಕೇಂದ್ರಕ್ಕೆ ಎರಡು ಮನವಿಪತ್ರಗಳನ್ನು ಸಲ್ಲಿಸಿದೆ. ಅವುಗಳಲ್ಲಿ 177 ತಾಲೂಕುಗಳಿಗೆ ಸಂಬಂಧಿಸಿದಂತೆ ಒಟ್ಟು ಸುಮಾರು 46,000 ಕೋಟಿ ನಷ್ಟವಾಗಿದೆ ಎಂದು ಅಂದಾಜಿಸಲಾಗಿದೆ. ಆದರೆ, ನಷ್ಟದ ಸಂಪೂರ್ಣ ಮೊತ್ತವನ್ನು ಕೇಂದ್ರ ಸರ್ಕಾರದಿಂದ ಪರಿಹಾರವಾಗಿ ಪಡೆಯಲು ಸಾಧ್ಯವಿಲ್ಲ. ಕೇಂದ್ರ ಸರ್ಕಾರ ನಿಗದಿಪಡಿಸಿರುವ ಎನ್‌ಡಿಆರ್‌ಎಫ್ ಮಾರ್ಗಸೂಚಿಗಳ ಪ್ರಕಾರ ಲೆಕ್ಕಾಚಾರ ಮಾಡಿ ಸುಮಾರು 11,000ರಿಂದ 11,500 ಕೋಟಿ ನೆರವು ಕೋರಲಾಗಿದೆ ಎಂದರು.

ನಾವು 46,000 ಕೋಟಿ ನಷ್ಟವಾಗಿದೆ ಎಂದು ಹೇಳಿದ್ದೇವೆ. ಆದರೆ ಕೇಂದ್ರದ ಮಾರ್ಗಸೂಚಿಗಳ ಪ್ರಕಾರ ಎಷ್ಟು ಕೇಳಲು ಅವಕಾಶವಿದೆಯೋ ಅಷ್ಟನ್ನೇ ಕೇಳಬೇಕು. ಅದಕ್ಕಾಗಿ ಸುಮಾರು 11,000 ಕೋಟಿ ಪರಿಹಾರಕ್ಕೆ ಮನವಿ ಮಾಡಿದ್ದೇವೆ. ಕೇಂದ್ರ ಸರ್ಕಾರ ಈಗಾಗಲೇ ತಂಡಗಳನ್ನು ರಾಜ್ಯಕ್ಕೆ ಕಳುಹಿಸಿದ್ದು, ಅವು ಬರಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿವೆ. ತಂಡಗಳು ಕೇಂದ್ರಕ್ಕೆ ವರದಿ ಸಲ್ಲಿಸಿದ ಬಳಿಕ ಎಷ್ಟು ಅನುದಾನ ನೀಡಲಾಗುತ್ತದೆ ಎಂಬುದನ್ನು ಕಾದು ನೋಡಬೇಕಿದೆ ಎಂದು ಹೇಳಿದರು.

### ಕುಡಿಯುವ ನೀರಿನ ಸಮಸ್ಯೆ ಗಂಭೀರ

ಬರದಿಂದ ಬೆಳೆ ಮಾತ್ರವಲ್ಲದೆ ಕುಡಿಯುವ ನೀರಿನ ಸಮಸ್ಯೆಯೂ ತೀವ್ರವಾಗುತ್ತಿದೆ. ಹಲವು ಗ್ರಾಮಗಳಲ್ಲಿ ಕುಡಿಯುವ ನೀರಿನ ಕೊರತೆ ಎದುರಾಗಿದ್ದು, ಪರಿಸ್ಥಿತಿ ಮತ್ತಷ್ಟು ಹದಗೆಡದಂತೆ ಸರ್ಕಾರ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದೆ. ಕುಡಿಯುವ ನೀರು ಸೇರಿ ತುರ್ತು ಬರ ಪರಿಹಾರ ಕಾಮಗಾರಿಗಳಿಗಾಗಿ ಹಣ ಬಿಡುಗಡೆ ಮಾಡಲಾಗಿದೆ. ಜಿಲ್ಲಾಧಿಕಾರಿಗಳ ಬಳಿ ಲಭ್ಯವಿರುವ ಅನುದಾನವನ್ನು ಅಗತ್ಯಕ್ಕೆ ಅನುಗುಣವಾಗಿ ಬಳಸಿಕೊಂಡು ರೈತರು ಮತ್ತು ಸಾರ್ವಜನಿಕರ ನೆರವಿಗೆ ಬರಬೇಕೆಂದು ಸೂಚಿಸಲಾಗಿದೆ ಎಂದು ಪರಮೇಶ್ವರ್ ತಿಳಿಸಿದ್ದಾರೆ.

### ರೈತರ ಸಾಲ ವಸೂಲಿ ಮುಂದೂಡಿಕೆ

ಬರ ಪರಿಸ್ಥಿತಿಯ ಹಿನ್ನೆಲೆಯಲ್ಲಿ ರೈತರ ಸಾಲ ವಸೂಲಿ ಮುಂದೂಡುವಂತೆ ಬ್ಯಾಂಕ್‌ಗಳಿಗೆ ಸೂಚನೆ ನೀಡಲಾಗಿದ್ದು, ಬ್ಯಾಂಕ್‌ಗಳ ನೋಟಿಸ್‌ಗಳಿಗೆ ರೈತರು ಆತಂಕಪಡಬೇಕಿಲ್ಲ. ಸಾಲ ವಸೂಲಿ ಮುಂದೂಡಲು ಸರ್ಕಾರ ಈಗಾಗಲೇ ಸೂಚನೆ ನೀಡಿದೆ. ಖಾಸಗಿ ಹಣಕಾಸು ಸಂಸ್ಥೆಗಳು ಹಾಗೂ ರಾಷ್ಟ್ರೀಕೃತ ಬ್ಯಾಂಕ್‌ಗಳಿಗೂ ಈ ಸಂಬಂಧ ಸೂಚನೆ ನೀಡಲಾಗುತ್ತಿದೆ ಎಂದು ಡಾ.ಜಿ. ಪರಮೇಶ್ವರ್ ತಿಳಿಸಿದ್ದಾರೆ.

## ಚುನಾವಣಾ ಆಯೋಗದ ವಿರುದ್ಧ ಬೆಂಗಳೂರಿನಲ್ಲಿಂದು ಸಿಜೆಪಿ, ಇಂಡಿಯಾ ಒಕ್ಕೂಟ ಪ್ರತಿಭಟನೆ

**ಬೆಂಗಳೂರು, ಅ.7:** ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಅಕ್ರಮಗಳು, ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ಏಕಪಕ್ಷೀಯ ನಿರ್ಧಾರಗಳ ವಿರುದ್ಧವಾಗಿ ದೇಶಾದ್ಯಂತ ಕಾಕ್ರೋಚ್ ಜನತಾ ಪಾರ್ಟಿ (ಸಿಜೆಪಿ), ಇಂಡಿಯಾ ಒಕ್ಕೂಟ, ಇತರ ಸಂಘಟನೆಗಳು ನಿರಂತರ ಪ್ರತಿಭಟನೆ ನಡೆಸುತ್ತಲಿದ್ದು, ಈ ಹೋರಾಟ ರಾಜ್ಯಕ್ಕೂ ವಿಸ್ತರಣೆಯಾಗಿದೆ. ಫ್ರೀಡಂ ಪಾರ್ಕ್‌ನಲ್ಲಿ ಗುರುವಾರ ಬೃಹತ್ ಪ್ರತಿಭಟನೆ ನಡೆಯಲಿದ್ದು,

ರಾಜ್ಯದಲ್ಲೂ ಅಲ್ಲಲ್ಲಿ ಎಸ್‌ಐಆರ್ ಅಕ್ರಮಗಳ ವಿರುದ್ಧ ತೀವ್ರ ಆಕ್ರೋಶ ವ್ಯಕ್ತವಾಗುತ್ತಿದೆ. ರಾಜ್ಯದಲ್ಲಿ ಎಸ್‌ಐಆರ್ ನೆಪದಲ್ಲಿ ಬಿಜೆಪಿಗರು ಅರ್ಹರ ಮತವನ್ನು ಕಸಿಯಲು ಯತ್ನಿಸಿದ ಘಟನೆಗಳು ಒಂದಾದ ಮೇಲೆ ಒಂದು ಹೊರಬೀಳುತ್ತಿದ್ದಂತೆ ಎಸ್‌ಐಆರ್ ವಿರುದ್ಧಕ್ಕೆ ಹೋರಾಟಕ್ಕೆ ಬಲ ತುಂಬಲ ರಾಜ್ಯಕ್ಕೆ ಸಿಜೆಪಿ ನಾಯಕರ ದಂಡೇ ಧಾವಿಸುತ್ತಿದೆ.

ಎಸ್‌ಐಆರ್ ಪ್ರಕ್ರಿಯೆಯಲ್ಲಿನ ಅಕ್ರಮಗಳು ಹಾಗೂ ಲಕ್ಷಾಂತರ ಅರ್ಹ ಮತದಾರರ ಹೆಸರುಗಳನ್ನು ಏಕಾಏಕಿ ಮತದಾರರ ಪಟ್ಟಿಯಿಂದ ಕೈಬಿಟ್ಟಿರುವುದನ್ನು ಖಂಡಿಸಿ ಸಿಜೆಪಿ ಮತ್ತು ವಿವಿಧ ನಾಗರಿಕ ಹಕ್ಕುಗಳ ಒಕ್ಕೂಟಗಳು ಬೃಹತ್ ಜನತಾ ನ್ಯಾಯಾಲಯವನ್ನು ಆಯೋಜಿಸಿವೆ. ಈ ಧರಣಿಯಲ್ಲಿ ಸಿಜೆಪಿ ನಾಯಕ ಅಭಿಜೀತ್ ದೀಪ್ಕೆ, ಸಿಜೆಪಿ ವಕ್ತಾರರಾದ ಆಶುತೋಷ್ ರಾಂಕಾ, ಸೌರವ್ ದಾಸ್, ಅಫ್ರೀನ್ ನವಾಜ್ ಭಾಗವಹಿಸಲಿದ್ದಾರೆ. ಜತೆಗೆ ಎಸ್‌ಐಆರ್ ವಿರುದ್ಧ ಜಾಗೃತಿ ಮೂಡಿಸುತ್ತಿರುವ ನಟ, ಸಾಮಾಜಿಕ ಕಾರ್ಯಕರ್ತ ಪ್ರಕಾಶ್ ರಾಜ್ ಪ್ರತಿಭಟನೆಯ ಆಕರ್ಷಣೆಯಾಗಿದ್ದಾರೆ.

ಚುನಾವಣಾ ಆಯೋಗವು ಕೈಗೊಂಡ ಎಸ್‌ಐಆರ್ ಪ್ರಕ್ರಿಯೆಯ ಹೆಸರಿನಲ್ಲಿ ಬಡವರು, ಕಾರ್ಮಿಕರು, ಅಲ್ಪಸಂಖ್ಯಾತರು, ದಲಿತರು ಮತ್ತು ಶೋಷಿತ ಸಮುದಾಯಗಳ ಮತಗಳನ್ನು ಅಕ್ರಮವಾಗಿ ಡಿಲೀಟ್ ಮಾಡಲಾಗುತ್ತಿದೆ ಎಂಬ ಗಂಭೀರ ಆರೋಪಗಳು ಈಗ ಸ್ಫುಟವಾಗುತ್ತಿದೆ. ಫಾರ್ಮ್ ನಂ. 7ರ ದುರುಪಯೋಗ ಮತ್ತು ಯಾವುದೇ ಪೂರ್ವಭಾವಿ ನೋಟಿಸ್ ನೀಡದೆ ಲಕ್ಷಾಂತರ ಮತದಾರರ ಹಕ್ಕನ್ನು ಕಸಿದುಕೊಂಡಿರುವುದನ್ನು ನಾಗರಿಕ ಮತ ಕಾವಲು ಸಮಿತಿ ರಾಜ್ಯಾದ್ಯಂತ ದಾಖಲೆ ಸಮೇತ ಬಹಿರಂಗಪಡಿಸುತ್ತಿದೆ. ಈ ಜನತಾ ನ್ಯಾಯಾಲಯದಲ್ಲಿ ಕೇವಲ ಭಾಷಣ ಮಾತ್ರವಲ್ಲದೆ, ಎಸ್‌ಐಆರ್ ಪ್ರಕ್ರಿಯೆಯಿಂದ ಮತದಾನದ ಹಕ್ಕು ಕಳೆದುಕೊಂಡಿರುವ ಸಂತ್ರಸ್ತರು ಹಾಜರಾಗಿ ಅಳಲನ್ನು ತೋಡಿಕೊಳ್ಳಲಿದ್ದಾರೆ. ಈ ಜನತಾ ನ್ಯಾಯಾಲಯದ ಪೀಠದಲ್ಲಿ ವಿಶ್ರಾಂತ ನ್ಯಾಯಮೂರ್ತಿಗಳು, ಪ್ರಮುಖ ಹಿರಿಯ ನ್ಯಾಯವಾದಿಗಳು, ಸಾಹಿತಿಗಳು ಹಾಗೂ ಮಾನವ ಹಕ್ಕುಗಳ ಹೋರಾಟಗಾರರು ಉಪಸ್ಥಿತರಿರಲಿದ್ದಾರೆ. ಸಾರ್ವಜನಿಕ ವಿಚಾರಣೆ ನಡೆಸಿದ ನಂತರ, ಜನತಾ ನ್ಯಾಯಾಲಯವು ಎಸ್‌ಐಆರ್ ಪ್ರಕ್ರಿಯೆಯಲ್ಲಿ ನಡೆದಿರುವ ಲೋಪದೋಷಗಳ ಕುರಿತು ತೀರ್ಪು ಅಥವಾ ವರದಿಯನ್ನು ನೀಡಲಾಗುತ್ತದೆ. ಅದನ್ನು ಚುನಾವಣಾ ಆಯೋಗ ಹಾಗೂ ನ್ಯಾಯಾಲಯಗಳ ಗಮನಕ್ಕೆ ತರಲು ನಿರ್ಧರಿಸಲಾಗಿದೆ. ಈ ವಿಶೇಷ ನಡಾವಳಿಯಲ್ಲಿ ರಾಜ್ಯದ ಪ್ರಜ್ಞಾವಂತ ನಾಗರಿಕರು ಪಾಲ್ಗೊಳ್ಳಬೇಕು ಎಂದು ಎಸ್‌ಐಆರ್ ವಿರೋಧಿ ಒಕ್ಕೂಟ ಕರೆ ನೀಡಿದೆ.

## ದೆಹಲಿಯಲ್ಲಿ ಮತ್ತೊಂದು ಐದು ಅಂತಸ್ತಿನ ಕಟ್ಟಡ ಕುಸಿತ



**ನವದೆಹಲಿ, ಅ.7:** ದಕ್ಷಿಣ ದೆಹಲಿಯ ಸತ್ಯನಿಕೇತನದಲ್ಲಿ ಐದು ಅಂತಸ್ತಿನ ಪಿಜಿ ಕಟ್ಟಡವೊಂದು ಕುಸಿದು ಬಿದ್ದು 7 ಮಂದಿ ಮೃತಪಟ್ಟ ಕೇವಲ ಒಂದು ತಿಂಗಳ ನಂತರ, ದೆಹಲಿಯ ಸೀಮಾಪುರಿ ಪ್ರದೇಶದಲ್ಲಿ ಮತ್ತೊಂದು ಐದು ಅಂತಸ್ತಿನ ಕಟ್ಟಡ ಕುಸಿದಿದೆ. ಬುಧವಾರ ಮಧ್ಯಾಹ್ನ 3:30 ರ ಸುಮಾರಿಗೆ ಇಸ್ಗಾ ಮಚ್ಲಿ ಮಂಡಿ ಪ್ರದೇಶದ ಬಳಿ ಈ ಘಟನೆ ಸಂಭವಿಸಿದ್ದು, ಅವಶೇಷಗಳ ಅಡಿಯಲ್ಲಿ ಹಲವರು ಸಿಲುಕಿರುವ ಶಂಕೆ ವ್ಯಕ್ತವಾಗಿದೆ.

ದೆಹಲಿಯ ಸೀಮಾಪುರಿಯ ಈದ್ಗಾ ಮಸೀದಿ ಹಾಗೂ ಮೀನು ಮಾರುಕಟ್ಟೆಯ ಸಮೀಪ ಐದು ಅಂತಸ್ತಿನ ಕಟ್ಟಡ ದಿಢೀರನೆ ಕುಸಿದು ಬಿದ್ದಿದೆ. ಕಟ್ಟಡದ ಮುಂಭಾಗದ ಭಾಗವು ಕುಸಿದುಬಿದ್ದ ಪರಿಣಾಮ ಅವಶೇಷಗಳ ರಾಶಿ ರಸ್ತೆಯವರೆಗೂ ಆವರಿಸಿಕೊಂಡಿದೆ. ಏತನ್ಮಧ್ಯೆ, ದೆಹಲಿ ಅಗ್ನಿಶಾಮಕ ಸೇವೆ ಮತ್ತು ಸ್ಥಳೀಯ ಪೊಲೀಸರಿಗೆ ಮಾಹಿತಿ ಸಿಗುತ್ತಿದ್ದಂತೆಯೇ ಘಟನಾ ಸ್ಥಳಕ್ಕೆ ಧಾವಿಸಿದ್ದು, ತಕ್ಷಣವೇ ರಕ್ಷಣಾ ಕಾರ್ಯಾಚರಣೆಯನ್ನು ಆರಂಭಿಸಿದ್ದಾರೆ. ತೀವ್ರವಾಗಿ ಗಾಯಗೊಂಡಿರುವವರನ್ನು ಚಿಕಿತ್ಸೆಗಾಗಿ ತಕ್ಷಣವೇ ಹತ್ತಿರದ ರಾಜೀವ್ ಗಾಂಧಿ ಆಸ್ಪತ್ರೆಗೆ ರವಾನಿಸಲಾಗುತ್ತಿದೆ.

## ಸತತ ಸೋಲಿನಿಂದ ಹತಾಶೆ: ಕಾಂಗ್ರೆಸ್‌ನಿಂದ ಸಿಇಸಿ ವಿರುದ್ಧ ಹೋರಾಟ



■ ಕೇಂದ್ರ ಸಚಿವ ಪ್ರಲ್ಹಾದಜೋಶಿ ಟೀಕೆ

**ಹುಬ್ಬಳ್ಳಿ, ಅ.7:** ಲೋಕಸಭೆ ಹಾಗೂ ವಿವಿಧ ರಾಜ್ಯಗಳ ವಿಧಾನಸಭೆ ಚುನಾವಣೆಗಳಲ್ಲಿ ಸತತ ಸೋಲುಗಳಿಂದ ಹತಾಶರಾಗಿರುವ ರಾಹುಲ್ ಗಾಂಧಿ ಅವರು, ಈಗ ಕೇಂದ್ರ ಚುನಾವಣೆ ಆಯೋಗದ ವಿರುದ್ಧ ಹೋರಾಟ ಮಾಡುತ್ತಿದ್ದಾರೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಟೀಕಿಸಿದರು.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿವಿಧ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷ ಸೋಲುವುದಕ್ಕೆ ಕೇಂದ್ರ ಚುನಾವಣೆ ಆಯೋಗವೇ ಕಾರಣ ಎಂಬ ಆರೋಪ ಸತ್ಯಕ್ಕೆ ದೂರವಾಗಿದೆ. ರಾಹುಲ್ ಗಾಂಧಿ ಅವರ ವೈಫಲ್ಯ ಮುಚ್ಚಲು ಆಯೋಗದ ವಿರುದ್ಧ ಹೋರಾಟ ಮಾಡಲಾಗುತ್ತಿದೆ ಎಂದು ದೂರಿದರು.

ದೇಶದಲ್ಲಿ ಎಸ್‌ಐಆರ್ ಹೆಸರಿನಲ್ಲಿ 13 ಕೋಟಿ ಮತದಾರರನ್ನು ಮತದಾರರ ಪಟ್ಟಿಯಿಂದ ಹೊರ ಹಾಕಲಾಗಿದೆ ಎಂಬ ರಾಹುಲ್ ಗಾಂಧಿ ಅವರು ಆರೋಪ ಸತ್ಯಕ್ಕೆ ದೂರವಾಗಿದೆ. ಇದರಲ್ಲಿ 3 ಕೋಟಿ ಮತದಾರರು ಮರಣ ಹೊಂದಿದ್ದು, 2.80 ಕೋಟಿ ಮತದಾರರಲ್ಲಿ ಕೆಲವರು ಸಂಪರ್ಕಕ್ಕೆ ಸಿಗುತ್ತಿಲ್ಲ. ಅಧಿಕಾರಿಗಳು ಇಂತಹವರನ್ನು ಪತ್ತೆ ಹಚ್ಚುವ ಕೆಲಸ ಮಾಡಬೇಕು. 6.3 ಕೋಟಿ ಮತದಾರರು ಬೇರೆ ಕಡೆಗೆ ಶಿಫ್ಟ್ ಆಗಿದ್ದಾರೆ ಎಂದರು.

ದೇಶದಲ್ಲಿ ಯಾರಿಗೆ ಬೇಕಾದರೂ ಮತದಾನದ ಹಕ್ಕು ನೀಡುವುದಕ್ಕೆ ಆಗುವುದಿಲ್ಲ. ಅದರಲ್ಲಿಯೂ ಬಾಂಗ್ಲಾದೇಶ ಹಾಗೂ ಪಾಕಿಸ್ತಾನದವರಿಗೆ ಮತದಾನ ಹಕ್ಕು ನೀಡುವುದಕ್ಕೆ ಆಗುತ್ತದೆಯೇ, ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರವಿದ್ದು, ಎಸ್‌ಐಆರ್ ಪ್ರಕ್ರಿಯೆ ಸರಿಯಾಗಿ ನಡೆಸಬೇಕು ಎಂದು ಸಲಹೆ ನೀಡಿದರು.

# ಭದ್ರಾ ಮೇಲ್ದಂಡೆ: ಬಜೆಟ್‌ನಲ್ಲಿ ಘೋಷಿಸಿರುವ 5300 ಕೋಟಿ ರೂ. ತಕ್ಷಣ ಬಿಡುಗಡೆ ಮಾಡಿ

### ಕೇಂದ್ರ ಸರ್ಕಾರಕ್ಕೆ ಕೌಶಲ್ಯ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಮುರಳೀಧರ ಹಾಲಪ್ಪ ಒತ್ತಾಯ

**ಶಿರಾ, ಅ.7:** ಕೇಂದ್ರ ಸರ್ಕಾರ ತನ್ನ ಬಜೆಟ್ ನಲ್ಲಿ ಭದ್ರ ಮೇಲ್ದಂಡೆ ಯೋಜನೆ ಅನುಷ್ಠಾನಕ್ಕಾಗಿ ಘೋಷಣೆ ಮಾಡಿದ್ದ 5300 ಕೋಟಿಗಳನ್ನು ತಕ್ಷಣ ಬಿಡುಗಡೆಗೊಳಿಸಬೇಕು. ಸಂಸದರು ಕೇಂದ್ರ ಸರ್ಕಾರವನ್ನು ಸಂಸತ್‌ನಲ್ಲಿ ಈ ಬಗ್ಗೆ ಏರುಧ್ವನಿಯಲ್ಲಿ ಪ್ರಶ್ನಿಸುವ ಮೂಲಕ ಒತ್ತಡ ಹೇರುವ ಕೆಲಸ ಮಾಡಬೇಕು ಎಂದು ಕೌಶಲ್ಯ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಮುರಳೀಧರ ಹಾಲಪ್ಪ ಒತ್ತಾಯಿಸಿದರು.

ಶಿರಾ ತಾಲೂಕಿನಲ್ಲಿ ಭದ್ರಾ ಮೇಲ್ದಂಡೆ ಯೋಜನೆ ಕಚೇರಿಯಲ್ಲಿ ಅಚ್ಚುಕಟ್ಟಿನ ರೈತರ ಸಭೆ ನಡೆಸಿ ಹಕ್ಕೊತ್ತಾಯ ಮಾಡುವ ಮೂಲಕ, ತುಮಕೂರು ಜಿಲ್ಲೆಯ ಗಡಿ ಭಾಗಗಳಾದ ಚಿಕ್ಕನಾಯಕನಹಳ್ಳಿ, ಶಿರಾ, ಮಧುಗಿರಿ, ಪಾವಗಡ ಸೇರಿ ತುಮಕೂರು ಜಿಲ್ಲೆಯ ರೈತರ ಬಾಳು ಹಸನಾಗಲು ಇದರಿಂದ ನೆರವಾಗುತ್ತದೆ ಎಂದು ತಿಳಿಸಿದರು.

ತುಮಕೂರು ಜಿಲ್ಲೆಗೆ ಶಾಶ್ವತ ನದಿ ನೀರು ಇಲ್ಲದೆ ಇರುವ ಕಾರಣ ಅತಿ ಹೆಚ್ಚಿನ ಪ್ರದೇಶ ಮಳೆಯನ್ನೇ ನೆಚ್ಚಿಕೊಂಡಿದೆ, ಈ ಬಾರಿ ಎಲ್ ನೀನೊ ಪ್ರಭಾವದಿಂದಾಗಿ ಮುಂಗಾರು ಕೈ ಕೊಟ್ಟಿದ್ದು ಎಲ್ಲಾ ರೈತರ ಕೊಳವೆ ಬಾವಿಗಳು ಬತ್ತಿ ಹೋಗಿವೆ. ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಕೊರೆಸಿದ ಕೊಳವೆಬಾವಿಗಳು ಕೈಕೊಟ್ಟ ಪರಿಣಾಮ ರೈತ ಕಂಗಾಲಾಗಿದ್ದಾರೆ. ಇದಕ್ಕೆ ಶಾಶ್ವತ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಭದ್ರಾ ಮೇಲ್ದಂಡೆ ಯೋಜನೆ ಜಾರಿಗೆ ತರಲು ಕೆಲಸ ಮಾಡಬೇಕಿದೆ. ಹೇಮಾವತಿ ನೀರು ಹಂಚಿಕೆಯಾಗದ ಭಾಗಗಳಲ್ಲಿ ಗ್ರಾಮಗಳಿಗೆ ಕೆರೆಗಳಿಗೆ ಭದ್ರ ಮೇಲ್ದಂಡೆ ನೀರು ಹಂಚಿಕೆಯಾಗಬೇಕು ನಮ್ಮೂರಿಗೆ ನೀರು ಬರುತ್ತದೆ ಎಂಬ ಕಾರಣ ಕೊಟ್ಟು ರೈತರು ತಮ್ಮ ಜಮೀನುಗಳನ್ನು ಈ ಯೋಜನೆಗೆ ಬಿಟ್ಟು ಕೊಟ್ಟಿದ್ದು ಪರಿಹಾರ ಪಡೆಯದೆ ಕಾಮಗಾರಿಗೆ ಸಹಕರಿಸಿದ್ದಾರೆ ರೈತರಿಗೆ ಕೊಡಬೇಕಾದ ಪರಿಹಾರಗಳನ್ನು ಈಗ ಒದಗಿಸುವ ಕೆಲಸ ಅಧಿಕಾರಿಗಳು ಮಾಡಬೇಕಿದೆ ಮಾನ್ಯ ಮುಖ್ಯಮಂತ್ರಿಗಳು ಆದಂತಹ ಡಿ.ಕೆ ಶಿವಕುಮಾರ್ ರವರ ಸರ್ಕಾರ ಸುಭದ್ರವಾಗಿದ್ದು ಮುಖ್ಯಮಂತ್ರಿಗಳು ರೈತರ ಪರವಾದ ಧೋರಣೆ ಹೊಂದಿದ್ದಾರೆ ಸರ್ಕಾರದ ಮಟ್ಟದಲ್ಲಿ ಚರ್ಚಿಸಿ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಚಿಕ್ಕನಾಯಕನಹಳ್ಳಿ ಕ್ಷೇತ್ರದ ಮಾಜಿ ಶಾಸಕ ಕೆ. ಎಸ್. ಕಿರಣ್‌ಕುಮಾರ್ ಮಾತನಾಡಿ, ಮಳೆ ಆಶ್ರಿತ ಪ್ರದೇಶಗಳಲ್ಲಿ ಭದ್ರ ಮೇಲ್ದಂಡೆ ಹರಿಸುವ ಮೂಲಕ ಕುಡಿಯುವ ನೀರಿಗೆ ಹಾಗೂ ರೈತರ ಪಾಲಿಗೆ ಈ ಯೋಜನೆ



ಆಶಾಕಿರಣವಾಗಲಿದೆ ಕಾಮಗಾರಿಯ ವಿಳಂಬ ಧೋರಣೆಯಿಂದಾಗಿ ರೈತರು ಪರಿತಪಿಸುವಂತೆ ಅಧಿಕಾರಿಗಳು ಆದಷ್ಟು ಶೀಘ್ರವಾಗಿ ಕಾಮಗಾರಿ ಪೂರ್ಣಗೊಳಿಸಬೇಕು ಹಾಗೂ ಯಾವ ಯಾವ ಕೆರೆಗಳಿಗೆ ಹೇಮಾವತಿ ಯೋಜನೆಯಲ್ಲಿ ನೀರು ಹರಿಸಲಾಗುತ್ತಿದೆ ಎಂದು ಪರಿಶೀಲಿಸಿ ಉಳಿದ ಕೆರೆಗಳಿಗೆ ಭದ್ರಾ ಮೇಲ್ದಂಡೆ ಮೂಲಕ ನೀರು ಹರಿಸುವ ಕೆಲಸವಾಗಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಎಚ್.ಲಿಂಗಪ್ಪ, ಚಂದ್ರಶೇಖರ್, ನೇರಳಗುಡ್ಡ ಶಿವಕುಮಾರ್, ಎಂಆರ್ ಶಶಿಧರ ಗೌಡ, ಸೂಡ ಮಾಜಿ ಅಧ್ಯಕ್ಷ ಗುಳಿಗೆನಹಳ್ಳಿ ನಾಗರಾಜು, ಮುಕುಂದಪ್ಪ, ಷಣ್ಮುಖಪ್ಪ, ಮುದ್ದು ರಂಗೇಗೌಡ ಕಾಲೇಜಿನ ರಂಗನಾಥ್, ಎಸ್ ಎಲ್ ಗೋವಿಂದರಾಜು, ಎಚ್ ಗುರುಮೂರ್ತಿ ಗೌಡ, ಜಯರಾಮಯ್ಯ, ಪುಟ್ಟ ಕಾಮಣ್ಣ, ಶೇಷ ನಾಯ್ಕ, ಹೊಸ ಪಾಳ್ಯ ಸತ್ಯನಾರಾಯಣ, ಜೈ ಪ್ರಕಾಶ ಇತರರಿದ್ದರು.

### ಭದ್ರಾ ಮೇಲ್ದಂಡೆ: ರಾಷ್ಟ್ರೀಯ ಯೋಜನೆಯನ್ನಾಗಿ ಘೋಷಿಸಿ

ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಘೋಷಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, 2023–24ನೇ ಸಾಲಿನ ಕೇಂದ್ರ ಆಯವ್ಯಯದಲ್ಲಿ ಸದರಿ ಯೋಜನೆಗೆ ರೂ.5300 ಕೋಟಿಗಳ ಅನುದಾನವನ್ನು ಘೋಷಣೆ ಮಾಡಲಾಗಿರುತ್ತದೆ. ಸದರಿ ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಘೋಷಿಸುವ ಪ್ರಕ್ರಿಯೆ ವಿಳಂಭವಾಗಿರುವ ಹಿನ್ನೆಲೆಯಲ್ಲಿ ಯೋಜನೆಯನ್ನು ಅತೀ ಶೀಘ್ರವಾಗಿ ಪೂರ್ಣಗೊಳಿಸುವ ಉದ್ದೇಶದಿಂದ ಸದರಿ ರೂ.5,300 ಕೋಟಿಗಳ ಧನ ಸಹಾಯವನ್ನು ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ – ಆಕ್ಸಿಲರೇಟೆಡ್ ಇರಿಗೇಷನ್ ಬೆನಿಫೀಟ್ ಪ್ರೋಗ್ರಾಂ (ಪಿಎಂಕೆಎಸ್‌ವೈ – ಎಐಬಿಪಿ) ಅಡಿ ಬಿಡುಗಡೆಗೊಳಿಸಲು ದಿ:16.08.2023, ದಿ:19.06.2024, ದಿ:03.08.2024 ಮತ್ತು ದಿ:28.10.2024ರ ಪತ್ರಗಳಲ್ಲಿ ಕಾರ್ಯದರ್ಶಿಗಳು, ಕೇಂದ್ರ ಜಲಶಕ್ತಿ ಮಂತ್ರಾಲಯಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. ಈ ಕುರಿತು ನೀರಾವರಿ ಹೋರಾಟ ಸಮಿತಿವತಿಯಿಂದ ಸನ್ಮಾನ್ಯ ಕೇಂದ್ರ ಸಚಿವರು, ಜಲಶಕ್ತಿ ಸಚಿವಾಲಯ, ಭಾರತ ಸರ್ಕಾರ ಇವರೊಂದಿಗೆ ದಿ:25.02.2025 ರಂದು ಮತ್ತು 30.05.26 ರಂದು ಬೇಟಿ ಮಾಡಿ ಆಗ್ರಹಿಸಲಾಗಿದೆ.

## ನಿತ್ಯ ಪಂಚಾಂಗ 8.10.2026 ಗುರುವಾರ



**ಶ್ರೀಶಕ 1949 ಶ್ರೀ ಪರಾಭವ ನಾಮ ಸಂವತ್ಸರ, ದಕ್ಷಿಣಾಯಣ ಶರದ್ ಋತು, ಚಾಂದ್ರಮಾನ ಶ್ರಾವಣ-ಆಶ್ವಯುಜ ಮಾಸ**

**ಭಾದ್ರಪದ ಬಹುಳ, ತ್ರಯೋದಶಿ, ಪುಬ್ಬ ನಕ್ಷತ್ರ, ಪ್ರದೋಷ, ಮಾಸಶಿವರಾತ್ರಿ, ಹರಿಹರ ಶಿವಾನಂದ ಆರಾಧನೆ, ವಿಶ್ವ ದೃಷ್ಟಿ ದಿನ, ಕಲಿಯುಗಾದಿ**

| ದಿನ | ರಾಹುಕಾಲ | ಯಮಗಂಡ | ಗುಳಿಕಕಾಲ |
|---|---|---|---|
| ಭಾನು | ಸ. 5.04– 6.33 | 12.00– 1.30 | 3.00– 4.00 |
| ಸೋಮ | ಬೆ. 7.20– 9.04 | 10.30–12.00 | 1.30– 3.00 |
| ಮಂಗಳ | ಮ. 3.25– 4.59 | 9.00–10.30 | 12.00– 1.30 |
| ಬುಧ | ಮ.12.16– 1.50 | 7.30– 9.00 | 10.30– 12.00 |
| ಗುರು | ಮ. 1.50– 3.29 | 6.00– 7.30 | 9.00– 10.30 |
| ಶುಕ್ರ | ಬೆ.10.42–12.16 | 3.00– 4.30 | 7.30– 9.00 |
| ಶನಿ | ಬೆ. 9.07–10.41 | 1.30– 3.00 | 6.00– 7.30 |

## ಎಚ್‌ಡಿಕೆ ಸ್ಟಿಂಗ್ ಆಪರೇಷನ್ ಪಿತಾಮಹ: ಸಚಿವ ಬಾಲಕೃಷ್ಣ ವ್ಯಂಗ್ಯ

**ಬೆಂಗಳೂರು, ಅ.7:** ಸ್ಟಿಂಗ್ ಆಪರೇಷನ್, ಪೆನ್‌ಡ್ರೈವ್ ಪಿತಾಮಹ ಕುಮಾರಸ್ವಾಮಿ ಎಂದು ಸಚಿವ ಹೆಚ್.ಸಿ. ಬಾಲಕೃಷ್ಣ ವ್ಯಂಗ್ಯವಾಡಿದ್ದಾರೆ. ಹೈಕಮಾಂಡ್‌ಗೆ ಸ್ಟಿಂಗ್ ಆಪರೇಷನ್ ವೀಡಿಯೋ ಕೊಟ್ಟು ಡಿಕೆಶಿ ಸಿಎಂ ಆಗಿದ್ದಾರೆ ಎಂಬ ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ಡಿ.ಕೆ ಶಿವಕುಮಾರ್ ಅವರು ಕ್ಯಾಬಿನೆಟ್ ಸಭೆಯಲ್ಲಿ ಸಚಿವರಿಗೆ ಎಚ್ಚರಿಕೆ ನೀಡಿದ್ದಾರೆ. ಹುಷಾರಾಗಿರಿ, ಎಚ್ಚರದಿಂದ ಇರಿ ಎಂದು ಹೇಳಿದ್ದಾರೆ. ಆದರೆ, ಕುಮಾರಸ್ವಾಮಿಗೆ ಹೆದರಿಕೊಳ್ಳಿ ಎಂದು ಹೇಳಿಲ್ಲ ಎಂದರು.

## ಸಾರ್ವಜನಿಕ ಸೇವೆಯಲ್ಲಿ ಮೋದಿ 25 ವರ್ಷ: ಬಿಜೆಪಿಯಿಂದ ಜ್ಯೋತಿಯಾತ್ರೆ



**ಬೆಂಗಳೂರು, ಅ.7:** ಸಾರ್ವಜನಿಕ ಸೇವೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಇಂದಿಗೆ 25 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ಬಿಜೆಪಿ ಮುಖಂಡರು ಜ್ಯೋತಿಯಾತ್ರೆ ನಡೆಸಿ ಬೆಂಬಲ ಸೂಚಿಸಿದರು.

ಮೆರವಣಿಗೆಯಲ್ಲಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಸಂಸದರಾದ ಪಿ.ಸಿ.ಮೋಹನ್, ತೇಜಸ್ವಿ ಸೂರ್ಯ, ಶಾಸಕರಾದ ಸಿ.ಎನ್.ಅಶ್ವತ್ಥನಾರಾಯಣ, ಗೋಪಾಲಯ್ಯ, ಸಿ.ಕೆ.ರಾಮಮೂರ್ತಿ, ಮಾಜಿ ಶಾಸಕ ಸುರೇಶ್ ಕುಮಾರ್, ಮುಖಂಡರಾದ ಜಗ್ಗೇಶ್, ಸಪ್ತಗಿರಿಗೌಡ ಸೇರಿದಂತೆ ಪಕ್ಷದ ಕಾರ್ಯಕರ್ತರು ಭಾಗವಹಿಸಿದ್ದರು. ಯಾತ್ರೆಗೂ ಮುನ್ನ ಸಚಿವೆ ಶೋಭಾ ಕರಂದ್ಲಾಜೆ ಅವರು ಪ್ರತಿಜ್ಞಾ ವಿಧಿ ಬೋಧಿಸಿದರು.

## ಮೋದಿ ಆಡಳಿತದಲ್ಲಿ ದೇಶಕ್ಕೆ ಜಾಗತಿಕ ಮನ್ನಣೆ: ಸಂಸದ ಜಗದೀಶ ಶೆಟ್ಟರ್

### ವಿಕಸಿತ ಭಾರತ ಸೇವಾ ಸಂಕಲ್ಪ ಯಾತ್ರೆಯಲ್ಲಿ ಭಾಗಿ



**ಬೆಳಗಾವಿ, ಅ.7:** 12 ವರ್ಷ ಪ್ರಧಾನಿಯಾಗಿ ಮತ್ತು 13 ವರ್ಷ ಗುಜರಾತ್ ಮುಖ್ಯಮಂತ್ರಿಯಾಗಿ ಕೆಲಸ ಮಾಡಿರುವ ನರೇಂದ್ರ ಮೋದಿ ಅವರು, ಭಾರತವನ್ನು ಬಲಾಢ್ಯ ರಾಷ್ಟ್ರವಾಗಿ ರೂಪಿಸಿದ್ದಾರೆ ಎಂದು ಸಂಸದ ಜಗದೀಶ ಶೆಟ್ಟರ್ ಶ್ಲಾಘಿಸಿದರು.

ಇಲ್ಲಿನ ವ್ಯಾಕ್ಸಿನ್ ಡಿಪೊ ಮೈದಾನದಲ್ಲಿ ಬುಧವಾರ ನಡೆದ 'ವಿಕಸಿತ ಭಾರತ ಸೇವಾ ಸಂಕಲ್ಪ ಯಾತ್ರೆ'ಯಲ್ಲಿ ಅವರು ಮಾತನಾಡಿದರು. 'ಮೋದಿ ನೀಡಿದ ಜನಪರ ಆಡಳಿತದಾಗಿ ಭಾರತಕ್ಕೆ ಜಾಗತಿಕ ಮಟ್ಟದಲ್ಲಿ ಉನ್ನತ ಗೌರವ ಸಿಕ್ಕಿದೆ. ಆರ್ಥಿಕತೆಯಲ್ಲಿ ನಾಲ್ಕನೇ ಸ್ಥಾನಕ್ಕೇರಿದೆ. ಜಮ್ಮು-ಕಾಶ್ಮೀರದಲ್ಲಿ ನಕ್ಸಲ್ ಹಾವಳಿ ನಿರ್ಮೂಲನೆಯಾಗಿ, ಮತ್ತೆ ಶಾಂತಿ ನೆಲೆಸಿದೆ. ದೇಶಕ್ಕಾಗಿ 24/7 ಮಾದರಿ ಯಲ್ಲಿ ಕೆಲಸ ಮಾಡುತ್ತಿರುವ ನಾಯಕನೆಂದರೆ ಮೋದಿ' ಎಂದು ಶ್ಲಾಘಿಸಿದರು.

ಒಂದೆಡೆ ಸತತ 12 ವರ್ಷಗಳಿಂದ ದೇಶದ ಅಭಿವೃದ್ಧಿಗಾಗಿ ಮೋದಿ ಶ್ರಮಿಸುತ್ತಿದ್ದರೆ, ಮತ್ತೊಂದೆಡೆ ದೇಶಕ್ಕೆ ಒಂದೂ ದಿನವೂ ಆಡಳಿತ ನೀಡದ ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಅವರು ದುರುದ್ದೇಶದಿಂದ ಮೋದಿ ಅವರನ್ನು ಟೀಕಿಸುತ್ತಿದ್ದಾರೆ. ಬಿಜೆಪಿ ಟೀಕಿಸಲು ಕಾಂಗ್ರೆಸ್ ಬಳಿ ಯಾವುದೇ ವಿಷಯ ಇಲ್ಲ. ಹಾಗಾಗಿ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ ಎಂದು ದೂರಿದರು.

## ರಾಹುಲ್‌ಗಾಂಧಿ ಹೋರಾಟಕ್ಕೆ ಸಂಪೂರ್ಣ ಬೆಂಬಲ: ಸಚಿವ ಈಶ್ವರ ಖಂಡ್ರೆ



**ಹಾಸನ, ಅ.7:** ಭವಿಷ್ಯದ ನಾಯಕ ರಾಹುಲ್ ಗಾಂಧಿ ನ್ಯಾಯ, ಪ್ರಜಾಪ್ರಭುತ್ವ ಹಾಗೂ ಸಂವಿಧಾನದ ರಕ್ಷಣೆಗಾಗಿ ಹೋರಾಟ ನಡೆಸುತ್ತಿದ್ದಾರೆ. ಅವರ ಹೋರಾಟಕ್ಕೆ ಸಂಪೂರ್ಣ ಬೆಂಬಲವಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಸ್‌ಐಆರ್ ಮೂಲಕ ಲಕ್ಷಾಂತರ ಜನರ ಮತದಾನದ ಹಕ್ಕು ಮೊಟಕುಗೊಳಿಸಲು ಬಿಜೆಪಿ ಸರ್ಕಾರ ಚುನಾವಣಾ ಆಯೋಗವನ್ನು ಬಳಸಿಕೊಂಡಿದೆ. ಪಶ್ಚಿಮ ಬಂಗಾಳ ಹಾಗೂ ಬಿಹಾರದಲ್ಲಿ ಏನಾಗಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಈ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿದೆ. ಮತದಾರರ ಪಟ್ಟಿ ಸಿದ್ಧಪಡಿಸುವ ಪ್ರಕ್ರಿಯೆಯಲ್ಲಿ ಸಂಪೂರ್ಣ ಪಾರದರ್ಶಕತೆ ಇರಬೇಕು. ನಾಗರಿಕರ ಮೂಲಭೂತ ಹಕ್ಕಿಗೆ ಚ್ಯುತಿ ಉಂಟಾಗುವ ರೀತಿಯಲ್ಲಿ ಮತದಾನದ ಹಕ್ಕು ಕಸಿದುಕೊಳ್ಳಲು ಕಾಂಗ್ರೆಸ್ ಅವಕಾಶ ನೀಡುವುದಿಲ್ಲ ಎಂದರು. ಚುನಾವಣಾ ಆಯೋಗ ಅಕ್ರಮ ಎಸಗಿದೆ. ಆಯುಕ್ತರು ಒಂದು ಪಕ್ಷದ ಏಜೆಂಟರಂತೆ ವರ್ತಿಸುತ್ತಿದ್ದಾರೆ. ಅವರು ರಾಜೀನಾಮೆ ನೀಡಬೇಕು. ಅಕ್ರಮದಲ್ಲಿ ಭಾಗಿಯಾದವರ ವಿರುದ್ಧ ಕ್ರಮ ಜರುಗಬೇಕು ಎಂದು ಆಗ್ರಹಿಸಿದರು.ನನ್ನ ಮತಕ್ಷೇತ್ರ ಭಾಲ್ಕಿಯಲ್ಲಿ ಎಸ್‌ಐಆರ್ ಬಳಿಕ 3,200 ಜನರ ಹೆಸರು ಅಳಿಸಲಾಗಿದೆ. ಸಂಬಂಧಪಟ್ಟವರು ಅಫಿಡವಿಟ್ ನೀಡಿದ್ದಾರೆ. ಫಾರಂ ನಂಬರ್ 7 ಮುದ್ರಿಸಲಾಗಿದೆ. ಜೀವಂತವಾಗಿ ಇರುವವರನ್ನು ಕೊಂದಂತೆ ಮಾಡುತ್ತೀರಾ, ಇದನ್ನು ಮಾಡಿದವರು ಯಾರು, ಇದು ಅಪರಾಧವಲ್ಲವೇ, ಅವರ ವಿರುದ್ಧ ಎಫ್‌ಐಆರ್ ದಾಖಲಿಸಿದರೆ ರಾಜಕೀಯ ಬಣ್ಣ ಬಳಿಯಲಾಗುತ್ತಿದೆ ಎಂದರು.

ಬಿಜೆಪಿಯ ಮುಖಂಡರು ತಾವು ಮಾಡಿದ್ದೇ ಸತ್ಯ ಎಂಬ ರೀತಿಯಲ್ಲಿ ಪ್ರತಿಪಾದಿಸುತ್ತಿರುವುದು ಹಲವು ಪ್ರಶ್ನೆಗಳಿಗೆ ಕಾರಣವಾಗಿದೆ. ಇದು ಸಂಘಟಿತ ಅಪರಾಧವಾಗಿದ್ದು, ಇದರಲ್ಲಿ ಭಾಗಿಯಾದ ಎಲ್ಲರ ವಿರುದ್ಧ ಕಾನೂನು ಕ್ರಮ ಆಗಬೇಕು ಎಂದರು.

## ಬಯೋಡೀಸೆಲ್ ಉತ್ಪಾದನಾ ಘಟಕಕ್ಕೆ ಬೇಕಾಗುವ ಕಚ್ಚಾವಸ್ತುಗಳ ಪೂರೈಕೆ ಕುರಿತು ಸಮಾಲೋಚನೆ




**ಬೆಂಗಳೂರು, ಅ.7:** ರಾಜ್ಯದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವರಾದ ಡಾ.ಯು.ಟಿ.ಖಾದರ್ ಫರೀದ್ ಅವರು ಬುಧವಾರ ವಿಧಾನಸೌಧದ ಸಚಿವರ ಕಾರ್ಯಾಲಯದಲ್ಲಿ ಆಯೋಜಿಸಲಾಗಿದ್ದ ಸಭೆಯಲ್ಲಿ ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾದ ಎಸ್ ಈ ಸುಧೀಂದ್ರ ಮತ್ತು ಮಂಡಳಿ ಹಾಗೂ ಇಲಾಖಾ ಅಧಿಕಾರಿಗಳು ಜೈವಿಕ ಇಂಧನ ಉತ್ಪಾದನೆಗೆ ಮುಖ್ಯ ಕಚ್ಚಾ ವಸ್ತುವಾಗಿರುವ ಕರಿದ ಎಣ್ಣೆಯನ್ನು ಬಯೋಡೀಸೆಲ್ ಉತ್ಪಾದನೆ ಘಟಕಗಳಿಗೆ ಮಾತ್ರ ಪೂರೈಕೆಯಾಗುವಂತೆ ಮಾಡುವ ಸಂಬಂಧ ನಿಯಾಮವಳಿಗಳನ್ನು ರೂಪಿಸಿ ಅನುಷ್ಠಾನಗೊಳಿಸುವ ಕುರಿತು ಚರ್ಚಿಸಿದರು.

ಮಂಡಳಿಯ ಅಧ್ಯಕ್ಷರು ಮಂಡಳಿ ಈಗಾಗಲೇ ಜೈವಿಕ ಇಂಧನ ನೀತಿ ರಚನೆಯನ್ನು ರಾಜ್ಯದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಮಾರ್ಗದರ್ಶನದಲ್ಲಿ ಕೈಗೊಂಡಿದ್ದು ಈ ನೀತಿಯು ಎಲ್ಲಾ ಜೈವಿಕ ಇಂಧನ ಕಾರ್ಯಯೋಜನೆಗಳ ಅನುಷ್ಠಾನದಲ್ಲಿ ಬಂಡವಾಳ ಹೂಡಿಕೆಗೆ ಅವಕಾಶ ಕಲ್ಪಿಸಲಿದ್ದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಸಹಕಾರದಿಂದ ಕರಿದ ಎಣ್ಣೆ ಪೂರೈಕೆ ಮೌಲ್ಯವರ್ಧನೆಗೆ ಪೂರಕವಾಗಲಿದೆ ಎಂದರು. ರಾಜ್ಯದ ಟೈರ್-1 ಪಟ್ಟಣ, ನಗರ ಪ್ರದೇಶಗಳಲ್ಲಿ ಹೋಟೆಲ್, ರೆಸ್ಟೋರೆಂಟ್ ಹಾಗೂ ಆಹಾರ ಉತ್ಪಾದನಾ ಘಟಕಗಳಲ್ಲಿ, ಅಡುಗೆ ಎಣ್ಣೆಯನ್ನು ಪದೇ ಪದೇ ಬಳಸುತ್ತಿದ್ದು, ಈ ರೀತಿ ಉಪಯೋಗಿಸಿದ ಎಣ್ಣೆಯಿಂದ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮಗಳು ಉಂಟಾಗುವುದನ್ನು ಸಚಿವರ ಗಮನಕ್ಕೆ ತಂದು, ಈ ಕರಿದ ಎಣ್ಣೆಯು ಬೇರೆ ಬೇರೆ ಸಣ್ಣ ಸಣ್ಣ ಹೋಟೆಲ್‌ಗಳಿಗೆ ಪೂರೈಕೆಯಾಗುತ್ತಿರುವುದರ ಕುರಿತು ಮನವರಿಕೆ ಮಾಡಿಕೊಟ್ಟರು.

ಈ ರೀತಿ ಪೂರೈಕೆಯಾಗುವುದನ್ನು ತಡೆಗಟ್ಟಿ, ಕರಿದ ಎಣ್ಣೆಯು ಬಯೋಡೀಸೆಲ್ ಉತ್ಪಾದನಾ ಕೈಗಾರಿಕೆಗಳಿಗೆ ಪೂರೈಕೆಯಾಗುವಂತೆ ಮಾಡಲು ಕಟ್ಟುನಿಟ್ಟಿನ ಕಾನೂನು ರೂಪಿಸಿ ಪರಿಣಾಮಕಾರಿಯಾಗಿ ಕೂಡಲೇ ಅನುಷ್ಠಾನಗೊಳಿಸುವುದು ಅಗತ್ಯವಾಗಿದೆ ಎಂದು ಪ್ರತಿಪಾದಿಸಿದರು. ಈಗಾಗಲೇ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯು ರಾಜ್ಯದಲ್ಲಿ ರೀಟೆಲ್ ಔಟ್‌ಲೆಟ್‌ಗಳ ಮೂಲಕ ಬಯೋಡೀಸೆಲ್ ವಿತರಣೆಗೆ ಗೆಜೆಟ್ ನೋಟಿಫಿಕೇಷನ್ ಮೂಲಕ ಅವಕಾಶ ನೀಡಿರುವುದನ್ನು ಪ್ರಸ್ತಾಪಿಸಿದರು. ಈ ರೀತಿ ಕ್ರಮ ಕೈಗೊಳ್ಳುವುದರಿಂದ ಹೆಚ್ಚಿನ ಪ್ರಮಾಣದಲ್ಲಿ ಕರಿದ ಎಣ್ಣೆಯು ಬಯೋಡೀಸೆಲ್ ಉತ್ಪಾದನಾ ಘಟಕಗಳಿಗೆ ಪೂರೈಕೆಯಾಗಿ, ಹೆಚ್ಚಿನ ಪ್ರಮಾಣದಲ್ಲಿ ಬಯೋಡೀಸೆಲ್ ಉತ್ಪಾದನೆಯಾಗಿ ರಾಜ್ಯದಲ್ಲಿ ಇಂಧನ ಸ್ವಾವಲಂಬನೆಗಾಗಿ ಮಂಡಳಿ ಕಾರ್ಯ ಯೋಜನೆಗಳನ್ನು ಅನುಷ್ಠಾನಗೊಳಿಸಲು ನೆರವಾಗಲಿದೆ ಎಂದು ಆಶಿಸಿದರು. ಈ ಸಂಬಂಧ ಸಚಿವರು ಸಕಾರಾತ್ಮಕ ವಾಗಿ ಸ್ಪಂದಿಸಿ ರಾಜ್ಯದಲ್ಲಿ ಕರಿದ ಎಣ್ಣೆ ಸಂಗ್ರಹಣೆ, ಶೇಖರಣೆ ಹಾಗೂ ಬಯೋಡೀಸೆಲ್ ಉತ್ಪಾದನೆಗೆ ಮಾತ್ರ ಕಡ್ಡಾಯವಾಗಿ ಬಳಕೆಯಾಗು ವಂತೆ ಮಾಡಲು ಮಂಡಳಿಯು ಸೂಕ್ತ ನೀತಿಯನ್ನು ರೂಪಿಸಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಮನ್ವಯತೆ ಸಾಧಿಸಿ ಅನುಷ್ಟಾನ ಪ್ರಕ್ರಿಯೆ ಕೈಗೊಂಡಲ್ಲಿ ಕರಿದ ಎಣ್ಣೆಯು ಮತ್ತೆ ಆಹಾರ ತಯಾರಿಕೆಯಲ್ಲಿ ಪುನರ್ ಬಳಕೆಯಾಗದಂತೆ ಸಂಪೂರ್ಣವಾಗಿ ತಡೆಗಟ್ಟಬಹುದಾಗಿದೆ ಎಂದು ಸಲಹೆ ನೀಡಿದರು.

ಈ ಕುರಿತು ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಿ ಕಾನೂನು ರೂಪಿಸಿ, ಇತರ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಯಶಸ್ವಿ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಾರ್ಯದರ್ಶಿ ರಿತ್ವಿಕ್ ರಂಜನಂ ಪಾಂಡೆ, ಆಹಾರ ಸುರಕ್ಷತೆ ಆಯುಕ್ತರಾದ ಗುರುನಾಥ್ ಹೆಗಡೆ, ಆರೋಗ್ಯ ಆಯುಕ್ತ ಶ್ರೀನಿವಾಸ್, ರಾಷ್ಟ್ರೀಯ ಆರೋಗ್ಯ ಮಿಷನ್ ವ್ಯವಸ್ಥಾಪಕ ನಿರ್ದೇಶಕರಾದ ಅಕ್ರಮ್ ಫಾಶ, ಮಂಡಳಿಯ ವ್ಯವಸ್ಥಾಪಕ ನಿರ್ದೇಶಕ ಶಿವಶಂಕರ್.ಎಲ್, ಯೋಜನಾ ಸಲಹೆಗಾರ ಡಾ.ದಯಾನಂದ ಜಿ.ಎನ್. ಪ್ರಸಾದ್ ರಬ್ಬಪ್ರಾಡ, ಅಧ್ಯಕ್ಷರ ಸಲಹೆಗಾರ ನಿಮ್ಮನ್ ದೀಪ್ ಸಿಂಗ್ ಹಾಗೂ ಇತರೆ ಅಧಿಕಾರಿಗಳು ಭಾಗವಹಿಸಿದ್ದರು.

## ರೋರಿಕ್-ದೇವಿಕಾ ರಾಣಿ ಎಸ್ಟೇಟ್‌ಗೆ ಸಚಿವ ಕೆ.ಜೆ. ಜಾರ್ಜ್ ಭೇಟಿ, ಪರಿಶೀಲನೆ



**ಬೆಂಗಳೂರು, ಅ.7:** ರೋರಿಕ್-ದೇವಿಕಾ ರಾಣಿ ಎಸ್ಟೇಟ್‌ನಲ್ಲಿ ಎಕೋ ಟೂರಿಸಂ ಅಭಿವೃದ್ಧಿಗೆ ಸಂಬಂಧಿಸಿದಂತೆ ನ್ಯಾಯಾಲಯದ ನಿರ್ದೇಶನದ ಮಿತಿಯಲ್ಲಿ ಜಾರಿಯಲ್ಲಿರುವ ಕಾಮಗಾರಿಗಳನ್ನು ಚುರುಕುಗೊಳಿಸುವಂತೆ ಇಂಧನ ಮತ್ತು ಪ್ರವಾಸೋದ್ಯಮ ಸಚಿವ ಕೆ.ಜೆ. ಜಾರ್ಜ್ ಅಧಿಕಾರಿಗಳಿಗೆ ಸೂಚಿಸಿದರು.

ಪ್ರವಾಸೋದ್ಯಮ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ರೋರಿಕ್-ದೇವಿಕಾ ರಾಣಿ ಎಸ್ಟೇಟ್‌ಗೆ ಬುಧವಾರ ಭೇಟಿ ನೀಡಿದ ಸಚಿವರು, ಅಲ್ಲಿ ನಡೆಯುತ್ತಿರುವ ಕಾಮಗಾರಿಗಳನ್ನು ಪರಿಶೀಲಿಸಿ, ಅನುಮತಿಸಲಾದ ಅಭಿವೃದ್ಧಿ ಕಾರ್ಯಗಳನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಲು ಸೂಚಿಸಿದರು.

ಎಸ್ಟೇಟ್‌ನ ನೈಸರ್ಗಿಕ ಪರಿಸರ, ಹಸಿರು ವಲಯ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಕಾಪಾಡಿಕೊಂಡೇ ಪ್ರವಾಸಿಗರಿಗೆ ಅಗತ್ಯ ಮೂಲಸೌಲಭ್ಯಗಳನ್ನು ಅಭಿವೃದ್ಧಿಪಡಿಸಬೇಕು. ಎಸ್ಟೇಟ್ ಕಲೆ, ಸಂಸ್ಕೃತಿ ಮತ್ತು ನೈಸರ್ಗಿಕ ಪರಂಪರೆಯ ವಿಶಿಷ್ಟ ತಾಣವಾಗಿದೆ. ಈ ತಾಣವನ್ನು ಸಂರಕ್ಷಣೆ ಆಧಾರಿತ ಇಕೋ ಟೂರಿಸಂ ಕೇಂದ್ರವಾಗಿ ಅಭಿವೃದ್ಧಿಪಡಿಸುವುದು ಉದ್ದೇಶವಾಗಿದೆ ಎಂದು ಹೇಳಿದರು.

ಪ್ರವಾಸೋದ್ಯಮ ಇಲಾಖೆಯ ಕಾರ್ಯದರ್ಶಿ ಡಾ. ರಾಮ್‌ಪ್ರಸಾತ್ ಮನೋಹರ್ ಮಾತನಾಡಿ, ರೋರಿಕ್-ದೇವಿಕಾ ರಾಣಿ ಎಸ್ಟೇಟ್‌ನ ಅಭಿವೃದ್ಧಿಯನ್ನು ಕೇವಲ ಮೂಲಸೌಕರ್ಯ ಕಾಮಗಾರಿಯಾಗಿ ನೋಡುತ್ತಿಲ್ಲ. ಇಲ್ಲಿನ ಪರಿಸರ, ಪರಂಪರೆ ಮತ್ತು ಕಲಾತ್ಮಕ ಮಹತ್ವವನ್ನು ಕಾಪಾಡಿಕೊಂಡೇ ಪ್ರವಾಸಿಗರಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸುವ ಸಮತೋಲನದ ಮಾದರಿಯನ್ನು ರೂಪಿಸಲಾಗುತ್ತಿದೆ ಎಂದು ವಿವರಿಸಿದರು.

ಪ್ರವಾಸೋದ್ಯಮ ಇಲಾಖೆಯ ಆಯುಕ್ತ ಶಿವಪ್ರಸಾದ್ ಪಿ.ಆರ್. ಹಾಗೂ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಶಿವರಾಮ್ ಬಾಬು ಎಂ., ಐಎಫ್‌ಎಸ್ ಸೇರಿದಂತೆ ಪ್ರವಾಸೋದ್ಯಮ ಇಲಾಖೆಯ ಹಿರಿಯ ಅಧಿಕಾರಿಗಳು ಇದ್ದರು.

## ಐಐಎಸ್‌ಸಿಯ ಪ್ರೊ. ಮಹೇಶ್ ಕಾಕಡೆಗೆ ರಾಮಾನುಜನ್ ಪ್ರಶಸ್ತಿ: ಗಣಿತ ಕ್ಷೇತ್ರದ ಸಾಧನೆಗೆ ಜಾಗತಿಕ ಗೌರವ



**ಬೆಂಗಳೂರು, ಅ.7:** ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ಗಣಿತಶಾಸ್ತ್ರಜ್ಞ ಹಾಗೂ ಪ್ರೊಫೆಸರ್ ಆಗಿರುವ ಮಹೇಶ್ ಕಾಕ್ಡೆ ಅವರಿಗೆ ಅಲ್ಜಿಬ್ರಿಕ್ ನಂಬರ್ ಥಿಯರಿ ಕ್ಷೇತ್ರಕ್ಕೆ ನೀಡಿರುವ ಮಹತ್ವದ ಕೊಡುಗೆಯನ್ನು ಪರಿಗಣಿಸಿ 2026ನೇ ಸಾಲಿನ ಪ್ರತಿಷ್ಠಿತ ರಾಮಾನುಜನ್ ಪ್ರಶಸ್ತಿ ನೀಡಲಾಗಿದೆ.

ಅಂತಾರಾಷ್ಟ್ರೀಯ ಸೈದ್ಧಾಂತಿಕ ಭೌತಶಾಸ್ತ್ರ ಕೇಂದ್ರ ಹಾಗೂ ಅಂತಾರಾಷ್ಟ್ರೀಯ ಗಣಿತ ಒಕ್ಕೂಟ ಜಂಟಿಯಾಗಿ ಈ ಪ್ರಶಸ್ತಿಯನ್ನು ಘೋಷಿಸಿವೆ. ಗಣಿತಶಾಸ್ತ್ರ ಕ್ಷೇತ್ರದಲ್ಲಿ ಅಸಾಧಾರಣ ಸಾಧನೆ ಮಾಡುವ ಯುವ ವಿಜ್ಞಾನಿಗಳನ್ನು ಗುರುತಿಸಿ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ. ಪ್ರೊಫೆಸರ್ ಮಹೇಶ್ ಕಾಕ್ಡೆ ಅವರು ಗಣಿತ ಲೋಕದಲ್ಲಿ ಮಾಡಿರುವ ಸಂಶೋಧನೆಗಳು ಮತ್ತು ವಿಶ್ಲೇಷಣೆಗಳು ಜಾಗತಿಕ ಮಟ್ಟದಲ್ಲಿ ಮನ್ನಣೆ ಗಳಿಸಿವೆ.

ಅವರ ಈ ಸಾಧನೆಯು ಭಾರತೀಯ ಶೈಕ್ಷಣಿಕ ಕ್ಷೇತ್ರಕ್ಕೆ ಮತ್ತು ಅದರಲ್ಲೂ ವಿಶೇಷವಾಗಿ ಬೆಂಗಳೂರಿನ ಐಐಎಸ್‌ಸಿ ಸಂಸ್ಥೆಗೆ ಹೆಮ್ಮೆಯ ಕ್ಷಣವಾಗಿದೆ.

## ವಿಕಸಿತ ಭಾರತ ನಿರ್ಮಾಣವೆಂಬುದು ಕೇವಲ ಒಂದು ಕನಸಲ್ಲ, ಅದು ಪ್ರತಿಯೊಬ್ಬ ಭಾರತೀಯನ ಸಂಕಲ್ಪವಾಗಬೇಕು: ಸಂಸದ ಡಾ.ಮಂಜುನಾಥ್ ಆಶಯ

**ರಾಮನಗರ, ಅ.7:** ಸೇವಾ ಸಂಕಲ್ಪ ಅಭಿಯಾನ 2026ರ ಅಂಗವಾಗಿ ಆಯೋಜಿಸಿದ್ದ ಸೇವಾ ಜ್ಯೋತಿ ಯಾತ್ರೆ ಹಾಗೂ ವಿಕಸಿತ ಭಾರತ ಸಂಕಲ್ಪ ಸಭೆ ಜಿಲ್ಲಾ ಮಟ್ಟದ ಕಾರ್ಯಕ್ರಮದಲ್ಲಿ ಸಂಸದ ಡಾ. ಸಿ.ಎನ್. ಮಂಜುನಾಥ್ ಅವರು ಮಾತನಾಡಿದರು.

ರಾಮನಗರದ ವಿವೇಕಾನಂದನಗರದಲ್ಲಿರುವ ಆರ್.ವಿ.ಸಿ.ಎಸ್. ಕಲ್ಯಾಣ ಮಂಟಪದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿಕಸಿತ ಭಾರತ ನಿರ್ಮಾಣವೆಂಬುದು ಕೇವಲ ಒಂದು ಕನಸಲ್ಲ; ಅದು ಪ್ರತಿಯೊಬ್ಬ ಭಾರತೀಯನ ಸಂಕಲ್ಪವಾಗಬೇಕು. ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಸಾಲಿನಲ್ಲಿ ಭಾರತವನ್ನು ಮುಂಚೂಣಿಯಲ್ಲಿ ನಿಲ್ಲಿಸುವ ಗುರಿಯನ್ನು ನಾವು ಸಾಧಿಸಿಯೇ ಸಾಧಿಸುತ್ತೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸೇವೆ ಎಂದರೆ ನಮ್ಮ ಜವಾಬ್ದಾರಿ, ಸಮ್ಮಾನ ಎಂದರೆ ನಮ್ಮ ಸಂಸ್ಕೃತಿ, ಪೋಷಣೆ ಎಂದರೆ ನಮ್ಮ ಕರ್ತವ್ಯ; ವಿಕಸಿತ ಭಾರತ ಎಂದರೆ ನಮ್ಮ ಸಂಕಲ್ಪ ಎಂಬ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಸಂದೇಶವನ್ನು ಉಲ್ಲೇಖಿಸಿದ ಅವರು, ದೇಶದ ಸೇವೆ ಮಾಡುವುದು, ಸಾಧಕರನ್ನು ಗೌರವಿಸುವುದು, ಸಮಾಜದ ಪೋಷಣೆಗೆ ಕೈಜೋಡಿಸುವುದು ಹಾಗೂ ವಿಕಸಿತ ಭಾರತ ನಿರ್ಮಾಣಕ್ಕೆ ಪ್ರತಿಯೊಬ್ಬ ನಾಗರಿಕನೂ ತನ್ನದೇ ಆದ ಕೊಡುಗೆ ನೀಡಬೇಕು ಎಂದರು.

**25 ವರ್ಷಗಳ ಸಮರ್ಪಿತ ಸಾರ್ವಜನಿಕ ಜೀವನಕ್ಕೆ ಮೋದಿ ಅವರೇ ಪ್ರೇರಣೆ:**

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ 25 ವರ್ಷಗಳ ಸಾರ್ವಜನಿಕ ಜೀವನದ ಸಮರ್ಪಣೆ, ಶಿಸ್ತು, ಪರಿಶ್ರಮ ಮತ್ತು ರಾಷ್ಟ್ರಸೇವೆಯ ಬದ್ಧತೆಯನ್ನು ಡಾ. ಮಂಜುನಾಥ್ ಅವರು ವಿಶೇಷವಾಗಿ ಸ್ಮರಿಸಿದರು. ನರೇಂದ್ರ ಮೋದಿ ಅವರ ಬದುಕೇ ಒಂದು ಸಂದೇಶ; ಅವರ ಬದುಕೇ ಒಂದು ಸಂಕಲ್ಪ. ಅಧಿಕಾರವನ್ನು ಅವರು ವೈಯಕ್ತಿಕ ಪ್ರತಿಷ್ಠೆಯ ಸಾಧನವನ್ನಾಗಿ ನೋಡದೆ, ರಾಷ್ಟ್ರಸೇವೆ ಮತ್ತು ಜನಕಲ್ಯಾಣದ ಸಾಧನವನ್ನಾಗಿ ಪರಿಗಣಿಸಿದ್ದಾರೆ. ಕಳೆದ 25 ವರ್ಷಗಳ ಅವರ ಸಾರ್ವಜನಿಕ ಜೀವನವು ದೇಶಕ್ಕಾಗಿ ಸಮರ್ಪಣೆ, ನಿರಂತರ ಪರಿಶ್ರಮ ಮತ್ತು ದೃಢ ಸಂಕಲ್ಪಕ್ಕೆ ಮಾದರಿಯಾಗಿದೆ ಎಂದು ಅವರು ಹೇಳಿದರು.

ಗುಜರಾತಿನ ಮುಖ್ಯಮಂತ್ರಿಯಾಗಿ ಆರಂಭವಾದ ಅವರ ಸಾರ್ವಜನಿಕ ಸೇವೆಯ ಪಯಣವು ಇಂದು ದೇಶದ ಪ್ರಧಾನಮಂತ್ರಿಯಾಗಿ ಹಾಗೂ ಜಾಗತಿಕ ನಾಯಕನಾಗಿ ವಿಸ್ತರಿಸಿದೆ. ವಿಶ್ವದ ಪ್ರಮುಖ ನಾಯಕರ ಸಾಲಿನಲ್ಲಿ ನರೇಂದ್ರ ಮೋದಿ ಅವರು ಗೌರವಾನ್ವಿತ ಸ್ಥಾನ ಪಡೆದಿರುವುದು ಪ್ರತಿಯೊಬ್ಬ ಭಾರತೀಯನಿಗೂ ಹೆಮ್ಮೆಯ ಸಂಗತಿ. ಇದು ಕೇವಲ ಒಬ್ಬ ನಾಯಕನ ಗೌರವವಲ್ಲ; ಭಾರತದ ಸಾಮರ್ಥ್ಯ, ಭಾರತೀಯರ ಆತ್ಮವಿಶ್ವಾಸ ಮತ್ತು ದೇಶದ ಗೌರವದ ಪ್ರತೀಕವಾಗಿದೆ ಎಂದು ಡಾ. ಮಂಜುನಾಥ್ ಅಭಿಪ್ರಾಯಪಟ್ಟರು.



**ಜಾಗತಿಕ ಸವಾಲುಗಳ ನಡುವೆಯೂ ಭಾರತದ ಆರ್ಥಿಕ ಪ್ರಗತಿ:**

ಪಶ್ಚಿಮ ಏಷ್ಯಾದ ಸಂಘರ್ಷ ಸೇರಿದಂತೆ ಜಾಗತಿಕ ಮಟ್ಟದಲ್ಲಿ ಹಲವು ಸವಾಲುಗಳು ಎದುರಾಗಿರುವ ಸಂದರ್ಭದಲ್ಲಿ ಅನೇಕ ರಾಷ್ಟ್ರಗಳ ಆರ್ಥಿಕತೆ ಒತ್ತಡಕ್ಕೆ ಒಳಗಾಗಿದ್ದರೂ, ಭಾರತ ತನ್ನ ಅಭಿವೃದ್ಧಿಯ ಪಥದಲ್ಲಿ ದೃಢವಾಗಿ ಮುನ್ನಡೆಯುತ್ತಿದೆ. ಆರ್ಥಿಕ ಪ್ರಗತಿ, ಮೂಲಸೌಕರ್ಯ, ತಂತ್ರಜ್ಞಾನ ಮತ್ತು ಉದ್ಯಮಶೀಲತೆಯಲ್ಲಿ ಭಾರತ ಹೊಸ ಮೈಲಿಗಲ್ಲುಗಳನ್ನು ಸಾಧಿಸುತ್ತಿದೆ ಎಂದು ಅವರು ಹೇಳಿದರು.

**ಕೊರೊನಾ ಸಂದರ್ಭದಲ್ಲಿ ಭಾರತದ ಸಾಮರ್ಥ್ಯ ಜಗತ್ತಿಗೆ ಪರಿಚಯ:**

ಕೊರೊನಾ ಸಾಂಕ್ರಾಮಿಕದ ಸಂದರ್ಭದಲ್ಲಿ ಭಾರತವು ಕೋಟ್ಯಂತರ ಜನರಿಗೆ ಲಸಿಕೆ ನೀಡುವ ಮೂಲಕ ಬೃಹತ್ ಲಸಿಕಾ ಅಭಿಯಾನವನ್ನು ಯಶಸ್ವಿಯಾಗಿ ನಡೆಸಿತು. ಜೊತೆಗೆ ವ್ಯಾಕ್ಸಿನ್ ಮೈತ್ರಿ ಮೂಲಕ ಹಲವು ದೇಶಗಳಿಗೆ ಲಸಿಕೆಗಳನ್ನು ಪೂರೈಸಿ, ಜಾಗತಿಕ ಆರೋಗ್ಯ ಕ್ಷೇತ್ರದಲ್ಲಿಯೂ ತನ್ನ ಜವಾಬ್ದಾರಿ ಯನ್ನು ಭಾರತ ಸಮರ್ಥವಾಗಿ ನಿರ್ವಹಿಸಿತು ಎಂದು ಅವರು ತಿಳಿಸಿದರು.

**ಆತ್ಮನಿರ್ಭರ ಭಾರತ: ಆಮದು ರಾಷ್ಟ್ರದಿಂದ ರಫ್ತು ರಾಷ್ಟ್ರದತ್ತ:**

ಆತ್ಮನಿರ್ಭರ ಭಾರತ ಮತ್ತು ಮೇಕ್ ಇನ್ ಇಂಡಿಯಾ ಅಭಿಯಾನಗಳ ಮೂಲಕ ದೇಶೀಯ ಉತ್ಪಾದನೆಗೆ ಉತ್ತೇಜನ ನೀಡಲಾಗಿದೆ. ಭಾರತವು ಕೇವಲ ಆಮದು ಮಾಡಿಕೊಳ್ಳುವ ರಾಷ್ಟ್ರವಾಗಿರದೆ, ತನ್ನದೇ ಉತ್ಪನ್ನಗಳನ್ನು ಜಾಗತಿಕ ಮಾರುಕಟ್ಟೆಗೆ ರಫ್ತು ಮಾಡುವ ಸಾಮರ್ಥ್ಯವನ್ನು ವೃದ್ಧಿಸಿಕೊಂಡಿದೆ ಎಂದು ಡಾ. ಮಂಜುನಾಥ್ ಹೇಳಿದರು. ಸ್ಟಾರ್ಟ್‌ಅಪ್‌ಗಳು ಮತ್ತು ನವೋದ್ಯಮ ಗಳಿಗೆ ದೊರೆತಿರುವ ಪ್ರೋತ್ಸಾಹದಿಂದ ಭಾರತದ ಯುವಜನತೆಗೆ ಹೊಸ ಅವಕಾಶಗಳು ಸೃಷ್ಟಿಯಾಗಿವೆ. ಉದ್ಯೋಗ ಹುಡುಕುವ ಯುವಕರ ಜೊತೆಗೆ ಉದ್ಯೋಗ ಸೃಷ್ಟಿಸುವ ಯುವಕರ ಭಾರತ ನಿರ್ಮಾಣವಾಗುತ್ತಿದೆ ಎಂದು ಅವರು ಹೇಳಿದರು.

**ಪಾರದರ್ಶಕ ಆಡಳಿತ ಮತ್ತು ಜನಸೇವೆಗೆ ಆದ್ಯತೆ:**

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪಾರದರ್ಶಕ, ಹೊಣೆಗಾರಿಕೆಯುತ ಮತ್ತು ಜನಪರ ಆಡಳಿತ ನೀಡುವುದು ಅತ್ಯಂತ ಮಹತ್ವದ್ದು. ಆಡಳಿತ ವ್ಯವಸ್ಥೆಯಲ್ಲಿ ಸುಧಾರಣೆಗಳನ್ನು ತಂದು ಸರ್ಕಾರಿ ಸೇವೆಗಳನ್ನು ಜನರಿಗೆ ಸುಲಭವಾಗಿ ತಲುಪಿಸುವ ಪ್ರಯತ್ನಗಳು ನಡೆಯುತ್ತಿವೆ.

ಅಧಿಕಾರವೆಂಬುದು ವೈಯಕ್ತಿಕ ಪ್ರತಿಷ್ಠೆಗಾಗಿ ಅಲ್ಲ; ಅದು ಜನಸೇವೆ ಮತ್ತು ರಾಷ್ಟ್ರನಿರ್ಮಾಣಕ್ಕಾಗಿ ಎಂಬ ಸಂದೇಶವನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಸಾರ್ವಜನಿಕ ಜೀವನ ಸಾರುತ್ತದೆ ಎಂದು ಡಾ. ಮಂಜುನಾಥ್ ಹೇಳಿದರು.

**ಆತ್ಮನಿರ್ಭರ ರಕ್ಷಣಾ ಕ್ಷೇತ್ರಕ್ಕೆ ಹೊಸಶಕ್ತಿ:**

ರಾಷ್ಟ್ರೀಯ ಭದ್ರತೆಯ ವಿಚಾರದಲ್ಲಿಯೂ ಭಾರತ ಇಂದು ತನ್ನ ಸಾಮರ್ಥ್ಯವನ್ನು ವಿಸ್ತರಿಸಿಕೊಂಡಿದೆ. ದೇಶೀಯವಾಗಿ ರಕ್ಷಣಾ ಸಾಮಗ್ರಿಗಳ ತಯಾರಿಕೆ, ಆಧುನಿಕ ತಂತ್ರಜ್ಞಾನ, ಸಂಶೋಧನೆ ಮತ್ತು ಅಭಿವೃದ್ಧಿಗೆ ನೀಡುತ್ತಿರುವ ಆದ್ಯತೆಯು ಭಾರತದ ಆತ್ಮನಿರ್ಭರತೆಯನ್ನು ಮತ್ತಷ್ಟು ಬಲಪಡಿಸುತ್ತಿದೆ ಎಂದು ಅವರು ಹೇಳಿದರು. ವಿಕಸಿತ ಭಾರತವೆಂದರೆ ಕೇವಲ ಆರ್ಥಿಕವಾಗಿ ಬಲಿಷ್ಠ ಭಾರತವಲ್ಲ; ಸುರಕ್ಷಿತ, ಆತ್ಮನಿರ್ಭರ, ಸ್ವಾಭಿಮಾನಿ ಮತ್ತು ವಿಶ್ವದಲ್ಲಿ ಗೌರವ ಹೊಂದಿರುವ ಭಾರತ. ಈ ಭಾರತ ನಿರ್ಮಾಣದ ಸಂಕಲ್ಪದಲ್ಲಿ ಪ್ರತಿಯೊಬ್ಬ ಭಾರತೀಯನೂ ಪಾಲುದಾರನಾಗಬೇಕು ಎಂದು ಡಾ. ಸಿ.ಎನ್. ಮಂಜುನಾಥ್ ಕರೆ ನೀಡಿದರು.

ಬಿಜೆಪಿ ರಾಜ್ಯ ಪ್ರಕೋಷ್ಠಗಳ ಸಹ ಸಂಚಾಲಕ ಫಣೀಶ್, ರಾಮನಗರ ಜಿಲ್ಲಾ ಸಹ ಪ್ರಭಾರಿ ವಾಸುದೇವ್, ಬೆಂಗಳೂರು ದಕ್ಷಿಣ ಜಿಲ್ಲಾ ಬಿಜೆಪಿ ಅಧ್ಯಕ್ಷ ಆನಂದಸ್ವಾಮಿ, ಮಂಡಲಗಳ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು, ಎನ್‌ಡಿಎ ಮೈತ್ರಿಕೂಟದ ಪ್ರಮುಖರು, ಪಕ್ಷದ ಕಾರ್ಯಕರ್ತರು ಉಪಸ್ಥಿತರಿದ್ದರು.

Chief reporter : SANDEEP RENU ✆ 99728 72151 | Executive Editor : SHARAT JYOTSNA B.R ✆ 9886766483 ✉ vaarthe@gmail.com
Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20
Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363

# 2047ಕ್ಕೆ ವಿಕಸಿತ ಭಾರತ; ಸಾಧಿಸುವುದು ನಿಶ್ಚಿತ: ಮೋದಿ

### ಜನಪ್ರತಿನಿಧಿಯಾಗಿ 25 ವರ್ಷಗಳ ಆಡಳಿತ ಪಯಣ: ದೆಹಲಿ ಇಂದಿರಾಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ಸೇವಾಜ್ಯೋತಿ ಕಾರ್ಯಕ್ರಮ



**ನವದೆಹಲಿ, ಅ.7:** ಗುಜರಾತ್ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿ 25 ವರ್ಷ ಪೂರೈಸಿದ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಮುಂದಿನ ಅಭಿವೃದ್ಧಿಯ ಗುರಿಗಳನ್ನು ಪುನರುಚ್ಚರಿಸುವ ಮೂಲಕ ಹೊಸ ಸಂಕಲ್ಪಕ್ಕೆ ಕರೆ ನೀಡಿದರು.

ನವದೆಹಲಿಯ ಇಂದಿರಾ ಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಮೋದಿ, ನಾವು ಮಾಡಿಯೇ ತೀರುತ್ತೇವೆ ಎಂಬ ಘೋಷಣೆಯೊಂದಿಗೆ ದೇಶದ ಅಭಿವೃದ್ಧಿಯ ಗುರಿಗಳನ್ನು ಜನರ ಮುಂದಿಟ್ಟರು. 2001ರ ಅಕ್ಟೋಬರ್ 7ರಂದು ಮೋದಿ ಗುಜರಾತ್ ಮುಖ್ಯಮಂತ್ರಿಯಾಗಿ ಮೊದಲ ಬಾರಿಗೆ ಪ್ರಮಾಣವಚನ ಸ್ವೀಕರಿಸಿದ್ದರು. ಬಳಿಕ ಮೂರು ಅವಧಿ ಗುಜರಾತ್ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸಿದ ಅವರು, 2014ರಲ್ಲಿ ಪ್ರಧಾನಮಂತ್ರಿಯಾದರು. ಆ ಬಳಿಕ ಸತತ ಮೂರು ಲೋಕಸಭಾ ಚುನಾವಣೆಗಳಲ್ಲಿ ಗೆದ್ದು ಪ್ರಧಾನಿಯಾಗಿ ಮುಂದುವರಿದಿದ್ದಾರೆ.

25 ವರ್ಷಗಳ ಸುದೀರ್ಘ ಆಡಳಿತದ ಪಯಣವನ್ನು ವೈಯಕ್ತಿಕ ಸಾಧನೆ ಅಥವಾ ವೈಭವೀಕರಣದ ಸಂದರ್ಭವಾಗಿ ನೋಡುವುದಿಲ್ಲ ಎಂದು ಮೋದಿ ಹೇಳಿದರು. ಜನರ ವಿಶ್ವಾಸ, ಪಕ್ಷದ ಕಾರ್ಯಕರ್ತರ ಶ್ರಮ ಹಾಗೂ ದೇಶದ ಜನರ ಬೆಂಬಲದಿಂದ ಈ ಪಯಣ ಸಾಧ್ಯವಾಗಿದೆ ಎಂದು ಅವರು ತಿಳಿಸಿದರು. ತಮ್ಮನ್ನು ಬೆಂಬಲಿಸಿದವರಿಂದ ವಿಶ್ವಾಸದ ಶಕ್ತಿ, ವಿರೋಧಿಸಿದವರಿಂದ ಪ್ರಜಾಪ್ರಭುತ್ವದ ಶಕ್ತಿಯನ್ನು ಕಲಿತಿರುವುದಾಗಿ ಹೇಳಿದರು.

**ಅಭಿವೃದ್ಧಿಯ ಐದು ಪ್ರಮುಖ ಗುರಿಗಳು:** 2047ರ ವೇಳೆಗೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಮಾಡುವ ಗುರಿಯೊಂದಿಗೆ ಹಲವು ಮಹತ್ವಾಕಾಂಕ್ಷೆಯ ಗುರಿಗಳನ್ನು ಮೋದಿ ಘೋಷಿಸಿದರು. ಭಾರತವನ್ನು ವಿಶ್ವದ ಅಗ್ರ ಮೂರು ಆರ್ಥಿಕ ಶಕ್ತಿಗಳಲ್ಲಿ ಒಂದಾಗಿಸುವುದು, ಆತ್ಮನಿರ್ಭರ ಭಾರತ ನಿರ್ಮಾಣ, ಜಾಗತಿಕ ಉತ್ಪಾದನಾ ಕೇಂದ್ರವಾಗಿಸುವುದು, ಒಲಿಂಪಿಕ್ಸ್ ಆತಿಥ್ಯ ವಹಿಸುವುದು ಹಾಗೂ ಬಾಹ್ಯಾಕಾಶ ಕ್ಷೇತ್ರದಲ್ಲಿ ಮಾನವಸಹಿತ ಸಾಧನೆ ಮಾಡುವ ಗುರಿಗಳನ್ನು ಅವರು ಪ್ರಸ್ತಾಪಿಸಿದರು. ಪ್ರತಿ ಗುರಿಯ ಬಳಿಕ ನಾವು ಮಾಡಿಯೇ ತೀರುತ್ತೇವೆಎಂದು ಘೋಷಿಸಿದ ಮೋದಿ ಅವರಿಗೆ ಸಭಿಕರೂ ಅದೇ ಘೋಷಣೆಯೊಂದಿಗೆ ಪ್ರತಿಕ್ರಿಯಿಸಿದರು.

ಜಾಗತಿಕ ಬಿಕ್ಕಟ್ಟುಗಳ ನಡುವೆಯೂ ಭಾರತದ ಆರ್ಥಿಕ ಸ್ಥಿರತೆ ಮತ್ತು ಸಾಮರ್ಥ್ಯ ಹೆಚ್ಚಿದೆ ಎಂದು ಮೋದಿ ಹೇಳಿದರು. ಹಿಂದೆ ಬಿಕ್ಕಟ್ಟು ಎದುರಾದಾಗ ಭಾರತದ ಆರ್ಥಿಕತೆಯ ಬಗ್ಗೆ ಆತಂಕ ವ್ಯಕ್ತವಾಗುತ್ತಿತ್ತು; ಈಗ ಭಾರತದ ಸ್ಥಿತಿಸ್ಥಾಪಕತೆ ಮತ್ತು ಸಾಮರ್ಥ್ಯದ ಬಗ್ಗೆ ಚರ್ಚೆಯಾಗುತ್ತಿದೆ ಎಂದು ಅವರು ಹೇಳಿದರು. ಭಾರತ ಸಣ್ಣ ಗುರಿಗಳನ್ನು ಇಟ್ಟುಕೊಳ್ಳುವ ಸಮಯ ಇದಲ್ಲ, ದೇಶದ ಸಾಮರ್ಥ್ಯಕ್ಕೆ ತಕ್ಕಂತೆ ದೊಡ್ಡ ಗುರಿಗಳನ್ನು ಹೊಂದುವ ಕಾಲ ಇದು ಎಂದು ಕರೆ ನೀಡಿದರು.

ಆತ್ಮನಿರ್ಭರ ಭಾರತ ಹಾಗೂ ಜಾಗತಿಕ ಉತ್ಪಾದನಾ ಕೇಂದ್ರವಾಗುವ ಗುರಿ ಪರಸ್ಪರ ಸಂಬಂಧ ಹೊಂದಿವೆ ಎಂದು ಮೋದಿ ಪ್ರತಿಪಾದಿಸಿದರು. ದೇಶದ ಆರ್ಥಿಕತೆಯನ್ನು ಕೇವಲ ಬಳಕೆ ಆಧಾರಿತವಾಗಿರದೆ ಉತ್ಪಾದನೆ ಆಧಾರಿತವಾಗಿಸುವ ಪ್ರಯತ್ನಗಳಿಗೆ ಒತ್ತು ನೀಡಿದರು. 2047ರ ವೇಳೆಗೆ ಅಭಿವೃದ್ಧಿ ಹೊಂದಿದ ಭಾರತ ನಿರ್ಮಾಣಕ್ಕೆ ಈ ಗುರಿಗಳು ದಿಕ್ಕು ತೋರಿಸಲಿವೆ ಎಂದು ಅವರು ಹೇಳಿದರು.

### ಆರ್‌ಎಸ್‌ಎಸ್ ವಿರುದ್ಧ ಅಪಮಾನಕಾರಿ ಹೇಳಿಕೆ

## ಪ್ರಿಯಾಂಕ್ ಖರ್ಗೆ, ನಲಪಾಡ್ ವಿರುದ್ಧದ ದೂರಿಗೆ ತಡೆಯಾಜ್ಞೆ

**ಬೆಂಗಳೂರು, ಅ.7:** ಆರ್‌ಎಸ್‌ಎಸ್ ವಿರುದ್ಧ ಅಪಮಾನಕಾರಿ ಹೇಳಿಕೆ ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಮತ್ತು ಕಾಂಗ್ರೆಸ್ ಮುಖಂಡ ಮೊಹಮ್ಮದ್ ನಲಪಾಡ್ ವಿರುದ್ಧದ ಖಾಸಗಿ ದೂರಿನ ಸಂಬಂಧ ಬೆಂಗಳೂರಿನ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ನೀಡಿದ್ದ ವಿಚಾರಣೆ ಆದೇಶಕ್ಕೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಮಧ್ಯಂತರ ತಡೆಯಾಜ್ಞೆ ನೀಡಿದೆ. ಪ್ರಕರಣ ಸಂಬಂಧ ಬೆಂಗಳೂರು ಸಿದ್ದಾಪುರದ ನಿವಾಸಿ ಎ. ತೇಜಸ್ ಎಂಬುವರು ದಾಖಲಿಸಿದ್ದ ಖಾಸಗಿ ದೂರಿನ ವಿಚಾರಣೆ ನಡೆಸಿದ ಬೆಂಗಳೂರಿನ 42ನೇ ಎಸಿಎಂಎಂ ನ್ಯಾಯಾಲಯ, ಪ್ರಕರಣ ಸಂಬಂಧ ಪ್ರಿಯಾಂಕ್ ಖರ್ಗೆ ಮತ್ತು ಹ್ಯಾರಿಸ್ ನಲಪಾಡ್ ಅವರ ವಿರುದ್ಧ ಕಾಗ್ನಿಜೆನ್ಸ್ ತೆಗೆದುಕೊಂಡು ಸಮನ್ಸ್ ಜಾರಿ ಮಾಡಿತ್ತು. ಇದನ್ನು ಪ್ರಶ್ನಿಸಿ ಪ್ರಿಯಾಂಕ್ ಖರ್ಗೆ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಬಿ.ಕೆ.ಶಿವಪ್ರಸಾದ್ ಪ್ರಕರಣಕ್ಕೆ ಅ.30ರವರೆಗೆ ತಡೆ ನೀಡಿ ದೂರುದಾರ ತೇಜಸ್ ಗೆ ನೋಟಿಸ್ ಜಾರಿ ಮಾಡಿದ್ದಾರೆ.

## ಇ.ಡಿ.ಯಿಂದ ಯಾವುದೇ ನೋಟಿಸ್ ಬಂದಿಲ್ಲ: ಸತೀಶ್ ಜಾರಕಿಹೊಳಿ

**ಬೆಂಗಳೂರು, ಅ.7:** ಜಾರಿ ನಿರ್ದೇಶನಾಲಯ (ಇ.ಡಿ.)ದಿಂದ ಯಾವುದೇ ನೋಟಿಸ್ ಬಂದಿಲ್ಲ ಎಂದು ಸಚಿವ ಸತೀಶ್ ಜಾರಕಿಹೊಳಿ ಸ್ಪಷ್ಟಪಡಿಸಿದ್ದಾರೆ. ಮಾಧ್ಯಮಗಳ ಜತೆ ಬುಧವಾರ ಮಾತನಾಡಿದ ಅವರು, ಇ.ಡಿ.ಯಿಂದ ಯಾವುದೇ ನೋಟಿಸ್ ಬಂದಿಲ್ಲ. ನೋಟಿಸ್ ಬಂದಾಗ ಉತ್ತರಿಸುತ್ತೇನೆ. ಒಂದು ವೇಳೆ ನೋಟಿಸ್ ಬಂದರೆ ನನಗಿಂತಲೂ ಮುನ್ನಹ ಮಾಧ್ಯಮಗಳಿಗೆ ತಿಳಿಯುತ್ತದೆ ಎಂದರು. ಕಮೀಷನ್ ದುಡ್ಡಲ್ಲಿ ಹೆಲಿಕಾಪ್ಟರ್ ಬಳಕೆ ಎಂಬ ವರದಿ ವಿಚಾರಕ್ಕೆ ಪ್ರತಿಕ್ರಿಯಿಸಿ, ಸುಳ್ಳುಸುದ್ದಿ ಹರಡುತ್ತಿರುವವರ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಲಾಗಿದೆ ಎಂದರು.

## ಇಂಡಿಯಾ ಕೂಟ ಭೋಜನಕೂಟಕ್ಕೆ ಎಸ್‌ಪಿ ಗೈರುಹಾಜರು

### ಅನಗತ್ಯ ಟೀಕೆ ಎಂದ ಜೈರಾಮ್ ರಮೇಶ್



**ನವದೆಹಲಿ, ಅ.7:** ಬುಧವಾರ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಏರ್ಪಡಿಸಿದ್ದ 'ಇಂಡಿಯಾ' ಮೈತ್ರಿಕೂಟದ ಭೋಜನಕೂಟದಲ್ಲಿ ಸಮಾಜವಾದಿ ಪಕ್ಷ ಪಾಲ್ಗೊಂಡಿರಲಿಲ್ಲ.

ಭೋಜನಕೂಟಕ್ಕೆ ಅತ್ಯಂತ ಕಡಿಮೆ ಸಮಯವಿದ್ದಾಗ ಮಾಹಿತಿ ನೀಡಿದ್ದು, ಕೆಲವು ಮಿತ್ರಪಕ್ಷಗಳ ಗೈರುಹಾಜರಿಗೆ ಕಾರಣವೆಂದು ಕಾಂಗ್ರೆಸ್ ಹೇಳಿಕೊಂಡರೆ, ರಾಹುಲ್ ಗಾಂಧಿ ಅವರ ಅನಿರೀಕ್ಷಿತ ಪ್ರತಿಭಟನೆಗಳ ಮೊದಲು ಸಮಾಲೋಚನೆ ನಡೆಸದಿರುವ ಬಗ್ಗೆ ಎಸ್‌ಪಿ ಮೂಲಗಳು ಕಳವಳ ವ್ಯಕ್ತಪಡಿಸಿವೆ.

ಜನ್‌ಪಥ್‌ನಲ್ಲಿರುವ ದಕ್ಷಿಣ ಭಾರತೀಯ ರೆಸ್ಟೋರೆಂಟ್‌ನಲ್ಲಿ ಈ ಊಟದ ಕೂಟ ನಡೆಯಿತು. ಇದಕ್ಕೂ ಕೆಲವೇ ಗಂಟೆಗಳ ಮೊದಲು, ವಿರೋಧ ಪಕ್ಷದ ಸಂಸದರು ಚುನಾವಣಾ ಆಯೋಗದ ಕಡೆಗೆ ಮೆರವಣಿಗೆ ನಡೆಸದಂತೆ ಸತತ ಎರಡನೇ ದಿನವೂ ತಡೆಯೊಡ್ಡಲಾಗಿತ್ತು; ಇದರಿಂದ ಅಶೋಕ ರಸ್ತೆಯಲ್ಲಿ ಬಿಕ್ಕಟ್ಟು ಉಂಟಾಗಿ ಬಲವಂತದ ಬಂಧನಗಳೂ ನಡೆದಿದ್ದವು.

ಮಂಗಳವಾರ ಆಕಾಶವಾಣಿ ಭವನದಲ್ಲಿ ರಾಹುಲ್ ಗಾಂಧಿ ನಡೆಸಿದ ಧರಣಿಯ ಬಗ್ಗೆ ಮುಂಚಿತವಾಗಿ ಮಾಹಿತಿ ನೀಡದಿರುವ ಕುರಿತು ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅಸಮಾಧಾನಗೊಂಡಿದ್ದರು ಎಂದು ಎಸ್‌ಪಿ ಮೂಲಗಳು ತಿಳಿಸಿವೆ. ಆದರೆ, ಈ ಅಸಮಾಧಾನವೇ ಪಕ್ಷವು ಊಟದ ಕೂಟಕ್ಕೆ ಗೈರುಹಾಜರಾಗಲು ಕಾರಣವೇ ಎಂಬುದನ್ನು ಅವರು ಸ್ಪಷ್ಟಪಡಿಸಿಲ್ಲ. ಮಂಗಳವಾರ ತಡರಾತ್ರಿ ಊಟದ ಕೂಟದ ನಿರ್ಧಾರ ಕೈಗೊಳ್ಳಲಾಗಿತ್ತು ಮತ್ತು ಎಲ್ಲಾ ಮೈತ್ರಿ ಪಕ್ಷಗಳಿಗೆ ಆಹ್ವಾನ ಕಳುಹಿಸಲಾಗಿತ್ತು ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ. ಶಿವಸೇನೆ (ಯುಬಿಟಿ) ಮತ್ತು ಎನ್‌ಸಿಪಿ–ಎಸ್‌ಪಿ ಪ್ರತಿನಿಧಿಗಳು ಕೂಡ ಪೂರ್ವನಿಗದಿತ ಕಾರ್ಯಕ್ರಮಗಳ ಕಾರಣದಿಂದಾಗಿ ಭಾಗವಹಿಸಲು ಸಾಧ್ಯವಾಗಲಿಲ್ಲ ಎಂದು ಅವರು ಹೇಳಿದರು.

"ಮಂಗಳವಾರ ತಡರಾತ್ರಿ ನಿರ್ಧಾರ ಕೈಗೊಂಡ ನಂತರ ಖರ್ಗೆ ಅವರ ಕಚೇರಿಯಿಂದ ಎಸ್‌ಪಿ ಸೇರಿದಂತೆ ಎಲ್ಲಾ ಮಿತ್ರಪಕ್ಷಗಳನ್ನು ಊಟಕ್ಕೆ ಆಹ್ವಾನಿಸಲಾಗಿತ್ತು," ಎಂದು ಕಾಂಗ್ರೆಸ್ ಮೂಲವೊಂದು ತಿಳಿಸಿದೆ. 'ಇಂಡಿಯಾ' ಮೈತ್ರಿಕೂಟದ ಎಲ್ಲಾ ಪಕ್ಷಗಳಿಗೂ ಆಹ್ವಾನ ನೀಡಲಾಗಿತ್ತು, ಆದರೆ ನಿರ್ಧಾರ ಮತ್ತು ಮಾಹಿತಿ ರವಾನೆಯು ಮಂಗಳವಾರ ತಡರಾತ್ರಿಯಷ್ಟೇ ನಡೆಯಿತು ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ತಿಳಿಸಿದ್ದಾರೆ. "ಆದ್ದರಿಂದ, ಕೆಲವು ಪಕ್ಷಗಳ ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಲು ಸಾಧ್ಯವಾಗದಿರುವುದು ಸಹಜವಾಗಿತ್ತು. ಕೆಲವು ಮಾಧ್ಯಮಗಳು ಈ ಬಗ್ಗೆ ಅನಗತ್ಯ ಟೀಕೆಗಳನ್ನು ಮಾಡುತ್ತಿವೆ," ಎಂದು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಇಂಡಿಯಾ' ಮೈತ್ರಿಕೂಟದ ಪಕ್ಷಗಳು ಮತ್ತು ಇತರ ವಿರೋಧ ಪಕ್ಷಗಳು 'ಮತಗಳ್ಳತನ', ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಮತ್ತು ಕ್ಷೇತ್ರ ಮರುವಿಂಗಡಣೆ (ಡಿಲಿಮಿಟೇಶನ್) ವಿರುದ್ಧ ಒಗ್ಗಟ್ಟಾಗಿವೆ ಎಂದು ರಮೇಶ್ ಪ್ರತಿಪಾದಿಸಿದರು.

ಮಿತ್ರಪಕ್ಷಗಳೊಂದಿಗೆ ಪೂರ್ವ ಸಮಾಲೋಚನೆ ನಡೆಸದೆ ಆಕಾಶವಾಣಿ ಭವನದಲ್ಲಿ ಗಾಂಧಿ ನಡೆಸಿದ ಧರಣಿಯ ಬಗ್ಗೆ ಯಾದವ್ ಅವರಿಗೆ ಅಸಮಾಧಾನವಿತ್ತು ಎಂದು ಎಸ್‌ಪಿ ಮೂಲಗಳು ತಿಳಿಸಿವೆ. ಸಮಾಜವಾದಿ ಪಕ್ಷದ ಮೂಲಗಳ ಪ್ರಕಾರ, ಸಮನ್ವಯದ ಕುರಿತಾದ ಕಳವಳವು ಕೇವಲ ಮಂಗಳವಾರದ ಘಟನೆಗಳಿಗೆ ಮಾತ್ರ ಸೀಮಿತವಾಗಿರಲಿಲ್ಲ.

ಅಂದಿನ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆಗೆ ಆಗ್ರಹಿಸಿ ಪ್ರಧಾನ ಮಂತ್ರಿಯ ನಿವಾಸದ ಹೊರಗೆ ಗಾಂಧಿ ನಡೆಸಿದ ಅನಿರೀಕ್ಷಿತ ಧರಣಿಯ ಬಗ್ಗೆ ಕೊನೆಯ ಕ್ಷಣದಲ್ಲಿ ಮಾಹಿತಿ ನೀಡಿದ್ದರ ಕುರಿತೂ ಯಾದವ್ ಅಸಮಾಧಾನಗೊಂಡಿದ್ದರು ಎಂದು ಅವರು ತಿಳಿಸಿದರು.

ಕೊನೆ ಕ್ಷಣದ ಸೂಚನೆಯ ಹೊರತಾಗಿಯೂ ಯಾದವ್ ಆ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು ಎಂದು ಮೂಲಗಳು ತಿಳಿಸಿವೆ; ಜೊತೆಗೆ, ಮೈತ್ರಿ ಪಾಲುದಾರರೊಂದಿಗಿನ ವ್ಯವಹಾರಗಳಲ್ಲಿ ಕೊನೆಯ ಕ್ಷಣದ ಸಂವಹನವು ವಾಡಿಕೆಯಾಗಬಾರದು ಎಂದೂ ಅವರು ಹೇಳಿದರು.

## ಜಿಪಂ, ತಾಪಂ ಕ್ಷೇತ್ರ ಮರುವಿಂಗಡಣೆ, ಮೀಸಲು ಪೂರ್ಣ ಇಂದು ಕರಡು ಅಧಿಸೂಚನೆ: ಸಚಿವ ಈಶ್ವರ ಖಂಡ್ರೆ

ಚಿಕ್ಕಮಗಳೂರು, ಅ.7: ಜಿಲ್ಲಾ ಪಂಚಾಯತಿ ಮತ್ತು ತಾಲೂಕು ಪಂಚಾಯತಿಗಳ ಕ್ಷೇತ್ರ ಪುನರ್ ವಿಂಗಡಣೆ ಹಾಗೂ ಮೀಸಲು ಪೂರ್ಣಗೊಂಡಿದ್ದು, ನಾಳೆಯೊಳಗೆ ಪ್ರಾಥಮಿಕ ಕರಡು ಅಧಿಸೂಚನೆ ಹೊರಬೀಳಲಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ ಖಂಡ್ರೆ ತಿಳಿಸಿದ್ದಾರೆ.

ಚಿಕ್ಕಮಗಳೂರಿನಲ್ಲಿಂದು ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅವರು, ಮೊದಲಿಗೆ ಜಿಲ್ಲಾ ಪಂಚಾಯತಿ ಮತ್ತು ತಾಲೂಕು ಪಂಚಾಯತಿ ಚುನಾವಣೆಗಳು ನಡೆಯಲಿವೆ ಎಂದು ಮಾಹಿತಿ ನೀಡಿದರು.

ನಮ್ಮ ಸರ್ಕಾರ ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ಬದ್ಧವಾಗಿದ್ದು, ಕ್ಷೇತ್ರ ಪುನರ್ ವಿಂಗಡಣೆ ಮತ್ತು ಮೀಸಲಾತಿ ನಿಗದಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದೆ. ಪ್ರಾಥಮಿಕ ಕರಡು ಅಧಿಸೂಚನೆ ಹೊರಡಿಸಿದ ತರುವಾಯ ಆಕ್ಷೇಪಣೆ ಸಲ್ಲಿಕೆಗೆ 10 ದಿನಗಳ ಕಾಲಾವಕಾಶ ನೀಡಲಾಗುವುದು. ನಂತರ ರಾಜ್ಯ ಚುನಾವಣಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು. ಚುನಾವಣೆ ನಡೆಸುವ ಜವಾಬ್ದಾರಿ ಆಯೋಗ ನಿರ್ವಹಿಸುತ್ತದೆ ಎಂದರು.

ವರ್ಷಾಂತ್ಯದೊಳಗೆ ಜಿ.ಪಂ., ತಾಪಂ ಚುನಾವಣೆ ಖಚಿತವಾಗಿ ನಡೆಯುತ್ತದೆಯೇ ಎಂದು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಪ್ರಸ್ತುತ ಎಸ್.ಐ.ಆರ್. ಪ್ರಕ್ರಿಯೆ ನಡೆಯುತ್ತಿದ್ದು, ಅಂತಿಮ ಮತದಾರರ ಪಟ್ಟಿಯನ್ನು ನೀಡಲು ಕೇಂದ್ರ ಚುನಾವಣಾ ಆಯೋಗ ವಿಳಂಬ ಮಾಡಿದರೆ, ಜನವರಿ ತಿಂಗಳಲ್ಲಿ ಚುನಾವಣೆ ಆಗಬಹುದು ಎನಿಸುತ್ತದೆ ಎಂದು ತಿಳಿಸಿದರು.

### ಶುದ್ಧ ಕುಡಿಯುವ ನೀರು ಪೂರೈಸುವುದು ಸರ್ಕಾರದ ಆದ್ಯತೆ

**ಚಿಕ್ಕಮಗಳೂರು, ಅ.7:** ಮಳೆಯ ಕೊರತೆ, ಬರದ ನಡುವೆಯೂ ಎಲ್ಲ ಗ್ರಾಮಗಳಿಗೂ ಶುದ್ಧ ಕುಡಿಯುವ ನೀರು ಪೂರೈಸುವುದು ಸರ್ಕಾರದ ಪ್ರಥಮ ಆದ್ಯತೆಯಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ತಿಳಿಸಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ 859 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದು, ಖಾಸಗಿ ಕೊಳವೆ ಬಾವಿಗಳು ಮತ್ತು ಟ್ಯಾಂಕರ್‌ಗಳನ್ನು ಬಾಡಿಗೆಗೆ ಪಡೆದು ಟ್ಯಾಂಕರ್ ಮೂಲಕ ನೀರು ಪೂರೈಸಲು ಕ್ರಮ ವಹಿಸಲಾಗಿದೆ. ಮುಖ್ಯಮಂತ್ರಿಗಳು ಗ್ರಾಮೀಣ ವಿಧಾನಸಭಾ ಕ್ಷೇತ್ರಗಳಿಗೆ 189 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದು ನೀರು ಪೂರೈಕೆಗೆ ಹಣದ ಕೊರತೆ ಇಲ್ಲ. ರಾಜ್ಯದ ಯಾವುದೇ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ ಎಂಬುದು ಇಲಾಖೆಯ ಗಮನಕ್ಕೆ ಬಂದರೆ, 24 ಗಂಟೆಗಳ ಒಳಗಾಗಿ ಅದಕ್ಕೆ ಪರಿಹಾರ ಒದಗಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

### ವಿಬಿ ಜಿ ರಾಮ್ ಜಿಯಿಂದ ರಾಜ್ಯಕ್ಕೆ ಹೊರೆ: ಖಂಡ್ರೆ ಅಸಮಾಧಾನ

ಈ ಹಿಂದೆ ಯುಪಿಎ ಸರ್ಕಾರದ ಅವಧಿಯಲ್ಲಿ ಜಾರಿಗೆ ಬಂದ ಮನ್ರೇಗಾ ಅಡಿಯಲ್ಲಿ ರಾಜ್ಯಸರ್ಕಾರ ಕೇವಲ ಶೇ.10ರಷ್ಟು ವೆಚ್ಚ ಭರಿಸುತ್ತಿತ್ತು. ಕೇಂದ್ರ ಸರ್ಕಾರ ಶೇ.90ರಷ್ಟು ಭರಿಸುತ್ತಿತ್ತು. ಆದರೆ, ಈಗ 60:40 ಅನುಪಾತ ಮಾಡಲಾಗಿದ್ದು, ರಾಜ್ಯಗಳಿಗೆ ಹೆಚ್ಚಿನ ಹೊರೆ ಆಗುತ್ತಿದೆ. ಆದಾಗ್ಯೂ ಯಶಸ್ವಿಯಾಗಿ ಯೋಜನೆಯನ್ನು ಜಾರಿಗೆ ತರಲಾಗಿದೆ. ಈವರೆಗೆ 1 ಕೋಟಿ 89 ಲಕ್ಷ ಮಾನವ ದಿನ ಸೃಜನೆಯಾಗಿದ್ದು, ದೇಶದಲ್ಲೇ ಕರ್ನಾಟಕ 6ನೇ ಸ್ಥಾನದಲ್ಲಿದೆ. ನಿತ್ಯ 2.5 ಲಕ್ಷ ಗ್ರಾಮೀಣ ಜನರು ವಿಬಿ ಜಿ ರಾಮ್ ಜಿಯಡಿ ಕೆಲಸ ಮಾಡುತ್ತಿದ್ದಾರೆ. 382 ರೂ. ಕೂಲಿ ನೀಡಲಾಗುತ್ತಿದೆ ಎಂದರು.ಬರದ ಹಿನ್ನೆಲೆಯಲ್ಲಿ ವೈಯಕ್ತಿಕ ಫಲಾನುಭವಿಗಳಿಗೆ ಕೊಳವೆಬಾವಿ ಮರುಪೂರಣ, ಬಾವಿ ತೋಡಿಸಲು, ಕೃಷಿ ಹೊಂಡ ನಿರ್ಮಿಸಲು, ಚೆಕ್ ಡ್ಯಾಂ ನಿರ್ಮಿಸಲು ಅವಕಾಶ ಕಲ್ಪಿಸಲಾಗುತ್ತಿದೆ. ಇದರ ಜೊತೆಗೆ ಶಾಲೆಯ ಆವರಣಗೋಡೆ, ಆಸ್ಪತ್ರೆ ಕಟ್ಟಡ ಇತ್ಯಾದಿ ಮಾಡಲೂ ಅವಕಾಶವಿದೆ. ಹೊಸ ಜಾಬ್ ಕಾರ್ಡ್ ಗಳನ್ನು ನೀಡಲಾಗಿದ್ದು, ಗ್ರಾಮೀಣ ಜನರು ಇದರ ಲಾಭ ಪಡೆದು, ಗ್ರಾಮಗಳಲ್ಲಿ ಶಾಶ್ವತ ಆಸ್ತಿ ಸೃಜನೆಗೆ ಸಹಕರಿಸಬೇಕು ಎಂದು ಹೇಳಿದರು. ಶಾಸಕರಾದ ರಾಜೇಗೌಡ, ಗಾಯತ್ರಿ ಶಾಂತೇಗೌಡ, ಇಲಾಖೆಯ ಆಯುಕ್ತ ವೈ.ಎಸ್. ಪಾಟೀಲ್ ಮತ್ತಿತರರು ಹಾಜರಿದ್ದರು,

### ಸಿಇಸಿ ನೇಮಕಾತಿ ಕಾಯ್ದೆ: ವಿಭಜಿತ ತೀರ್ಪು ಹಿಂಪಡೆಯಲು ಅರ್ಜಿ

## ಪರಿಶೀಲಿಸುವ ಭರವಸೆ ನೀಡಿದ ಸಿಜೆಐ



**ನವದೆಹಲಿ, ಅ.7:** ಮುಖ್ಯ ಚುನಾವಣಾ ಆಯುಕ್ತ ಹಾಗೂ ಚುನಾವಣಾ ಆಯುಕ್ತರ ನೇಮಕಾತಿಗೆ ಸಂಬಂಧಿಸಿದ 2023ರ ಕಾಯ್ದೆಯ ಸಾಂವಿಧಾನಿಕ ಮಾನ್ಯತೆ ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರದಲ್ಲಿ ಸೆಪ್ಟೆಂಬರ್ 23ರಂದು ನೀಡಿದ್ದ ವಿಭಜಿತ ತೀರ್ಪನ್ನು ಹಿಂಪಡೆಯುವಂತೆ ಕೋರಿ ಸಲ್ಲಿಸಿರುವ ಅರ್ಜಿಯನ್ನು ಪರಿಶೀಲಿಸಲು ಸುಪ್ರೀಂಕೋರ್ಟ್ ಬುಧವಾರ ಒಪ್ಪಿಕೊಂಡಿದೆ.

ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜಾಯ್ಮಾಲ್ಯ ಬಾಗ್ಚಿ ಮತ್ತು ವಿ. ಮೊಹನಾ ಅವರ ಪೀಠದ ಮುಂದೆ ಹಿರಿಯ ವಕೀಲ ಗೋಪಾಲ್ ಶಂಕರನಾರಾಯಣನ್ ಅರ್ಜಿಯನ್ನು ಪ್ರಸ್ತಾಪಿಸಿದರು. ಈ ವೇಳೆ, ಅರ್ಜಿಯನ್ನು ಪರಿಶೀಲಿಸಿ ಬಳಿಕ ನಿರ್ಧಾರ ಕೈಗೊಳ್ಳುತ್ತೇವೆ ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ತಿಳಿಸಿದ್ದಾರೆ.

ಸೆಪ್ಟೆಂಬರ್ 23ರಂದು ನ್ಯಾಯಮೂರ್ತಿಗಳಾದ ದೀಪಂಕರ್ ದತ್ತಾ ಮತ್ತು ಸತೀಶ್ ಚಂದ್ರ ಶರ್ಮಾ ಅವರ ದ್ವಿಸದಸ್ಯ ಪೀಠವು ಸಿಇಸಿ ಹಾಗೂ ಇಸಿಗಳ ನೇಮಕಾತಿ ಕಾಯ್ದೆಯನ್ನು ಪ್ರಶ್ನಿಸಿರುವ ಅರ್ಜಿಗಳನ್ನು ಸಂವಿಧಾನ ಪೀಠಕ್ಕೆ ವರ್ಗಾಯಿಸಬೇಕೇ ಎಂಬ ವಿಚಾರದಲ್ಲಿ ಭಿನ್ನಾಭಿಪ್ರಾಯ ವ್ಯಕ್ತಪಡಿಸಿತ್ತು. ನ್ಯಾಯಮೂರ್ತಿ ದತ್ತಾ ದೊಡ್ಡ ಪೀಠಕ್ಕೆ ಪ್ರಕರಣ ವರ್ಗಾಯಿಸುವ ಅಗತ್ಯವಿಲ್ಲ ಎಂದು ಅಭಿಪ್ರಾಯಪಟ್ಟಿದ್ದರೆ, ನ್ಯಾಯಮೂರ್ತಿ ಶರ್ಮಾ ಐವರು ನ್ಯಾಯಮೂರ್ತಿಗಳ ಸಂವಿಧಾನ ಪೀಠದ ವಿಚಾರಣೆಗೆ ಒಪ್ಪಿದ್ದರು.

ಇಬ್ಬರು ನ್ಯಾಯಮೂರ್ತಿಗಳ ನಡುವೆ ಒಮ್ಮತ ಮೂಡದ ಹಿನ್ನೆಲೆಯಲ್ಲಿ, ಸೂಕ್ತ ಸಂಖ್ಯೆಯ ನ್ಯಾಯಮೂರ್ತಿಗಳ ಪೀಠ ರಚಿಸುವ ಕುರಿತು ನಿರ್ಧಾರ ಕೈಗೊಳ್ಳಲು ಪ್ರಕರಣವನ್ನು ಮುಖ್ಯ ನ್ಯಾಯಮೂರ್ತಿಗಳ ಆಡಳಿತಾತ್ಮಕ ವಿಭಾಗದ ಮುಂದೆ ಇರಿಸಲಾಗಿತ್ತು.

ವಿಭಜಿತ ತೀರ್ಪನ್ನು ಹಿಂಪಡೆಯುವಂತೆ ಸಲ್ಲಿಸಿರುವ ಅರ್ಜಿಯಲ್ಲಿ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ಅವರ ಪುತ್ರ ಚುನಾವಣಾ ಆಯೋಗದ ಪರ ಮಧ್ಯಪ್ರದೇಶ ಹೈಕೋರ್ಟ್‌ನಲ್ಲಿ ಸ್ಥಾಯಿ ವಕೀಲರಾಗಿರುವ ವಿಚಾರವನ್ನು ಉಲ್ಲೇಖಿಸಲಾಗಿದೆ. ಈ ಹಿನ್ನೆಲೆಯಲ್ಲಿ ನ್ಯಾಯಮೂರ್ತಿ ಶರ್ಮಾ ವಿಚಾರಣೆಯಿಂದ ಹಿಂದೆ ಸರಿಯಬೇಕಿತ್ತೇ ಎಂಬ ಪ್ರಶ್ನೆಯನ್ನೂ ಅರ್ಜಿದಾರರು ಎತ್ತಿದ್ದಾರೆ.

ಇದೇ ವಿಚಾರಕ್ಕೆ ಸಂಬಂಧಿಸಿದಂತೆ ಮತ್ತೊಂದು ಕ್ಯುರೇಟಿವ್ ಅರ್ಜಿಯೂ ಸುಪ್ರೀಂಕೋರ್ಟ್‌ನಲ್ಲಿ ಸಲ್ಲಿಕೆಯಾಗಿದೆ ಎಂದು ಹಿರಿಯ ವಕೀಲರು ಪೀಠಕ್ಕೆ ತಿಳಿಸಿದ್ದಾರೆ. ಆದರೆ ಕ್ಯುರೇಟಿವ್ ಅರ್ಜಿ ಮತ್ತು ಪ್ರಸ್ತುತ ಸಲ್ಲಿಸಿರುವ ತೀರ್ಪು ಹಿಂಪಡೆಯುವ ಅರ್ಜಿ ಎರಡೂ ಪ್ರತ್ಯೇಕವಾಗಿವೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

## ಪ್ರದೂಷ್ ಮಾಫಿಸಾಕ್ಷಿಯಾಗಲು ವಿಜಯಲಕ್ಷ್ಮೀ ಪರ ವಕೀಲರ ಆಕ್ಷೇಪ

**ನವದೆಹಲಿ, ಅ.7:** ರೇಣುಕಾಸ್ವಾಮಿ ಕೊಲೆ ಪ್ರಕರಣದ ಆರೋಪಿ ಪ್ರದೂಷ್ ರಾವ್‌ನನ್ನು ಮಾಫಿಸಾಕ್ಷಿಯನ್ನಾಗಿ ಮಾಡಿರುವುದನ್ನು ಪ್ರಶ್ನಿಸಿ ನಟ ದರ್ಶನ್ ಪತ್ನಿ ವಿಜಯಲಕ್ಷ್ಮೀ ಸಲ್ಲಿಸಿರುವ ಅರ್ಜಿ ವಿಚಾರಣೆ ಸುಪ್ರೀಂಕೋರ್ಟ್‌ನಲ್ಲಿ ನಡೆಯಿತು. ವಿಚಾರಣೆ ವೇಳೆ ವಿಜಯಲಕ್ಷ್ಮೀ ಪರ ವಕೀಲ ನಾಗಮುತ್ತು ಅವರು, ಪ್ರದೂಷ್ ಮಾಫಿಸಾಕ್ಷಿಯಾಗಿರುವ ಪ್ರಕ್ರಿಯೆಯಲ್ಲಿ ಕಾನೂನಾತ್ಮಕ ಲೋಪಗಳಿವೆ. ವಿಚಾರಣೆ ಸಂದರ್ಭದಲ್ಲಿ ಆರೋಪಿಯಾಗಿದ್ದ ಪ್ರದೂಷ್, ವಕೀಲರ ಮೂಲಕ ಮಾಫಿ ಸಾಕ್ಷಿಯಾಗಲು ಅರ್ಜಿ ಸಲ್ಲಿಸಿದ್ದಾರೆ. ಆ ಅರ್ಜಿಯನ್ನು ಪ್ರಾಸಿಕ್ಯೂಷನ್ ಒಪ್ಪಿಕೊಂಡಿದ್ದು, ವಿಚಾರಣಾ ನ್ಯಾಯಾಲಯವೂ ಮಾಫಿ ಸಾಕ್ಷಿಯಾಗಲು ಅನುಮತಿ ನೀಡಿದೆ. ಇದನ್ನು ಪ್ರಶ್ನಿಸಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿತ್ತು. ಆದರೆ ಸೆಷನ್ಸ್ ಕೋರ್ಟ್ ಆದೇಶವನ್ನು ಹೈಕೋರ್ಟ್ ಎತ್ತಿಹಿಡಿದ ಹಿನ್ನೆಲೆಯಲ್ಲಿ ಇದೀಗ ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸಲಾಗಿದೆ ಎಂದು ವಾದಿಸಿದರು. ಪ್ರದೂಷ್ ಸೆಕ್ಷನ್ 164ರ ಅಡಿಯಲ್ಲಿ ಯಾವುದೇ ಹೇಳಿಕೆ ದಾಖಲಿಸಿಲ್ಲ. ಅಲ್ಲದೆ, ಸೆಕ್ಷನ್ 161ರ ಅಡಿಯಲ್ಲಿ ಹೇಳಿಕೆ ದಾಖಲಿಸುವ ಪ್ರಕ್ರಿಯೆಯೂ ನಡೆದಿಲ್ಲ. ಸೆಕ್ಷನ್ 364ರ ಪ್ರಕ್ರಿಯೆಯನ್ನೂ ಪಾಲಿಸಲಾಗಿಲ್ಲ ಎಂದು ನ್ಯಾಯಾಲಯದ ಗಮನಕ್ಕೆ ತಂದರು.

ಯಾವುದೇ ಹಿಂದಿನ ಹೇಳಿಕೆ ಇಲ್ಲದಿದ್ದರೂ ಕೇವಲ ವಕೀಲರ ಮೂಲಕ ಸಲ್ಲಿಸಲಾದ ಅರ್ಜಿಯ ಆಧಾರದ ಮೇಲೆ ಪ್ರದೂಷ್ ಅವರನ್ನು ಮಾಫಿ ಸಾಕ್ಷಿಯನ್ನಾಗಿ ಪರಿಗಣಿಸಲಾಗಿದೆ. ಈ ಹಿನ್ನೆಲೆಯಲ್ಲಿ ಮಾಫಿಸಾಕ್ಷಿಯನ್ನಾಗಿ ಮಾಡುವ ಪ್ರಕ್ರಿಯೆಯಲ್ಲಿ ಕಾನೂನಾತ್ಮಕ ತೊಡಕುಗಳಿವೆ ಎಂದು ನಾಗಮುತ್ತು ವಾದಿಸಿದರು. ವಾದ ಆಲಿಸಿದ ಸುಪ್ರೀಂಕೋರ್ಟ್ ಮತ್ತಷ್ಟು ಮಾಹಿತಿ ಸಲ್ಲಿಕೆಗೆ ಸೂಚಿಸಿ ವಿಚಾರಣೆಯನ್ನು ನಾಳೆಗೆ ಮುಂದೂಡಿತು.

## ಮಾತನಾಡುವ ಸಾಮರ್ಥ್ಯ ಕಳೆದುಕೊಂಡವರಿಗೆ ಧ್ವನಿ ನೀಡಲು ಸರ್ಕಾರ ಮಹತ್ವದ ಹೆಜ್ಜೆ

■ ಕರ್ನಾಟಕ ಇನ್ನೋವೇಷನ್ ಅಂಡ್ ಟೆಕ್ನಾಲಜಿ ಸೊಸೈಟಿ – ಎಲೆವನ್ ಲ್ಯಾಬ್ಸ್ ಜತೆ ಒಪ್ಪಂದಕ್ಕೆ ಅಂಕಿತ

**ಬೆಂಗಳೂರು, ಅ.7:** ಮಾತನಾಡುವ ಸಾಮರ್ಥ್ಯ ಕಳೆದುಕೊಂಡವರ ಬಾಳಿನಲ್ಲಿ ಮತ್ತೆ ಹೊಸ ಆಶಾಕಿರಣ ಮೂಡಿಸಲು ಕರ್ನಾಟಕ ಸರ್ಕಾರ ಮಹತ್ವದ ಹೆಜ್ಜೆ ಇಟ್ಟಿದೆ. ರಾಜ್ಯ ಸರ್ಕಾರದ ಎಲೆಕ್ಟ್ರಾನಿಕ್ಸ್, ಐಟಿ–ಬಿಟಿ ಇಲಾಖೆಯ ಅಡಿಯ ಕರ್ನಾಟಕ ಇನ್ನೋವೇಷನ್ ಅಂಡ್ ಟೆಕ್ನಾಲಜಿ ಸೊಸೈಟಿ ಜಾಗತಿಕ ಮಟ್ಟದ ಪ್ರಮುಖ ವಾಯ್ಸ್ ಎಐ ಸಂಸ್ಥೆಯಾದ 'ಎಲೆವನ್ ಲ್ಯಾಬ್ಸ್' ಜೊತೆಗೆ ತಿಳಿವಳಿಕೆ ಒಪ್ಪಂದಕ್ಕೆ ಅಂಕಿತ ಹಾಕಿದೆ.

ಸಾರ್ವಜನಿಕರ ಹಿತದೃಷ್ಟಿ ಹಾಗೂ ಸರ್ಕಾರಿ ಸೇವೆಗಳನ್ನು ಸುಲಭವಾಗಿ ತಲುಪಿಸುವ ಉದ್ದೇಶದಿಂದ ಈ ಜವಾಬ್ದಾರಿಯುತ ಎಐ ಸಹಭಾಗಿತ್ವ ಏರ್ಪಟ್ಟಿದೆ.ಈ ನೂತನ ಒಪ್ಪಂದದ ಪ್ರಮುಖ ಆದ್ಯತೆಯೆಂದರೆ ಕ್ಯಾನ್ಸರ್, ಎಎಲ್‌ಎಸ್ ಅಥವಾ ಇತರ ನರವೈಜ್ಞಾನಿಕ ಕಾಯಿಲೆಗಳಿಂದಾಗಿ ಮಾತನಾಡುವ ಸಾಮರ್ಥ್ಯ ಕಳೆದುಕೊಂಡ ನಾಗರಿಕರಿಗೆ ಉಚಿತವಾಗಿ ಎಐ ಧ್ವನಿ ಸೌಲಭ್ಯ ನೀಡುವುದು. ಎಲೆವನ್‌ಲ್ಯಾಬ್ಸ್‌ನ 'ಒನ್ ಮಿಲಿಯನ್ ವಾಯ್ಸಸ್' ಕಾರ್ಯಕ್ರಮದಡಿ ಅರ್ಹ ವ್ಯಕ್ತಿಗಳಿಗೆ ಉಚಿತ ಜೀವಿತಾವಧಿ ಪರವಾನಗಿ ಸಿಗಲಿದ್ದು, ಅವರು ತಮ್ಮದೇ ಆದ ಕೃತಕ ಧ್ವನಿಯಲ್ಲಿ (ಕನ್ನಡದಲ್ಲೂ ಸಹ) ಮತ್ತೆ ಸಂವಹನ ನಡೆಸಲು ಸಾಧ್ಯವಾಗಲಿದೆ.

ಈ ಯೋಜನೆಯ ಫಲಾನುಭವಿಗಳನ್ನು ಸರಿಯಾಗಿ ಗುರುತಿಸಲು ಕೆಐಟಿಎಸ್ ಈಗಾಗಲೇ ಮೈಸೂರಿನ 'ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ' ಜೊತೆ ಮಾತುಕತೆ ನಡೆಸುತ್ತಿದೆ.ಇದರ ಜೊತೆಗೆ ವಾಯ್ಸ್ ಎಐ ತಂತ್ರಜ್ಞಾನದ ದುರ್ಬಳಕೆ ತಡೆಯಲು ಬಲವಾದ ಸುರಕ್ಷತಾ ಚೌಕಟ್ಟನ್ನು ರೂಪಿಸಲು ಸರ್ಕಾರ ನಿರ್ಧರಿಸಿದೆ.

### ಸುರಕ್ಷತೆ ಜತೆಗೆ ನಂಬಿಕೆ ಕಾಯ್ದುಕೊಳ್ಳುವುದು ಕರ್ತವ್ಯ



ಈ ಸಹಭಾಗಿತ್ವದ ಕುರಿತು ಮಾತನಾಡಿದ ಐಟಿ–ಬಿಟಿ ಸಚಿವ ಪ್ರಿಯಾಂಕ್ ಖರ್ಗೆ, ಎಐ ತಂತ್ರಜ್ಞಾನವು ಜನರ ದೈನಂದಿನ ಜೀವನದಲ್ಲಿ ತರುವ ಸಕಾರಾತ್ಮಕ ಬದಲಾವಣೆಯ ಆಧಾರದ ಮೇಲೆ ಅದರ ಯಶಸ್ಸು ನಿರ್ಧಾರವಾಗುತ್ತದೆ. ತಂತ್ರಜ್ಞಾನದ ಸುಲಭ ಲಭ್ಯತೆಯ ಜೊತೆಗೆ ಸುರಕ್ಷತೆ ಮತ್ತು ನಂಬಿಕೆಯನ್ನು ಕಾಯ್ದುಕೊಳ್ಳುವುದು ಸರ್ಕಾರದ ಕರ್ತವ್ಯ ಎಂದು ಹೇಳಿದ್ದಾರೆ. ಭಾರತದ ರಾಜ್ಯ ಸರ್ಕಾರವೊಂದರ ಜೊತೆ ಮಾಡಿಕೊಳ್ಳುತ್ತಿರುವ ಮೊದಲ ಒಪ್ಪಂದ ಇದಾಗಿದ್ದು, ಕನ್ನಡ ಸೇರಿದಂತೆ ವಿವಿಧ ಭಾಷೆಗಳಲ್ಲಿ ನಾಗರಿಕ ಸೇವೆಗಳನ್ನು ಸರಳವಾಗಿ ತಲುಪಿಸಲು ವಾಯ್ಸ್ ತಂತ್ರಜ್ಞಾನ ಬಳಸಲು ಉತ್ಸುಕರಾಗಿರುವುದಾಗಿ ಎಲೆವನ್‌ಲ್ಯಾಬ್ಸ್ ಸಿಇಒ ಮಾಟಿ ಸ್ಟಾನಿಶೆವ್ಸ್ಕಿ ಸಂತಸ ಹಂಚಿಕೊಂಡಿದ್ದಾರೆ.

# 5 ವರ್ಷದಲ್ಲಿ ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ಭಾರಿ ಪಲ್ಲಟ: ಸವಾಲು ಎದುರಿಸಲು ಸರ್ಕಾರ ಸಿದ್ಧತೆ

### ಯುವಜನರನ್ನು ಸಜ್ಜುಗೊಳಿಸುವುದು ಸರ್ಕಾರದ ಜವಾಬ್ದಾರಿ: ಸಚಿವ ಡಾ. ಶರಣಪ್ರಕಾಶ್ ಪಾಟೀಲ್




**ಬೆಂಗಳೂರು, ಅ.7:** ಕೃತಕ ಬುದ್ಧಿಮತ್ತೆ (ಎಐ) ಹಾಗೂ ಹೊಸ ತಂತ್ರಜ್ಞಾನಗಳಿಂದ ಕೌಶಲ್ಯ ಕ್ಷೇತ್ರವು ಅತಿವೇಗವಾಗಿ ಬದಲಾಗುತ್ತಿದೆ, ಮುಂದಿನ ಐದು ವರ್ಷಗಳಲ್ಲಿ ಈ ಕ್ಷೇತ್ರದಲ್ಲಿ ಭಾರಿ ಪಲ್ಲಟ ಕಾದಿರುವುದರಿಂದ ಯುವಜನರನ್ನು ಸನ್ನದ್ಧರನ್ನಾಗಿ ಮಾಡುವುದು ಸರ್ಕಾರದ ಮುಖ್ಯ ಜವಾಬ್ದಾರಿಯಾಗಿದೆ ಎಂದು ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ತಿಳಿಸಿದರು.

ನವೆಂಬರ್ 3ರಿಂದ 5ರವರೆಗೆ ಬೆಂಗಳೂರಿನ ದಿ ಲಲಿತ್ ಅಶೋಕ್‌ನಲ್ಲಿ ನಡೆಯಲಿರುವ ಬೆಂಗಳೂರು ಕೌಶಲ್ಯ ಶೃಂಗಸಭೆ 2026 ಕಾರ್ಯಕ್ರಮದ ಮುಖ್ಯ ಉದ್ದೇಶಗಳನ್ನು ಸ್ಪಷ್ಟಪಡಿಸಿವೆ. ಈ ಕಾರ್ಯಕ್ರಮವು ಯುವಜನರಿಗೆ, ಶೈಕ್ಷಣಿಕ ಸಂಸ್ಥೆಗಳಿಗೆ ಹಾಗೂ ಉದ್ಯಮಗಳಿಗೆ ಒಂದು ಬೃಹತ್ ವೇದಿಕೆಯಾಗಲಿದೆ.

ವಿಕಾಸಸೌಧದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಸಚಿವರು, ವರ್ಕ್‌ಫೋರ್ಸ್ 2030: ಸ್ಕೇಲ್, ಸಿಸ್ಟಮ್ಸ್, ಸಿನರ್ಜಿ ಎಂಬ ಧ್ಯೇಯವಾಕ್ಯದಡಿ ಈ ಶೃಂಗಸಭೆಯು ಮೂಡಿಬರುತ್ತಿದೆ. ಜಗತ್ತಿನ ಮುಖ್ಯ ಐಟಿ ಹಬ್ ಆಗಿರುವ ಬೆಂಗಳೂರು, ಮುಂದೆ ಜಗತ್ತಿನ ಕೌಶಲ್ಯಪೂರ್ಣ ಶ್ರಮಿಕರ ಕೇಂದ್ರವಾಗಬೇಕು ಎಂದು ಆಶಾಭಾವನೆ ವ್ಯಕ್ತಪಡಿಸಿದರು. ಯುವಜನರಿಗೆ ಸರಿಯಾದ ಮಾರ್ಗದರ್ಶನ ಹಾಗೂ ಅವಕಾಶಗಳನ್ನು ಕಲ್ಪಿಸಿಕೊಡುವ ನಿಟ್ಟಿನಲ್ಲಿ, ಉದ್ಯಮಗಳು, ಶೈಕ್ಷಣಿಕ ಸಂಸ್ಥೆಗಳು ಹಾಗೂ ವಿದ್ಯಾರ್ಥಿಗಳಿಗೆ ಒಂದೇ ವೇದಿಕೆ ಕಲ್ಪಿಸಲು ಈ ಶೃಂಗಸಭೆಯನ್ನು ಆಯೋಜಿಸಲಾಗುತ್ತಿದೆ. ಯುವಜನರನ್ನು ಜಾಗತಿಕ ಮಟ್ಟದ ಉದ್ಯೋಗಗಳಿಗೆ ಸಜ್ಜುಗೊಳಿಸುವುದು ಸರ್ಕಾರದ ಮುಖ್ಯ ಗುರಿ ಎಂದು ಡಾ. ಶರಣಪ್ರಕಾಶ್ ಪಾಟೀಲ್ ತಿಳಿಸಿದರು.

ಈ ಬಾರಿಯ ಶೃಂಗಸಭೆಗೆ ಜಪಾನ್ ದೇಶವು ಕಂಟ್ರಿ ಪಾರ್ಟನರ್ ಆಗಿ ಭಾಗವಹಿಸುತ್ತಿದೆ. ಬೆಂಗಳೂರು ಮತ್ತು ಜಪಾನ್ ನಡುವಿನ ಬಾಂಧವ್ಯವನ್ನು ಮತ್ತಷ್ಟು ಗಟ್ಟಿಗೊಳಿಸಲು ಇದು ಉತ್ತಮ ಅವಕಾಶ ಎಂದು ಜಪಾನ್ ಕಾನ್ಸುಲ್ ಜನರಲ್ ಹಿರೋಶಿ ನವಾಟಾ ಅಭಿಪ್ರಾಯಪಟ್ಟರು.

ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳ ಉದ್ದೇಶಗಳು ಸರಿಯಾದ ರೀತಿಯಲ್ಲಿ ಜನರನ್ನು ತಲುಪುವಲ್ಲಿ ಮಾಧ್ಯಮಗಳ ಪಾತ್ರ ಅತ್ಯಂತ ಪ್ರಮುಖವಾಗಿದೆ ಎಂದು ಕಾರ್ಯಕ್ರಮದ ಆಯೋಜಕ ಟ್ರೆಸ್ಕಾನ್ ಸಂಸ್ಥೆಯ ಗ್ರೂಪ್ ಸಿಇಒ ನವೀನ್ ಭಾರದ್ವಾಜ್ ತಿಳಿಸಿದರು.

ಸಭೆಯಲ್ಲಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸುಬೋಧ್ ಯಾದವ್, ಕೆಎಸ್‌ಡಿಎ ಅಧ್ಯಕ್ಷ ಡಾ. ಇ.ವಿ. ರಮಣ ರೆಡ್ಡಿ, ನಿಗಮದ ಅಧಿಕಾರಿಗಳು ಹಾಗೂ ಟ್ರೆಸ್ಕಾನ್ ಸಂಸ್ಥೆಯ ಪ್ರತಿನಿಧಿಗಳು ಉಪಸ್ಥಿತರಿದ್ದರು.

### 100ಕ್ಕೂ ಹೆಚ್ಚು ಪಾಲುದಾರರು

ಬೆಂಗಳೂರು ಶೃಂಗಸಭೆಯಲ್ಲಿ 6,500 ಕ್ಕೂ ಅಧಿಕ ಪ್ರತಿನಿಧಿಗಳು, 150ಕ್ಕೂ ಹೆಚ್ಚು ಭಾಷಣಕಾರರು, 50ಕ್ಕೂ ಹೆಚ್ಚು ಪ್ರದರ್ಶಕರು ಹಾಗೂ 100ಕ್ಕೂ ಹೆಚ್ಚು ಪಾಲುದಾರರು ಭಾಗವಹಿಸಲಿದ್ದಾರೆ. ಶೃಂಗಸಭೆಯನ್ನು ನಾಲ್ಕು ವಿಷಯಾಧಾರಿತ ವಿಭಾಗಗಳಾಗಿ ವಿಂಗಡಿಸಲಾಗಿದೆ. ಉದಯೋನ್ಮುಖ ಕೌಶಲ್ಯಗಳು, ಎಲ್ಲರಿಗೂ ಕೌಶಲ್ಯಗಳು, ನವೀನತೆ, ಹಾಗೂ ಜಾಗತಿಕ ಕೌಶಲ್ಯಗಳು ಎಂಬ ನಾಲ್ಕು ಮುಖ್ಯ ಭಾಗಗಳಲ್ಲಿ ವಿಸ್ತಾರವಾದ ಚರ್ಚೆಗಳು ನಡೆಯಲಿವೆ. ಇದು ಹಸಿರು ಉದ್ಯೋಗಗಳು, ಎಐ, ಮಹಿಳೆಯರು, ಗಿಗ್ ಆರ್ಥಿಕತೆಯ ಕಾರ್ಮಿಕರು ಹಾಗೂ ಜಾಗತಿಕ ಉದ್ಯೋಗಾವಕಾಶಗಳನ್ನು ಒಳಗೊಂಡಿದೆ.

### ಸ್ಕಿಲ್ ಸ್ಪರ್ಧೆಯಲ್ಲಿ ಮೊದಲ ಸ್ಥಾನದ ಹೆಗ್ಗಳಿಕೆ

ಕೌಶಲ್ಯಾಭಿವೃದ್ಧಿ ಕ್ಷೇತ್ರದಲ್ಲಿ ಕರ್ನಾಟಕದ ಸಾಧನೆಗಳನ್ನು ಪ್ರಸ್ತಾಪಿಸಿದ ಕೆಎಸ್‌ಡಿಸಿ ಅಧ್ಯಕ್ಷರಾದ ಶಿವಕಾಂತಮ್ಮ (ಕಾಂತಾ) ನಾಯ್ಕ್ ಅವರು, ಈ ವರ್ಷ ಯುವಜನರಿಗೆ ಕೌಶಲ್ಯ ತರಬೇತಿ ಹಾಗೂ ಉದ್ಯಮಗಳೊಂದಿಗೆ ಜೋಡಣೆಯೇ ನಮ್ಮ ಪ್ರಮುಖ ಗುರಿಯಾಗಿದೆ ಎಂದರು.

# ಜ್ಞಾನೇಶ್ ರಾಜೀನಾಮೆ ನೀಡಿದ್ರೂ CEC ವಿರುದ್ಧ ಪ್ರತಿಭಟನೆ: ಸಿಜೆಪಿ



ನವದೆಹಲಿ, ಅ.7: ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ವಿರುದ್ಧದ ಪ್ರತಿಭಟನೆ ರಾಜೀನಾಮೆಯಿಂದ ಅಂತ್ಯಗೊಳ್ಳುವುದಿಲ್ಲ. ದೇಶದ ಚುನಾವಣಾ ವ್ಯವಸ್ಥೆಯಲ್ಲಿ ಸಮಗ್ರ ಸುಧಾರಣೆ ಆಗುವವರೆಗೂ ಹೋರಾಟ ಮುಂದುವರಿಯಲಿದೆ ಎಂದು ಸಿಜೆಪಿ ಘೋಷಿಸಿದೆ.

ದೆಹಲಿಯಲ್ಲಿ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಿಜೆಪಿ ಸಹ ಸಂಚಾಲಕ ಸೌರವ್ ದಾಸ್, ಜ್ಞಾನೇಶ್ ಕುಮಾರ್ ರಾಜೀನಾಮೆ ನೀಡಿದರೂ ಪ್ರತಿಭಟನಾಕಾರರು ಹಿಂದೆ ಸರಿಯುವುದಿಲ್ಲ. ಚುನಾವಣಾ ವ್ಯವಸ್ಥೆಯನ್ನು ಸ್ವಚ್ಛಗೊಳಿಸುವ ಅಗತ್ಯವಿದ್ದು, ಅದಕ್ಕಾಗಿ ದೀರ್ಘಾವಧಿಯ ಹೋರಾಟ ನಡೆಸಲಾಗುವುದು ಎಂದು ಹೇಳಿದರು. ಬಿಜೆಪಿಯು ಈ ಅಭಿಯಾನಕ್ಕೆ ವಿರೋಧ ವ್ಯಕ್ತಪಡಿಸುತ್ತಿರುವುದು ಶಾಶ್ವತ ಅಧಿಕಾರದ ಆಸೆಯನ್ನು ಪ್ರತಿಬಿಂಬಿಸುತ್ತದೆ ಎಂದು ಆರೋಪಿಸಿದರು. ಈ ಹೋರಾಟ ಸುಲಭವಾದದ್ದಲ್ಲ. ದೇಶದ ಎಲ್ಲೆಡೆಯಿಂದ ಜನರು ನಮ್ಮೊಂದಿಗೆ ಸೇರಬೇಕು. ರೈಲು ಮತ್ತು ವಿಮಾನ ಟಿಕೆಟ್‌ಗಳನ್ನು ಬುಕ್ ಮಾಡಿ ದೆಹಲಿಗೆ ಬನ್ನಿ ಎಂದು ಕರೆ ನೀಡಿದರು.

ಇತ್ತೀಚೆಗೆ ಸಿಜೆಪಿ ಹಾಗೂ ಕಾಂಗ್ರೆಸ್ ಬೆಂಬಲಿಗರ ಕೆಲವು ವಲಯಗಳ ನಡುವೆ ಸಾಮಾಜಿಕ ಜಾಲತಾಣದಲ್ಲಿ ವಾಗ್ವಾದ ನಡೆದಿತ್ತು. ಆದರೆ ರಾಜಕೀಯ ಪಕ್ಷಗಳು ಹಾಗೂ ಸಂಘಟನೆಗಳ ಸಿದ್ಧಾಂತಗಳಲ್ಲಿ ಭಿನ್ನಾಭಿಪ್ರಾಯಗಳಿದ್ದರೂ, ಚುನಾವಣಾ ವ್ಯವಸ್ಥೆಯಲ್ಲಿನ ಸಮಸ್ಯೆಗಳ ವಿರುದ್ಧದ ಹೋರಾಟದಲ್ಲಿ ಭಾಗವಹಿಸಿರುವ ಸಂಘಟನೆಗಳು ಒಗ್ಗಟ್ಟಾಗಿವೆ. ಮುರಿದುಹೋಗಿರುವ ವ್ಯವಸ್ಥೆಯನ್ನು ಬದಲಿಸುವ ದೊಡ್ಡ ಹೋರಾಟ ಇದಾಗಿದೆ ಎಂದು ದಾಸ್ ಹೇಳಿದರು.

ಅಕ್ಟೋಬರ್ 10ರಂದು ನಡೆಯಲಿರುವ ಪ್ರತಿಭಟನೆಗೆ ಸಂಬಂಧಿಸಿದಂತೆ ಆಯೋಜಕರು ಬುಧವಾರ ಸಂಸತ್ ಮಾರ್ಗ ಪೊಲೀಸ್ ಠಾಣೆಗೆ ಅಧಿಕೃತ ಮಾಹಿತಿ ನೀಡಿದ್ದು, ಅಗತ್ಯ ಭರವಸೆ ಪತ್ರಗಳನ್ನೂ ಸಲ್ಲಿಸಿದ್ದಾರೆ. ಅನುಮತಿ ಎಂಬ ಪದ ಬಳಸಬೇಡಿ. ನಮಗೆ ಅನುಮತಿ ನೀಡಲು ದೆಹಲಿ ಪೊಲೀಸರು ಯಾರು ಎಂದು ಪ್ರಶ್ನಿಸಿದ ಅವರು, ಪ್ರತಿಭಟನೆಯ ಕುರಿತು ಪೊಲೀಸರಿಗೆ ಮಾಹಿತಿ ನೀಡುವುದು ಸಾಕು. ನಾವು ದೆಹಲಿ ಪೊಲೀಸರೊಂದಿಗೆ ಸಹಕರಿಸುತ್ತೇವೆ. ಅವರೂ ನಮ್ಮೊಂದಿಗೆ ಸಹಕರಿಸುತ್ತಾರೆ ಎಂಬ ವಿಶ್ವಾಸವಿದೆ ಎಂದು ಹೇಳಿದರು.

ಜ್ಞಾನೇಶ್ ಕುಮಾರ್ ರಾಜೀನಾಮೆ, ಅವರ ವಿರುದ್ಧ ಕ್ರಿಮಿನಲ್ ಕ್ರಮ, ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಗೆ ತಡೆ, ಮುಂಬರುವ ಚುನಾವಣೆಗಳನ್ನು ಸ್ಥಗಿತಗೊಳಿಸುವುದು, ಜನವರಿ 2025ರ ಮತದಾರರ ಪಟ್ಟಿಯನ್ನು ಮರುಸ್ಥಾಪಿಸುವುದು ಹಾಗೂ ಸ್ವತಂತ್ರ ತನಿಖೆ ನಡೆಸುವುದು ಸೇರಿದಂತೆ ಹಲವು ಬೇಡಿಕೆಗಳನ್ನು ಮುಂದಿಡಲಾಗಿದೆ ಎಂದು ದಾಸ್ ತಿಳಿಸಿದರು. ಜತೆಗೆ, ಚುನಾವಣಾ ಆಯೋಗದ ನೇಮಕಾತಿಗೆ ಸಂಬಂಧಿಸಿದ 2023ರ ಕಾಯಿದೆಯನ್ನು ರದ್ದುಪಡಿಸಿ, ಚುನಾವಣಾ ಆಯುಕ್ತರನ್ನು ಆಯ್ಕೆ ಮಾಡಲು ಸ್ವತಂತ್ರ ವ್ಯವಸ್ಥೆ ರೂಪಿಸಬೇಕು ಎಂದು ಸಿಜೆಪಿ ಆಗ್ರಹಿಸಿದೆ.

ಅಕ್ಟೋಬರ್ 10ರಂದು ಚುನಾವಣಾ ಆಯೋಗದ ವಿರುದ್ಧ ನಡೆಯಲಿರುವ ಪ್ರತಿಭಟನೆಗೆ ಮುನ್ನ ಸಿಜೆಪಿ ಹಾಗೂ ವಿವಿಧ ವಿದ್ಯಾರ್ಥಿ ಸಂಘಟನೆಗಳು ಜಂಟಿ ಹೋರಾಟಕ್ಕೆ ಕರೆ ನೀಡಿವೆ. ದೇಶದ ವಿವಿಧ ಭಾಗಗಳಿಂದ ಜನರು ದೆಹಲಿಗೆ ಆಗಮಿಸಿ ದೀರ್ಘಕಾಲದ ಪ್ರತಿಭಟನೆಗೆ ಸಜ್ಜಾಗಬೇಕು ಎಂದು ಸಂಘಟನೆಗಳು ಮನವಿ ಮಾಡಿವೆ. ಅಕ್ಟೋಬರ್ 6ರಂದು ಇಂಡಿಯಾ ಮೈತ್ರಿಕೂಟದ ಸಂಸದರು ಚುನಾವಣಾ ಆಯೋಗದ ಕಚೇರಿಯತ್ತ ನಡೆಸಿದ ಪ್ರತಿಭಟನಾ ಮೆರವಣಿಗೆಗೂ ಸಂಘಟನೆಗಳು ಬೆಂಬಲ ವ್ಯಕ್ತಪಡಿಸಿದವು. ಚುನಾವಣಾ ಆಯೋಗದ ವಿರುದ್ಧದ ಹೋರಾಟವನ್ನು ಪ್ರಜಾಪ್ರಭುತ್ವ ಮತ್ತು ಸಂವಿಧಾನದ ರಕ್ಷಣೆಯ ದೊಡ್ಡ ಹೋರಾಟದ ಭಾಗವಾಗಿ ಸಂಘಟನೆಗಳು ಬಣ್ಣಿಸಿವೆ.

ಎಐಎಸ್‌ಎ ಅಧ್ಯಕ್ಷೆ ನೇಹಾ ಬೋರಾ, ವಿದ್ಯಾರ್ಥಿ ಸಂಘಟನೆಗಳ ಹೋರಾಟ ಮತ್ತು ಚುನಾವಣಾ ಆಯೋಗದ ವಿರುದ್ಧ ಪ್ರತಿಪಕ್ಷಗಳು ನಡೆಸುತ್ತಿರುವ ಪ್ರತಿಭಟನೆ ನಡುವೆ ಯಾವುದೇ ಭಿನ್ನಾಭಿಪ್ರಾಯವಿಲ್ಲ ಎಂದು ಹೇಳಿದರು. ನಮ್ಮ ನಡುವೆ ಯಾವುದೇ ವಿಭಜನೆಯಿಲ್ಲ. ನಾವು ಭಾರತದ ಜನರು ಮತ್ತು ಬಿಜೆಪಿ ಎಂಬ ಹೋರಾಟವಿದು. ಒಗ್ಗಟ್ಟಾಗಿ ಹೋರಾಡಿದರೆ ಪರಿಣಾಮಕಾರಿಯಾಗಿ ಹೋರಾಡಬಹುದು ಎಂದರು. ಬಿಜೆಪಿಯೊಂದಿಗೆ ಗುರುತಿಸಿಕೊಂಡಿರುವವರು ಕೂಡ ಪ್ರಜಾಪ್ರಭುತ್ವ ಮತ್ತು ಸಂವಿಧಾನದ ರಕ್ಷಣೆಯ ಅಭಿಯಾನಕ್ಕೆ ಸೇರುವಂತೆ ಅವರು ಕರೆ ನೀಡಿದರು. ಎಸ್‌ಎಫ್‌ಐನ ಆದರ್ಶ್ ಶಾಜಿ, ಜ್ಞಾನೇಶ್ ಕುಮಾರ್ ಅವರು ಭಾರತೀಯ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುತ್ತಿದ್ದಾರೆ ಎಂದು ಆರೋಪಿಸಿದರು. ನಡೆಯುತ್ತಿರುವ ಸಂಘರ್ಷವನ್ನು ಪ್ರಜಾಪ್ರಭುತ್ವ ಮತ್ತು ನಿರಂಕುಶತೆಯ ನಡುವಿನ ಹೋರಾಟ ಎಂದು ಅವರು ಬಣ್ಣಿಸಿದರು. ಸುದ್ದಿಗೋಷ್ಠಿಯಲ್ಲಿ ಅಖಿಲ ಭಾರತ ವಿದ್ಯಾರ್ಥಿ ಸಂಘಟನೆ, ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್, ಸ್ಟೂಡೆಂಟ್ಸ್ ಫೆಡರೇಷನ್ ಆಫ್ ಇಂಡಿಯಾ ಹಾಗೂ ಆಮ್ ಆದ್ಮಿ ಪಕ್ಷದ ವಿದ್ಯಾರ್ಥಿ ಘಟಕವಾದ ಅಸೋಸಿಯೇಷನ್ ಆಫ್ ಸ್ಟೂಡೆಂಟ್ಸ್ ಫಾರ್ ಆಲ್ಟರ್ನೇಟಿವ್ ಪಾಲಿಟಿಕ್ಸ್ ಪ್ರತಿನಿಧಿಗಳು ಭಾಗವಹಿಸಿದ್ದರು.




ರಾಷ್ಟ್ರಪತಿ ದ್ರೌಪದಿ ಮುರ್ಮು ಬುಧವಾರ ಹಿಮಾಚಲ ಪ್ರದೇಶದ ಪ್ರವಾಸದ ಸಂದರ್ಭದಲ್ಲಿ ರೋಹ್ಟಂಗ್‌ನ ಅಟಲ್ ಸುರಂಗಕ್ಕೆ ಭೇಟಿ ನೀಡಿದರು.

# ಪೊಲೀಸ್, ಅರ್‌ಎಎಫ್ ಸಿಬ್ಬಂದಿಗೆ ಬಾಡಿ ಕ್ಯಾಮರಾ 6 ತಿಂಗಳಲ್ಲಿ ಕ್ರಮಕ್ಕೆ ನಿರ್ದೇಶಿಸಿದ ದೆಹಲಿ ಹೈಕೋರ್ಟ್

**ನವದೆಹಲಿ, ಅ.8:** ಪ್ರತಿಭಟನೆ ಹಾಗೂ ಗುಂಪು ನಿಯಂತ್ರಣ ಕಾರ್ಯಾಚರಣೆ ವೇಳೆ ದೆಹಲಿ ಪೊಲೀಸ್ ಮತ್ತು ರ್‍ಯಾಪಿಡ್ ಆಕ್ಷನ್ ಫೋರ್ಸ್ ಸಿಬ್ಬಂದಿ ಕಡ್ಡಾಯವಾಗಿ ಬಾಡಿ–ವೋರ್ನ್ ಕ್ಯಾಮರಾ ಧರಿಸಬೇಕು ಎಂಬ ಬೇಡಿಕೆಗೆ ಸಂಬಂಧಿಸಿದಂತೆ ದೆಹಲಿ ಹೈಕೋರ್ಟ್ ಮಹತ್ವದ ನಿರ್ದೇಶನ ನೀಡಿದೆ. ಪೊಲೀಸರಿಗೆ ಹಾಗೂ RAF ಸಿಬ್ಬಂದಿಗೆ ಕ್ಯಾಮರಾ ಕಡ್ಡಾಯಗೊಳಿಸುವಂತೆ ನೇರ ಆದೇಶ ನೀಡಲು ನಿರಾಕರಿಸಿರುವ ನ್ಯಾಯಾಲಯ, ಈ ಕುರಿತು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸರ್ಕಾರದ ಮುಂದಿರುವ ಪ್ರಾತಿನಿಧ್ಯವೆಂದು ಪರಿಗಣಿಸಿ ಆರು ತಿಂಗಳೊಳಗೆ ನಿರ್ಧಾರ ಕೈಗೊಳ್ಳುವಂತೆ ಸೂಚಿಸಿದೆ.



ಪ್ರತಿಭಟನೆ, ಗುಂಪು ನಿಯಂತ್ರಣಾ ಅಥವಾ ಗುಂಪು ಚದುರಿಸುವ ಕಾರ್ಯಾಚರಣೆಯಲ್ಲಿ ನಿಯೋಜನೆಗೊಂಡ ಪ್ರತಿಯೊಬ್ಬ ದೆಹಲಿ ಪೊಲೀಸ್ ಹಾಗೂ ಖಂಈ ಸಿಬ್ಬಂದಿಗೂ ಬಾಡಿ ಕ್ಯಾಮರಾ ಕಡ್ಡಾಯಗೊಳಿಸುವಂತೆ ಪ್ರಮಾಣಿತ ಕಾರ್ಯಾಚರಣಾ ವಿಧಾನ ರೂಪಿಸಬೇಕು ಎಂದು ಅರ್ಜಿಯಲ್ಲಿ ಮನವಿ ಮಾಡಲಾಗಿತ್ತು. ಕರ್ತವ್ಯಕ್ಕೆ ನಿಯೋಜನೆಯಾದ ಕ್ಷಣದಿಂದ ಸಿಬ್ಬಂದಿಯನ್ನು ಕರ್ತವ್ಯದಿಂದ ಬಿಡುಗಡೆ ಮಾಡುವವರೆಗೂ ಕ್ಯಾಮರಾಗಳು ನಿರಂತರವಾಗಿ ಕಾರ್ಯನಿರ್ವಹಿಸು ವಂತೆ ವ್ಯವಸ್ಥೆ ರೂಪಿಸಬೇಕು ಎಂಬ ಬೇಡಿಕೆಯೂ ಇತ್ತು.

ಬಾಡಿ ಕ್ಯಾಮರಾ ಬಳಕೆಯಿಂದ ಪೊಲೀಸ್ ಮತ್ತು ಸಾರ್ವಜನಿಕರ ನಡುವಿನ ಸಂವಹನ ಹಾಗೂ ಕಾರ್ಯಾಚರಣೆಗಳ ದೃಶ್ಯ ದಾಖಲೆ ಲಭ್ಯವಾಗಲಿದ್ದು, ಪೊಲೀಸ್ ಕಾರ್ಯಾಚರಣೆಯಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಹೆಚ್ಚಿಸಲು ನೆರವಾಗಲಿದೆ ಎಂದು ಅರ್ಜಿದಾರರು ವಾದಿಸಿದ್ದರು. ಕ್ಯಾಮರಾದಲ್ಲಿ ದಾಖಲಾಗುವ ದೃಶ್ಯಗಳನ್ನು ಸುರಕ್ಷಿತವಾಗಿ ಸಂಗ್ರಹಿಸುವುದು, ಅದರ ಸಮಗ್ರತೆಯನ್ನು ಕಾಪಾಡುವುದು, ಎಷ್ಟು ಅವಧಿಗೆ ಸಂಗ್ರಹಿಸಬೇಕು ಎಂಬುದನ್ನು ನಿಗದಿಪಡಿಸುವುದು ಮತ್ತು ಅಗತ್ಯವಿದ್ದಲ್ಲಿ ನ್ಯಾಯಾಲಯದಲ್ಲಿ ಸಾಕ್ಷ್ಯವಾಗಿ ಬಳಸುವ ವ್ಯವಸ್ಥೆ ರೂಪಿಸಬೇಕು ಎಂದೂ ಅರ್ಜಿಯಲ್ಲಿ ಕೋರಲಾಗಿತ್ತು.

ಈ ಬೇಡಿಕೆಯ ಹಿನ್ನೆಲೆಯಲ್ಲಿ ನ್ಯಾಯಾಲಯವು ಸರ್ಕಾರಕ್ಕೆ ವಿಷಯವನ್ನು ಪರಿಶೀಲಿಸುವಂತೆ ಸೂಚಿಸಿದೆ. ಆರು ತಿಂಗಳೊಳಗೆ ಬಾಡಿ–ವೋರ್ನ್ ಕ್ಯಾಮರಾಗಳ ಕಾರ್ಯಾಚರಣೆ, ಬಳಕೆ, ದಾಖಲೆಗಳ ಸಂಗ್ರಹಣೆ ಮತ್ತು ನಿರ್ವಹಣೆ ಸೇರಿದಂತೆ SOP ರೂಪಿಸುವ ಕುರಿತು ನಿರ್ಧಾರ ಕೈಗೊಂಡು ತಿಳಿಸ'ಬೇಕು ಎಂದು ಸೂಚಿಸಲಾಗಿದೆ. ಸರ್ಕಾರದ ನಿರ್ಧಾರದಿಂದ ಅರ್ಜಿದಾರರು ಅಸಮಾಧಾನಗೊಂಡರೆ ಅಥವಾ ಕ್ರಮ ಕೈಗೊಳ್ಳದಿದ್ದರೆ ಮತ್ತೆ ನ್ಯಾಯಾಲಯದ ಮೊರೆ ಹೋಗಲು ಅವಕಾಶ ನೀಡಲಾಗಿದೆ.

ಜುಲೈ 2026ರಲ್ಲಿ ಜಂತರ್ ಮಂತರ್‌ನಲ್ಲಿ ನಡೆದ ಪ್ರತಿಭಟನೆಗಳ ಹಿನ್ನೆಲೆಯಲ್ಲಿ ಬಾಡಿ ಕ್ಯಾಮರಾ ಬಳಕೆಯ ಕುರಿತು ಈ ಬೇಡಿಕೆ ಮುನ್ನೆಲೆಗೆ ಬಂದಿತ್ತು. ಆ ಸಂದರ್ಭ ಪೊಲೀಸ್ ಮತ್ತು RAF ಸಿಬ್ಬಂದಿ ಅತಿಯಾದ ಬಲಪ್ರಯೋಗ ನಡೆಸಿದ್ದಾರೆ ಎಂಬ ಆರೋಪಗಳ ಜೊತೆಗೆ, ಪ್ರತಿಭಟನಾಕಾರರಿಂದ ಕಲ್ಲುತೂರಾಟ, ಧ್ವಂಸ ಹಾಗೂ ಪೊಲೀಸರ ಮೇಲೆ ದಾಳಿ ನಡೆದ ಆರೋಪಗಳೂ ಕೇಳಿಬಂದಿದ್ದವು. ಈ ಘಟನೆಗಳಿಗೆ ಸಂಬಂಧಿಸಿದ ಹಲವು ದೃಶ್ಯಗಳು ಸಾರ್ವಜನಿಕರ ಮೊಬೈಲ್ಗಳಿಂದ ದಾಖಲಾಗಿದ್ದವು ಎಂದು ಅರ್ಜಿಯಲ್ಲಿ ಉಲ್ಲೇಖಿಸಲಾಗಿತ್ತು.

ಅರ್ಜಿದಾರರ ಪ್ರಕಾರ, ಅಧಿಕೃತವಾಗಿ ದೃಢೀಕರಿಸಲಾದ ಪೊಲೀಸ್ ವಿಡಿಯೊ ದಾಖಲೆಗಳ ವ್ಯವಸ್ಥೆ ಇದ್ದರೆ ಇಂತಹ ಸಂದರ್ಭಗಳಲ್ಲಿ ನಡೆದ ಘಟನೆಗಳ ಬಗ್ಗೆ ನಿಖರ ದಾಖಲೆ ಲಭ್ಯವಾಗಲಿದೆ. ಇದರಿಂದ ಪೊಲೀಸ್ ಸಿಬ್ಬಂದಿಯ ಕ್ರಮಗಳ ಬಗ್ಗೆ ಮಾತ್ರವಲ್ಲದೆ, ಪ್ರತಿಭಟನಾಕಾರರ ವಿರುದ್ಧದ ಆರೋಪಗಳಿಗೂ ದೃಶ್ಯ ಸಾಕ್ಷ್ಯ ದೊರೆಯಲಿದೆ ಎಂಬ ವಾದವನ್ನು ಅರ್ಜಿಯಲ್ಲಿ ಮಾಡಲಾಗಿದೆ.

# ಯುಪಿ ಎಸ್‌ಐಆರ್: 16.18 ಲಕ್ಷ ನಿಗೂಢ ಮತದಾರರ ಸೇರ್ಪಡೆ

ಲಖನೌ, ಅ.7: ಉತ್ತರ ಪ್ರದೇಶದಲ್ಲಿ ವಿಶೇಷ ತೀವ್ರ ಪರಿಷ್ಕರಣೆಯ ಆರಂಭಿಕ ಹಂತಗಳಲ್ಲಿ 16.18 ಲಕ್ಷ ಮತದಾರರನ್ನು ಮತದಾರರ ಪಟ್ಟಿಗೆ ಸೇರಿಸಲಾಗಿದೆ ಎಂದು ಹೇಳಿರುವ ಭಾರತೀಯ ಚುನಾವಣಾ ಆಯೋಗ, ಅವರ ಗುರುತನ್ನು ಮರೆಮಾಚಿದೆ ಎಂದು 'ದಿ ರಿಪೋರ್ಟರ್ಸ್ ಕಲೆಕ್ಟಿವ್ ವರದಿ ಮಾಡಿದೆ.

ಕಾನೂನಿನ ಪ್ರಕಾರ ಸೇರ್ಪಡೆಗೊಳಿಸಲಾದ ಮತದಾರರ ಗುರುತನ್ನು ಬಹಿರಂಗಪಡಿಸುವುದು ಕಡ್ಡಾಯವಾಗಿದ್ದು, ಸ್ವತಃ ಚುನಾವಣಾ ಆಯೋಗವು ಕಾನೂನು ಉಲ್ಲಂಘಿಸಿರುವುದು ಬಹಿರಂಗವಾಗಿದೆ ಎಂದು ವರದಿ ತಿಳಿಸಿದೆ. ಕಾನೂನಿನ ಪ್ರಕಾರ, ಚುನಾವಣಾ ಆಯೋಗವು ಮುಖ್ಯ ಚುನಾವಣಾಧಿಕಾರಿ ವೆಬ್ಸೈಟ್ನಲ್ಲಿ ?ಛಾಯಾಚಿತ್ರವಿಲ್ಲದೆ ವೈಯಕ್ತಿಕ ಅರ್ಜಿ ನಮೂನೆಯೊಂದಿಗೆ ಮತಗಟ್ಟೆವಾರು ಹಕ್ಕುಗಳು ಮತ್ತು ಆಕ್ಷೇಪಣೆಗಳ ಪಟ್ಟಿಯನ್ನು ಪ್ರಕಟಿಸಬೇಕು.

ಆದರೆ ಈ 16.18 ಲಕ್ಷ ಮತದಾರರ ಸೇರ್ಪಡೆ ಅರ್ಜಿಗಳ ಪಟ್ಟಿ ಮತ್ತು ವಿವರಗಳು ಉತ್ತರ ಪ್ರದೇಶ ಸಿಇಒ ವೆಬ್‌ಸೈಟ್‌ನಲ್ಲಿ ಕಾಣಿಸುತ್ತಿಲ್ಲ ಎಂದು ವರದಿ ಬೊಟ್ಟುಮಾಡಿದೆ. ಸಿಇಒ ರಾಜ್ಯದ ಎಲ್ಲಾ ಚುನಾವಣಾ ಕಾರ್ಯಗಳ ಜವಾಬ್ದಾರಿ ಹೊಂದಿರುವ ಚುನಾವಣಾ ಆಯೋಗದ ಉನ್ನತ ಅಧಿಕಾರಿ ಮತ್ತು ನವದೆಹಲಿಯಲ್ಲಿರುವ ಆಯೋಗಕ್ಕೆ ನೇರವಾಗಿ ವರದಿ ಮಾಡುತ್ತಾರೆ.

ಮುಂಬರುವ ವಿಧಾನಸಭಾ ಚುನಾವಣೆಯನ್ನು ಎದುರಿಸುತ್ತಿರುವ ಭಾರತದ ಅತಿ ಹೆಚ್ಚು ಜನಸಂಖ್ಯೆಯ ರಾಜ್ಯದಲ್ಲಿ ಮತದಾರರ ಪಟ್ಟಿಯ ಪರಿಷ್ಕರಣೆಯನ್ನು ವಿಶ್ಲೇಷಿಸುವಾಗ ದಿ ರಿಪೋರ್ಟರ್ಸ್? ಕಲೆಕ್ಟಿವ್ ಈ ಕಾನೂನು ಉಲ್ಲಂಘನೆಯನ್ನು ಪತ್ತೆಹಚ್ಚಿದೆ. ಸ್ವತಂತ್ರ ತಂತ್ರಜ್ಞಾನ ತಜ್ಞರ ಸಹಾಯದಿಂದ, ಉತ್ತರ ಪ್ರದೇಶ ಸಿಇಒ ಸಾರ್ವಜನಿಕಗೊಳಿಸಿದ್ದ ಎಲ್ಲಾ ಫಾರ್ಮ್ 6 ಅರ್ಜಿಗಳನ್ನು ವಿಭಜಿತ ರೂಪದಲ್ಲಿ ಡೌನ್ಲೋಡ್ ಮಾಡಿ, ಒಟ್ಟುಗೂಡಿಸಿ ವಿಶ್ಲೇಷಿಸಿದಾಗ ಹೊಸ ವಿಚಾರವೊಂದು ಬೆಳಕಿಗೆ ಬಂದಿದೆ.

ಚುನಾವಣಾ ಆಯೋಗ ಒಟ್ಟು 71.38 ಲಕ್ಷ ಜನರು ಮತದಾರರ ಪಟ್ಟಿಗೆ ಸೇರ್ಪಡೆಗೊಳ್ಳಲು ಸಲ್ಲಿಸಿದ್ದ ಅರ್ಜಿಗಳ ವಿವರಗಳನ್ನು ಪ್ರಕಟಿಸಿರುವುದು ಕಂಡುಬಂದಿದೆ. ಇವರಲ್ಲಿ ಹೆಚ್ಚಿನವರು ಕರಡು ಪಟ್ಟಿಯಿಂದ ಅಳಿಸಲ್ಪಟ್ಟವರು. ಇದಕ್ಕೆ ವಿರುದ್ಧವಾಗಿ ಅಂತಿಮ ಪಟ್ಟಿಗೆ 84.3 ಲಕ್ಷ ಮತದಾರರನ್ನು ಸೇರಿಸಿದೆ. ಅಂದರೆ ವಿವರಗಳನ್ನು ಪ್ರಕಟಿಸಿರುವ ಅರ್ಜಿದಾರರಿಗಿಂತ 12.92 ಲಕ್ಷ ಹೆಚ್ಚು ಮತದಾರರನ್ನು ಸೇರಿಸಲಾಗಿದೆ.

ಇದು ಕಾನೂನುಬದ್ಧವಾಗಿ ಅಸಾಧ್ಯ. ಫಾರ್ಮ್ 6 ಮೂಲಕ ಅರ್ಜಿ ಸಲ್ಲಿಸಿದಾಗ ಮಾತ್ರ ಮತದಾರ ರನ್ನು ಪಟ್ಟಿಗೆ ಸೇರಿಸಬಹುದು. ಸೇರ್ಪಡೆಗಾಗಿ ಅರ್ಜಿ ಸಲ್ಲಿಸಿದವರ ಸಂಖ್ಯೆಯನ್ನು ಮೀರಿ ಮತದಾರರ ಪಟ್ಟಿಗೆ ಜನರನ್ನು ಸೇರಿಸಲು ಸಾಧ್ಯವಿಲ್ಲ ಎಂದು ತನಿಖಾ ವರದಿಯು ತಿಳಿಸಿದೆ. ಕರಡು ಪಟ್ಟಿಯಿಂದ ಮತದಾರರನ್ನು ಅಳಿಸಲು ಚುನಾವಣಾ ಆಯೋಗಕ್ಕೆ ಕೆಲವು ಲಕ್ಷ ಅರ್ಜಿಗಳು ಸಲ್ಲಿಕೆಯಾಗಿದ್ದವು ಎಂಬುದನ್ನು ಪರಿಗಣಿಸಿದರೆ, ಈ ಹೆಚ್ಚುವರಿ ಮತದಾರರ ಸೇರ್ಪಡೆ ಅನುಮಾನಕ್ಕೆ ಇಂಬು ನೀಡುತ್ತದೆ ಎಂದು ವರದಿಯು ವಿಶ್ಲೇಷಿಸಿದೆ.

ಮಾರ್ಚ್ 7ರಂದು ಹೊರಡಿಸಿದ ಪತ್ರಿಕಾ ಪ್ರಕಟಣೆಯೊಂದರಲ್ಲಿ, ಕರಡು ಪಟ್ಟಿಯನ್ನು ಸಿದ್ಧಪಡಿಸುವುದಕ್ಕೂ ಮುನ್ನವೇ 16.18 ಲಕ್ಷ ಮತದಾರರು ಪಟ್ಟಿಗೆ ಸೇರಿಸಲು ಅರ್ಜಿ ಸಲ್ಲಿಸಿದ್ದರು ಎಂದು ಆಯೋಗ ಒಮ್ಮೆ ಸಂಕ್ಷಿಪ್ತವಾಗಿ ಉಲ್ಲೇಖಿಸಿರು ವುದು ಕಂಡುಬಂದಿದೆ. ಎಸ್‌ಐಆರ್ ಅಡಿಯಲ್ಲಿ ಕರಡು ಪಟ್ಟಿಯನ್ನು ಸಿದ್ಧಪಡಿಸಿದ ನಂತರವೇ, ತಮ್ಮ ಹೆಸರುಗಳನ್ನು ತೆಗೆದು ಹಾಕಲಾಗಿದೆಯೇ, ಕಾಣೆಯಾಗಿದೆ ಯೆಂದು, ಮೃತಪಟ್ಟಿದ್ದಾರೆಂದು, ಸ್ಥಳಾಂತರಗೊಂಡಿದ್ದಾರೆಂದು ಅಥವಾ ನಕಲಿ ಎಂದು ಘೋಷಿಸಲಾಗಿದೆಯೇ ಎಂಬುದು ಜನರಿಗೆ ತಿಳಿಯುತ್ತದೆ. ಆದರೆ, ಈ ಕರಡು ಪಟ್ಟಿ ಸಾರ್ವಜನಿಕಗೊಳ್ಳುವ ಮೊದಲೇ 16.18 ಲಕ್ಷ ಮತದಾರರು ಫಾರ್ಮ್ 6 ಮೂಲಕ ಅರ್ಜಿ ಸಲ್ಲಿಸಿದ್ದರು ಎಂದು ಇಲಖ ಹೇಳಿದೆ. ಈ ಹಂತದಲ್ಲಿ ಅರ್ಜಿ ಸಲ್ಲಿಸುವವರು ಮತದಾನದ ವಯಸ್ಸಿಗೆ ತಲುಪಿದ ನಾಗರಿಕರೇ ಆಗಿರಬಹುದು. ಕಾನೂನಿನ ಪ್ರಕಾರ, ಸೇರ್ಪಡೆ ಅಥವಾ ಅಳಿಸುವಿಕೆಗಾಗಿ ಅರ್ಜಿ ಸಲ್ಲಿಸುವವರ ಹೆಸರುಗಳು ಮತ್ತು ವಿವರಗಳನ್ನು ಸಾರ್ವಜನಿಕಗೊಳಿಸಬೇಕು. ಇದರಿಂದ ಇತರರು ಆ ಅರ್ಜಿ ನ್ಯಾಯಸಮ್ಮತವೇ ಮತ್ತು ಅದನ್ನು ಹೇಗೆ ಪರಿಗಣಿಸಲಾಗಿದೆ ಎಂಬುದನ್ನು ಪರಿಶೀಲಿಸಬಹುದು. ಉತ್ತರ ಪ್ರದೇಶದ ಚುನಾವಣಾ ಅಧಿಕಾರಿಗಳು ಈ ಮಾಹಿತಿಯನ್ನು ಒದಗಿಸಲು ವಿಫಲವಾದ ಕಾರಣ, ಈ ಮತದಾರರು ಯಾರು, ಅವರನ್ನು ಯಾವ ವಿಧಾನಸಭಾ ಕ್ಷೇತ್ರಗಳು ಅಥವಾ ಮತಗಟ್ಟೆಗಳಿಗೆ ಸೇರಿಸಲಾಗಿದೆ, ಅಥವಾ ರಾಜ್ಯವು ಅವರ ಅರ್ಹತೆಯನ್ನು ನಿಜವಾಗಿಯೂ ಪರಿಶೀಲಿಸಿತೇ ಎಂಬುದನ್ನು ಈ ಹಂತದಲ್ಲಿ ನಿರ್ಧರಿಸಲು ಸಾಧ್ಯವಿಲ್ಲ ಎಂದು ವರದಿ ತಿಳಿಸಿದೆ.

# ಮೋದಿ–ಶಾ ಆಡಳಿತದ ಭಯ ತೊಲಗಿದ್ದು ಅದ್ಭುತ: ನೇಹಾ ಬೋರಾ



**ನವದೆಹಲಿ, ಅ. 7:** ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ (ಮೋಶಾ) ಅವರ ಆಡಳಿತಾವಧಿಯಲ್ಲಿ ದೇಶದಲ್ಲಿದ್ದ ಭಯ ಮತ್ತು ಆತಂಕದ ವಾತಾವರಣವು ಸದ್ಯ ಕಡಿಮೆಯಾಗುತ್ತಿದೆ. ವಿದ್ಯಾರ್ಥಿಗಳು ಹಾಗೂ ನಾಗರಿಕರ ಜಾಗೃತಿಯಿಂದಾಗಿ ಈ ಭಯವು ತೊಲಗುತ್ತಿರುವುದು ಒಂದು ಅದ್ಭುತ ಸಂಗತಿ ಎಂದು ಅಖಿಲ ಭಾರತ ವಿದ್ಯಾರ್ಥಿಗಳ ಸಂಘದ ರಾಷ್ಟ್ರೀಯ ಅಧ್ಯಕ್ಷೆ ಹಾಗೂ ಯುವ ಹೋರಾಟಗಾರ್ತಿ ನೇಹಾ ಬೋರಾ ಹೇಳಿದ್ದಾರೆ. ವಿದ್ಯಾರ್ಥಿ ಸಂಘಟನೆಗಳು ಹಾಗೂ ಸಾರ್ವಜನಿಕ ಚಳವಳಿಗಳ ಕುರಿತು ಮಾತನಾಡಿದ ನೇಹಾ ಬೋರಾ, ಕೇಂದ್ರ ಸರ್ಕಾರದ ನೀತಿಗಳು, ತನಿಖಾ ಸಂಸ್ಥೆಗಳ ಮೇಲಿನ ಒತ್ತಡ, ಪ್ರಜಾಸತ್ತಾತ್ಮಕ ಧ್ವನಿಗಳ ಹತೋಟಿಯಿಂದಾಗಿ ಕಳೆದ ಕೆಲವು ವರ್ಷಗಳಲ್ಲಿ ದೇಶದಲ್ಲಿ ಮತ್ತು ಶೈಕ್ಷಣಿಕ ಸಂಸ್ಥೆಗಳಲ್ಲಿ ಒಂದು ರೀತಿಯ ಭಯದ ವಾತಾವರಣ ಸೃಷ್ಟಿಯಾಗಿತ್ತು. ಆದರೆ, ಇತ್ತೀಚೆಗೆ ವಿದ್ಯಾರ್ಥಿ ಸಮುದಾಯ ಮತ್ತು ಸಾರ್ವಜನಿಕರು ತಮ್ಮ ಹಕ್ಕುಗಳಿಗಾಗಿ ಬೀದಿಗಿಳಿದು ಧ್ವನಿ ಎತ್ತುತ್ತಿರುವುದು ಪ್ರಜಾಪ್ರಭುತ್ವದ ನಿಜವಾದ ಶಕ್ತಿಯನ್ನು ತೋರಿಸಿದೆ ಎಂದು ತಿಳಿಸಿದ್ದಾರೆ. ಕೇಂದ್ರದ ಮೋಶಾ ಸರ್ಕಾರವು ಬಿತ್ತಿದ್ದ ಭಯದ ವಾತಾವರಣವು ದೇಶದ ಪ್ರಜಾಸತ್ತಾತ್ಮಕ ಮೌಲ್ಯಗಳನ್ನೇ ಹತ್ತಿಕ್ಕುವ ಹಂತಕ್ಕೆ ತಲುಪಿತ್ತು. ಕೇಂದ್ರ ತನಿಖಾ ಸಂಸ್ಥೆಗಳ ದುರ್ಬಳಕೆ, ವಿದ್ಯಾರ್ಥಿ ಚಳವಳಿಗಳ ಮೇಲಿನ ದಬ್ಬಾಳಿಕೆ, ಸಾಂವಿಧಾನಿಕ ಹಕ್ಕುಗಳನ್ನು ಪ್ರತಿಪಾದಿಸುವವರನ್ನು ಗುರಿಯಾಗಿಸಿಕೊಂಡಿದ್ದರಿಂದ ಜನಸಾಮಾನ್ಯರು ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿದ್ದವರು ಭಯದಲ್ಲೇ ದಿನ ದೂಡುವಂತಾಗಿತ್ತು ಎಂದು ಹೇಳಿದ್ದಾರೆ.

ಆದರೆ, ಮೋಶಾ ಆಡಳಿತ ಬಿತ್ತಿದ್ದ ಭಯದ ವಾತಾವರಣವನ್ನು ಮೆಟ್ಟಿ ನಿಂತು ಯುವಜನತೆ ಮತ್ತು ವಿದ್ಯಾರ್ಥಿಗಳು ಹೋರಾಟದ ಹಾದಿ ಹಿಡಿದಿರುವುದು, ಈ ಭಯದ ನಿವಾರಣೆಯಾಗುತ್ತಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಸಿಕ್ಕ ದೊಡ್ಡ ಜಯ ಎಂದೂ ತಿಳಿಸಿದ್ದಾರೆ. ಅಖಿಲ ಭಾರತ ವಿದ್ಯಾರ್ಥಿಗಳ ಸಂಘವು ದೇಶಾದ್ಯಂತ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿ ಹಕ್ಕುಗಳ ರಕ್ಷಣೆ, ಸಾಂವಿಧಾನಿಕ ಮೌಲ್ಯಗಳ ಪುನರುಜ್ಜೀವನ ಮತ್ತು ಮುಕ್ತ ಶೈಕ್ಷಣಿಕ ವಾತಾವರಣಕ್ಕಾಗಿ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸಲಿದೆ ಎಂದು ನೇಹಾ ಬೋರಾ ಈ ಸಂದರ್ಭದಲ್ಲಿ ಸ್ಪಷ್ಟಪಡಿಸಿದರು.

# ಪ್ರತಿಭಟನೆ ಬಿಸಿ: ಛತ್ತೀಸ್‌ಗಢ ಭೇಟಿ ಮುಂದೂಡಿದ ಜ್ಞಾನೇಶ್ ಕುಮಾರ್



**ನವದೆಹಲಿ, ಅ. 7:** ದೇಶದ ಪ್ರಜಾಪ್ರಭುತ್ವದ ಪ್ರಮುಖ ಸ್ವಾಯತ್ತ ಅಂಗವೆಂದು ನಾವು ಈವರೆಗೆ ನಂಬಿಕೊಂಡು ಬಂದಿರುವ ಚುನಾವಣಾ ಆಯೋಗವು (ಇಸಿಐ) ಸದ್ಯ ರಾಜಕೀಯ ಸಂಘರ್ಷದ ಕೇಂದ್ರಬಿಂದುವಾಗಿದೆ. ಹಲವು ನಿರ್ಧಾರಗಳನ್ನು ಏಕಪಕ್ಷೀಯವಾಗಿ ತೆಗೆದುಕೊಂಡ ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್‌ಕುಮಾರ್ ಅವರ ವಿರುದ್ಧ ವಿಪಕ್ಷಗಳು ತೀವ್ರ ವಾಗ್ದಾಳಿ ನಡೆಸುತ್ತಿವೆ. ದೇಶದ ಇತಿಹಾಸದಲ್ಲೇ ಮೊದಲ ಬಾರಿಗೆ ಸಿಇಸಿ ರಾಜೀನಾಮೆಗೆ ಇಷ್ಟೊಂದು ದೊಡ್ಡ ಮಟ್ಟದ ರಾಜಕೀಯ ಆಕ್ರೋಶ ವ್ಯಕ್ತವಾಗುತ್ತಿದೆ. ಈ ಬೆನ್ನಲ್ಲೇ ಹೆದರಿರುವ ಜ್ಞಾನೇಶ್‌ಕುಮಾರ್ ಅವರು ಛತ್ತೀಸ್ಗಢ ಪ್ರವಾಸವನ್ನು ದಿಢೀರ್ ರದ್ದು ಮಾಡಿಕೊಂಡಿದ್ದಾರೆ.

ಅಕ್ಟೋಬರ್ 7 ಮತ್ತು 8ರಂದು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್‌ಕುಮಾರ್ ಮತ್ತು ಆಯೋಗದ ಉನ್ನತ ಅಧಿಕಾರಿಗಳ ತಂಡ ಛತ್ತೀಸ್‌ಗಢಕ್ಕೆ ಎರಡು ದಿನಗಳ ಪ್ರವಾಸ ಕೈಗೊಳ್ಳಬೇಕಿತ್ತು. ದಂತೇವಾಡದ ದಂತೇಶ್ವರಿ ಮಾತಾ ದೇವಾಲಯ, ಕವರ್ಧಾದ ಭೋರಮ್ದೇವ್ ಮತ್ತು ಬಸ್ತಾರ್‌ನ ಚಿತ್ರಕೂಟ ಜಲಪಾತ ಸೇರಿದಂತೆ ರಾಜ್ಯದ ಪ್ರಮುಖ ಸ್ಥಳಗಳಿಗೆ ಭೇಟಿ ನೀಡುವ ಕಾರ್ಯಕ್ರಮ ನಿಗದಿಯಾಗಿತ್ತು.

ಆದರೆ ಇದೀಗ ಅನಿವಾರ್ಯ ತಾಂತ್ರಿಕ ಮತ್ತು ಕಾರ್ಯಾಚರಣೆಯ ಕಾರಣಗಳಿಂದಾಗಿ ಮುಖ್ಯ ಚುನಾವಣಾ ಆಯುಕ್ತರ ಛತ್ತೀಸ್‌ಗಢ ಭೇಟಿಯನ್ನು ಮುಂದೂಡಲಾಗಿದೆ ಎಂದು ಚುನಾವಣಾ ಆಯೋಗ ಹೇಳಿಕೊಂಡಿದೆ.

ವಿಪಕ್ಷಗಳ ಒಕ್ಕೂಟ ನಡೆಸುತ್ತಿರುವ ನಿರಂತರ ಪ್ರತಿಭಟನೆಗಳು, ರಾಯಪುರದಲ್ಲಿ ಎದುರಾಗಬಹುದಾಗಿದ್ದ ಕಪ್ಪು ಬಟ್ಟೆ ಪ್ರದರ್ಶನ ಪ್ರತಿಭಟನೆಯ ಭೀತಿಯಿಂದಾಗಿ ಈ ಪ್ರವಾಸವನ್ನು ಕೊನೆಕ್ಷಣದಲ್ಲಿ ರದ್ದುಗೊಳಿಸಲಾಗಿದೆ.

ದೆಹಲಿಯಲ್ಲಿ ನಡೆದ ತೀವ್ರ ಸ್ವರೂಪದ ಧರಣಿಯ ಬಿಸಿಯೇ ಈ ಭೇಟಿ ರದ್ದಾಗಲು ಪ್ರಮುಖ ಕಾರಣವೆಂಬುದು ಸ್ಪಷ್ಟವಾಗುತ್ತಿದೆ.

ದೇಶದ ಸಂಸದೀಯ ಇತಿಹಾಸದಲ್ಲೇ ಮೊದಲ ಬಾರಿಗೆ ಸಿಇಸಿ ಜ್ಞಾನೇಶ್‌ಕುಮಾರ್ ಅವರ ವಿರುದ್ಧ ಪ್ರತಿಪಕ್ಷಗಳು ಹಟಕ್ಕೆ ಬಿದ್ದು, ಅವರನ್ನು ಹುದ್ದೆಯಿಂದ ವಜಾಗೊಳಿಸಬೇಕೆಂದು ಸಂಸತ್ತಿನಲ್ಲೂ ದೂರು ನೀಡಿ, ಬೀದಿಗಿಳಿದು ಹೋರಾಟ ನಡೆಸಿವೆ. ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಅಕ್ರಮ ನಡೆದಿದೆ. ಲಕ್ಷಾಂತರ ಅರ್ಹ ಮತದಾರರ ಹೆಸರನ್ನು ಕೈಬಿಡಲಾಗಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸೇರಿದಂತೆ ವಿಪಕ್ಷಗಳು ಆರೋಪಿಸಿವೆ. ಮುಖ್ಯ ಚುನಾವಣಾ ಆಯುಕ್ತರು ಈ ಅಕ್ರಮಕ್ಕೆ ಸಾಥ್ ನೀಡುತ್ತಿದ್ದಾರೆ ಎಂದು ನೇರ ವಾಗ್ದಾಳಿ ನಡೆಸಲಾಗಿದೆ.

ದೆಹಲಿಯ ಚುನಾವಣಾ ಆಯೋಗದ ಕಚೇರಿಯತ್ತ ಮೆರವಣಿಗೆ ನಡೆಸಲು ಯತ್ನಿಸಿದ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಸೇರಿದಂತೆ ಸುಮಾರು 50ಕ್ಕೂ ಹೆಚ್ಚು ಸಂಸದರು ಮತ್ತು 250ಕ್ಕೂ ಹೆಚ್ಚು ಕಾರ್ಯಕರ್ತರನ್ನು ದೆಹಲಿ ಪೊಲೀಸರು ರಾತ್ರೋರಾತ್ರಿ ವಶಕ್ಕೆ ಪಡೆದಿದ್ದರು. ರಾಜಕೀಯ ನಾಯಕರು ಸಿಇಸಿ ವಿರುದ್ಧ 8 ಗಂಟೆಗಳ ಕಾಲ ಧರಣಿ ನಡೆಸಿದ್ದು ದೇಶದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ನಡೆದ ಘಟನೆ ಎಂದರೆ ತಪ್ಪಾಗಲಾರದು.

ನಾಗರಿಕ ಹಕ್ಕುಗಳ ಹೋರಾಟಗಾರರು ಮತ್ತು ಮಾಜಿ ಮುಖ್ಯ ಚುನಾವಣಾ ಆಯುಕ್ತರಾದ ಎಸ್.ವೈ. ಖುರೇಷಿ, ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳು ಮುಂತಾದವರು ಇತ್ತೀಚಿನ ನಿರ್ಧಾರಗಳ ಬಗ್ಗೆ ಕಳವಳ ವ್ಯಕ್ತಪಡಿಸಿದ್ದು, ಆಯೋಗವು ಸಾರ್ವಜನಿಕ ನಂಬಿಕೆಯನ್ನು ಕಳೆದುಕೊಳ್ಳುತ್ತಿರು ವುದು ಪ್ರಜಾಪ್ರಭುತ್ವಕ್ಕೆ ಅಪಾಯಕಾರಿ ಎಂದು ಎಚ್ಚರಿಸಿದ್ದಾರೆ.

# ನಟ ರಾಜ್‌ಪಾಲ್ ಯಾದವ್‌ಗೆ ಸುಪ್ರೀಂ ಸಲಹೆ



ನವದೆಹಲಿ, ಅ. 7: ಒಳ್ಳೆಯ ಸಿನಿಮಾ ಮಾಡಿ, ಜನರನ್ನು ಮತ್ತೆ ರಂಜಿಸಿ ಮತ್ತು ನಿಮ್ಮ ಇಮೇಜ್ ಅನ್ನು ಮತ್ತೆ ಕಟ್ಟಿಕೊಳ್ಳಿ ಎಂದು ಸುಪ್ರೀಂ ಕೋರ್ಟ್ ಬಾಲಿವುಡ್‌ನ ಪ್ರಸಿದ್ಧ ಹಾಸ್ಯ ನಟ ರಾಜ್‌ಪಾಲ್ ಯಾದವ್ ಅವರಿಗೆ ಸಲಹೆ ನೀಡಿದೆ. ಚೆಕ್ ಬೌನ್ಸ್ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯ ಕಾಂತ್ ಅವರನ್ನೊಳಗೊಂಡ ಪೀಠದ ಮುಂದೆ ನಟ ರಾಜ್‌ಪಾಲ್ ಯಾದವ್ ಅವರು ಖುದ್ದಾಗಿ ಹಾಜರಾಗಿದ್ದರು. ಈ ವೇಳೆ ಕೋರ್ಟ್ನಲ್ಲಿ ವಾದ–ಪ್ರತಿವಾದ ಹಾಗೂ ನ್ಯಾಯಮೂರ್ತಿಗಳ ನಡುವೆ ಸ್ವಾರಸ್ಯಕರ ಹಾಗೂ ಗಂಭೀರ ಮಾತುಕತೆಗಳು ನಡೆದವು. 2010ರಲ್ಲಿ ಬಿಡುಗಡೆಯಾದ ತಮ್ಮ ಅತಾ ಪತಾ ಲಾಪತಾ ಚಿತ್ರದ ನಿರ್ಮಾಣಕ್ಕಾಗಿ ರಾಜ್‌ಪಾಲ್ ಯಾದವ್ ಅವರು ಮುರಳಿ ಪ್ರಾಜೆಕ್ಟ್ಸ್ ಸಂಸ್ಥೆಯಿಂದ ಸಾಲ ಪಡೆದಿದ್ದರು. ಈ ಸಾಲಕ್ಕೆ ಸಂಬಂಧಿಸಿದಂತೆ ಅವರು ನೀಡಿದ್ದ ಚೆಕ್‌ಗಳು ಬೌನ್ಸ್ ಆಗಿದ್ದವು. ಕೋರ್ಟ್ ಕಲಾಪದಲ್ಲಿ ತಮ್ಮ ಕಷ್ಟ ತೋಡಿಕೊಂಡ ರಾಜ್‌ಪಾಲ್ ಯಾದವ್, ಅತಾ ಪತಾ ಲಾಪತಾ ಚಿತ್ರದಿಂದ ನನಗೆ ಕೋಟ್ಯಂತರ ರೂಪಾಯಿ ಭಾರಿ ನಷ್ಟವಾಯಿತು. 1 ರೂಪಾಯಿಯೂ ಲಾಭ ಸಿಗಲಿಲ್ಲ ಎಂದು ಹೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯ ನ್ಯಾಯಮೂರ್ತಿಗಳು, ನಿಮ್ಮ ಸಿನಿಮಾದ ಹೆಸರಿನಂತೆಯೇ ನಿಮ್ಮ ಹಣವೂ ಈಗ ಅತಾ ಪತಾ ಲಾಪತಾ (ಗಾಯಬ್) ಆಗಿದೆ ಎಂದು ಮಾರ್ಮಿಕವಾಗಿ ನುಡಿದರು. ನೀವು ಒಬ್ಬ ನಟ.

ಕೋರ್ಟ್‌ಗೆ ಅಲೆದಾಡುವ ಬದಲು ಮತ್ತೆ ಒಳ್ಳೆಯ ಸಿನಿಮಾಗಳನ್ನು ಮಾಡಿ ಜನರನ್ನು ನಗಿಸಿ, ನಿಮ್ಮ ಹಳೆಯ ಇಮೇಜ್ ಅನ್ನು ಮರಳಿ ಪಡೆಯಿರಿ ಎಂದೂ ನ್ಯಾಯಪೀಠ ಸಲಹೆ ನೀಡಿತು. ವಿಚಾರಣೆ ವೇಳೆ ನಟ ರಾಜ್‌ಪಾಲ್ ಯಾದವ್ ಪರ ವಕೀಲರು 1.15 ಕೋಟಿ ಮೊತ್ತದ ಡಿಮ್ಯಾಂಡ್ ಡ್ರಾಫ್ಟ್ (ಡಿಡಿ) ಸಲ್ಲಿಸಿದರು ಹಾಗೂ ಬಾಕಿ ಮೊತ್ತವನ್ನು ಪಾವತಿಸಲು ಸಮಯ ಕೋರಿದರು. ಪ್ರಕರಣಕ್ಕೆ ಸಂಬಂಧಿಸಿದಂತೆ ಅಕ್ಟೋಬರ್ 13ರ ಒಳಗಾಗಿ ಒಟ್ಟು 2 ಕೋಟಿ ಹಣವನ್ನು ಪಾವತಿಸುವಂತೆ ಸುಪ್ರೀಂ ಕೋರ್ಟ್ ನಟನಿಗೆ ನಿರ್ದೇಶನ ನೀಡಿದೆ. ನಿಗದಿತ ಹಣ ಪಾವತಿಸಿದ ಬಳಿಕವಷ್ಟೇ ಅವರ ಮೇಲ್ಮನವಿಯನ್ನು ಮುಂದಿನ ಹಂತದಲ್ಲಿ ಪರಿಶೀಲಿಸುವುದಾಗಿ ಕೋರ್ಟ್ ಸ್ಪಷ್ಟಪಡಿಸಿದೆ.



# 5 ಕೋಟಿ ರೂ. ನೀಡಿ ದರ್ಶನಕ್ಕೆ ಕರೆಸಲಾಗಿತ್ತು ಎಂಬ ಆರೋಪ: ವಿರಾಟ್ ಕೊಹ್ಲಿ ವಕ್ತಾರರಿಂದ ಖಂಡನೆ



**ಮಥುರಾ, ಅ.7:** ಸಂತ ಪ್ರೇಮಾನಂದ ಮಹಾರಾಜರ ಆಶ್ರಮಕ್ಕೆ ಕ್ರಿಕೆಟಿಗ ವಿರಾಟ್ ಕೊಹ್ಲಿ ಅವರನ್ನು 5 ಕೋಟಿ ರೂ. ನೀಡಿ ಕರೆಸಲಾಗಿತ್ತು ಎಂಬ ಫಲಾಹಾರಿ ಮಹಾರಾಜ ದಿನೇಶ್ ಶರ್ಮಾ ಅವರ ಆರೋಪವನ್ನು ವಿರಾಟ್ ಕೊಹ್ಲಿ ಅವರ ವಕ್ತಾರರು ತಳ್ಳಿಹಾಕಿದ್ದಾರೆ. ಆರೋಪಗಳು ಸಂಪೂರ್ಣ ಸುಳ್ಳು, ಆಧಾರರಹಿತ ಹಾಗೂ ವಾಸ್ತವಾಂಶಗಳಿಗೆ ವಿರುದ್ಧವಾಗಿವೆ ಎಂದು ಅಧಿಕೃತ ಹೇಳಿಕೆಯಲ್ಲಿ ಸ್ಪಷ್ಟಪಡಿಸಿದ್ದಾರೆ. ವಿರಾಟ್ ಕೊಹ್ಲಿ ಅವರು ಪ್ರೇಮಾನಂದ ಮಹಾರಾಜರನ್ನು ಭೇಟಿ ಮಾಡುವುದಕ್ಕೆ ಯಾವುದೇ ಹಣಕಾಸಿನ ಉದ್ದೇಶವಿಲ್ಲ. ಮಹಾರಾಜರ ಮೇಲಿನ ಆಳವಾದ ನಂಬಿಕೆ ಮತ್ತು ಗೌರವದ ಕಾರಣದಿಂದಲೇ ಕೊಹ್ಲಿ ಅವರ ದರ್ಶನಕ್ಕೆ ತೆರಳುತ್ತಾರೆ ಎಂದು ವಕ್ತಾರರು ಹೇಳಿದ್ದಾರೆ. ಇದು ಕೊಹ್ಲಿಯ ವೈಯಕ್ತಿಕ ಆಧ್ಯಾತ್ಮಿಕ ನಂಟು ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಈ ವಿವಾದಕ್ಕೆ ಕಾರಣವಾಗಿದ್ದು ಫಲಾಹಾರಿ ಮಹಾರಾಜ ದಿನೇಶ್ ಶರ್ಮಾ ಅವರ ಹೇಳಿಕೆ. ಶ್ರೀಕೃಷ್ಣ ಜನ್ಮಭೂಮಿ ಸಂಘರ್ಷ ನ್ಯಾಸದ ಅಧ್ಯಕ್ಷರಾಗಿರುವ ಅವರು, ಪ್ರೇಮಾನಂದ ಮಹಾರಾಜರಿಗೆ ಬರೆದ ಪತ್ರದಲ್ಲಿ ಕೊಹ್ಲಿ ಅವರನ್ನು 5 ಕೋಟಿ ರೂ. ನೀಡಿ ಆಶ್ರಮಕ್ಕೆ ಕರೆಸಲಾಗಿತ್ತು ಎಂದು ಆರೋಪಿಸಿದ್ದರು. ಈ ಆರೋಪದ ಹಿನ್ನೆಲೆಯಲ್ಲಿ ಕೊಹ್ಲಿ ಅವರ ತಂಡದಿಂದ ಇದೀಗ ಅಧಿಕೃತ ಪ್ರತಿಕ್ರಿಯೆ ಹೊರಬಿದ್ದಿದೆ.



ಪ್ರೇಮಾನಂದ ಮಹಾರಾಜರ ಆಶ್ರಮಕ್ಕೆ ಸಂಬಂಧಿಸಿದಂತೆ ಹಲವು ಆರೋಪಗಳನ್ನು ಮಾಡಿರುವ ಫಲಾಹಾರಿ ಮಹಾರಾಜರು, ಆಶ್ರಮದಲ್ಲಿ ಗುಂಪುಗಾರಿಕೆ ನಡೆಯುತ್ತಿದೆ ಎಂದು ಕೂಡ ಆರೋಪಿಸಿದ್ದರು. ಈ ಹಿನ್ನೆಲೆಯಲ್ಲಿ ಪ್ರೇಮಾನಂದ ಮಹಾರಾಜರು ಗೋವರ್ಧನದಲ್ಲಿ ವಾಸ್ತವ್ಯ ಹೂಡಬೇಕು ಹಾಗೂ ಅವರಿಗೆ ಹೆಚ್ಚಿನ ಭದ್ರತೆ ಒದಗಿಸಬೇಕು ಎಂದು ಮನವಿ ಮಾಡಿದ್ದರು. ಅಲ್ಲದೆ, ಕೆಲವು ಆರೋಪಗಳ ಕುರಿತು ಸಿಬಿಐ ತನಿಖೆಗೆ ಆಗ್ರಹಿಸಿದ್ದರು.

ಆದರೆ ವಿರಾಟ್ ಕೊಹ್ಲಿಗೆ ಸಂಬಂಧಿಸಿದ 5 ಕೋಟಿ ರೂ. ಆರೋಪವನ್ನು ಅವರ ವಕ್ತಾರರು ಸಂಪೂರ್ಣವಾಗಿ ನಿರಾಕರಿಸಿದ್ದಾರೆ. ಇಂತಹ ಹೇಳಿಕೆಗಳನ್ನು ಪ್ರಕಟಿಸುವ ಅಥವಾ ಪ್ರಸಾರ ಮಾಡುವ ಮೊದಲು ಮಾಧ್ಯಮಗಳು ವಾಸ್ತವಾಂಶಗಳನ್ನು ಪರಿಶೀಲಿಸಬೇಕು. ಪರಿಶೀಲನೆಯಿಲ್ಲದ ಹಾಗೂ ಆಧಾರರಹಿತ ಮಾಹಿತಿಗೆ ಪ್ರಚಾರ ನೀಡಬಾರದು ಎಂದು ವಕ್ತಾರರು ಮನವಿ ಮಾಡಿದ್ದಾರೆ. ವಿರಾಟ್ ಕೊಹ್ಲಿ ಮತ್ತು ಅವರ ಪತ್ನಿ ಅನುಷ್ಕಾ ಶರ್ಮಾ ಅವರು ಪ್ರೇಮಾನಂದ ಮಹಾರಾಜರನ್ನು ಈ ಹಿಂದೆ ಹಲವು ಬಾರಿ ಭೇಟಿ ಮಾಡಿ ಆಶೀರ್ವಾದ ಪಡೆದಿರುವುದು ಸಾರ್ವಜನಿಕವಾಗಿ ವರದಿಯಾಗಿದೆ. ಈ ಭೇಟಿಗಳು ವೈಯಕ್ತಿಕ ಭಕ್ತಿ ಮತ್ತು ಗೌರವದ ಹಿನ್ನೆಲೆಯಲ್ಲಿ ನಡೆದಿವೆ ಎಂದು ಕೊಹ್ಲಿ ಅವರ ವಕ್ತಾರರು ಸ್ಪಷ್ಟಪಡಿಸಿದ್ದಾರೆ.

# 2008ರಿಂದಲೂ ನೈಸ್‌ನಿಂದ ಕಾನೂನುಬಾಹಿರವಾಗಿ ಟೋಲ್ ಸಂಗ್ರಹ: ಎಚ್.ಡಿ. ಕುಮಾರಸ್ವಾಮಿ

**ಬೆಂಗಳೂರು, ಅ.7:** ಕಳೆದ 2008 ರಿಂದಲೂ ನೈಸ್ ರಸ್ತೆಯ ಟೋಲ್ ಸಂಗ್ರಹ ಕಾನೂನುಬಾಹಿರವಾಗಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಆರೋಪಿಸಿದರು.

ಜೆಪಿ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಬಿಎಂಐಸಿಪಿ ಯೋಜನೆ ರಾಜ್ಯ ಸರ್ಕಾರ ಹಾಗೂ ನೈಸ್ ಸಂಸ್ಥೆ ನಡುವೆ ಆಗಿರುವ ಒಪ್ಪಂದಗಳ ದಾಖಲೆಗಳನ್ನು ಪ್ರದರ್ಶಿಸಿದ ಮಾತನಾಡಿ, 2008–09ರಲ್ಲಿ 5 ಕೋಟಿ ರೂ. ಇದ್ದ ನೈಸ್ ರಸ್ತೆ ಟೋಲ್ ಸಂಗ್ರಹವು 2024–025ರ ವೇಳೆಗೆ 734 ಕೋಟಿ ರೂ.ಗೆ ಏರಿಕೆಯಾಗಿದೆ. ಇದುವರೆಗೆ ಒಟ್ಟಾರೆ 4758 ಕೋಟಿ ರೂ. ಟೋಲ್ ಸಂಗ್ರಹಿಸಲಾಗಿದೆ. ಬಿಎಂಐಸಿಪಿ ಮೂಲ ಒಪ್ಪಂದದಂತೆ ಯೋಜನೆಯನ್ನು ಪೂರ್ಣಗೊಳಿಸದೇ ಹಣ ಗಳಿಸುವ ದಂಧೆಯನ್ನಾಗಿ ಮಾಡಿಕೊಳ್ಳಲಾಗಿದೆ. ಮೂಲ ಒಪ್ಪಂದವನ್ನು ಉಲ್ಲಂಘಿಸಲಾಗಿದೆ. ಕಳೆದ 20 ವರ್ಷಗಳಿಂದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಹಾಗೂ ಜೆಡಿಎಸ್ ನಡೆಸುತ್ತಿರುವ ಈ ವಿಚಾರದ ಹೋರಾಟ ತಾರ್ಕಿಕ ಹಂತಕ್ಕೆ ಬರುವ ಲಕ್ಷಣಗಳಿವೆ ಎಂದು ಹೇಳಿದರು.

2000ನೇ ಫೆಬ್ರವರಿಯಲ್ಲಿ ಟೋಲ್ ಸಂಗ್ರಹಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಲೋಕೋಪಯೋಗಿ ಇಲಾಖೆ ಹಾಗೂ ನೈಸ್ ಸಂಸ್ಥೆ ನಡುವೆ ಅಗ್ರಿಮೆಂಟ್ ಮಾಡಿಕೊಳ್ಳಲಾಗಿದೆ. ಅಗ್ರಿಮೆಂಟ್‌ನಲ್ಲಿ ಬಿಎಂಐಸಿಪಿಯ ಮೂಲ ಒಪ್ಪಂದದ ಪ್ರಕಾರ ರಸ್ತೆ ನಿರ್ಮಿಸಬೇಕು. ನಿಯಮಗಳನ್ನು ಮೀರುವಂತಿಲ್ಲ ಎಂಬ ಪ್ರಸ್ತಾಪವಿದೆ. ಪೆರಿಫೆರಲ್ ವರ್ತುಲ ರಸ್ತೆ ಹಾಗೂ ಅದಕ್ಕೆ ಸಂಬಂಧಿಸಿದ ಪೂರಕ ರಸ್ತೆಗಳಿಗೆ 2193 ಎಕರೆ ಜಮೀನಿನ ಅಗತ್ಯವನ್ನು ಪ್ರಸ್ತಾಪಿಸಲಾಗಿದೆ. ಈ ವಿಚಾರವನ್ನು ನೈಸ್ ಸಂಸ್ಥೆಯೇ ನ್ಯಾಯಾಲಯಕ್ಕೆ ನೀಡಿರುವ ಮಾಹಿತಿಯಲ್ಲಿ ಉಲ್ಲೇಖವಾಗಿದೆ.

2004ರ ಫೆಬ್ರವರಿ 12ರಂದು ಬಿಎಂಐಸಿಪಿ ಅಧ್ಯಕ್ಷರಾಗಿದ್ದ ಈಗಿನ ಮುಖ್ಯಮಂತ್ರಿ ಒಡಿಪಿ ಯೋಜನೆಯಲ್ಲಿ ಮಾರ್ಪಾಡು ಮಾಡಲು ಅವಕಾಶ ಮಾಡಿಕೊಟ್ಟಿದ್ದಾರೆ. ಈ ವಿಚಾರ ಸಂಪುಟ ಸಭೆಯಲ್ಲಿ ಚರ್ಚೆಯಾಗಿಲ್ಲ. ಕಂಪನಿಗೆ ಬೇಕಾದ ರೀತಿಯಲ್ಲಿ ಒಡಿಪಿ ಯೋಜನೆಯನ್ನು ತಿರುಚಲಾಗಿದೆ ಎಂದು ಹೈಕೋರ್ಟ್ ತೀರ್ಪಿನಲ್ಲಿ ಉಲ್ಲೇಖವಾಗಿದೆ. ಇದರ ಬಗ್ಗೆ ಮುಖ್ಯಮಂತ್ರಿಗಳು ಉತ್ತರಿಸಬೇಕು ಎಂದು ಆಗ್ರಹಿಸಿದರು.

ಯೋಜನೆ ಹೆಸರಿನಲ್ಲಿ ಜನರಿಗೆ ಚಿತ್ರಹಿಂಸೆ ನೀಡಿರುವ ದಾಖಲೆಗಳು ಇವೆ. ಹೈಕೋರ್ಟ್ ಜುಲೈನಲ್ಲಿ ನೀಡಿದ ತೀರ್ಪು ರೈತರನ್ನು ಉಳಿಸಲು ಅವಕಾಶ ಮಾಡಿಕೊಟ್ಟಿದೆ. ಬಿಎಂಐಸಿಪಿ ಯೋಜನೆಯನ್ನು ನಿಲ್ಲಿಸಿ ಎಂದು ನಾವು ಹೇಳಿಲ್ಲ. ಆದರೆ ರಾಜ್ಯ ಸರ್ಕಾರದ ದೆಹಲಿಯ ವಿಶೇಷ ಪ್ರತಿನಿಧಿ ಟಿ.ಬಿ.ಜಯಚಂದ್ರ ಅವರು ಹಿಂದಿನ ಸರ್ಕಾರದಲ್ಲಿ ಸದನ ಸಮಿತಿಯ ಅಧ್ಯಕ್ಷರಾಗಿದ್ದ ಸಂದರ್ಭದಲ್ಲೇ ಹೇಳಿದ್ದಾರೆ. ನೈಸ್ ರಸ್ತೆಯನ್ನು ಮುಟ್ಟುಗೋಲು



ಹಾಕಿಕೊಳ್ಳಬೇಕು ಎಂದು ಉಲ್ಲೇಖಿಸಿದ್ದಾರೆ. ಆದರೂ ಈತನಕ ರಾಜ್ಯ ಸರ್ಕಾರ ಆ ರೀತಿ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಎಚ್.ಡಿ.ಕುಮಾರಸ್ವಾಮಿಯವರು ಆರೋಪಿಸಿದರು.

ಗೋಷ್ಠಿಯಲ್ಲಿ ಮಾಜಿ ಶಾಸಕರಾದ ಸುರೇಶ್‌ಗೌಡ, ರಮೇಶ್‌ಗೌಡ, ಚೌಡರೆಡ್ಡಿ ತೂಪಲ್ಲಿ, ಜೆಡಿಎಸ್ ವಕ್ತಾರ ದೇವರಾಜ್ ಮತ್ತಿತರರು ಉಪಸ್ಥಿತರಿದ್ದರು.




ಕರ್ನಾಟಕ ಅಂಚೆ ವಲಯದ ಮುಖ್ಯ ಅಂಚೆ ಮಹಾ ನಿರ್ದೇಶಕಿ ಸ್ವಾತಿ ಪಾಂಡೆ ಅವರು, ಬುಧವಾರ ಬೆಂಗಳೂರಿನ ಪ್ರೆಸ್ ಕ್ಲಬ್‌ನಲ್ಲಿ 'ರಾಷ್ಟ್ರೀಯ ಅಂಚೆ ಸಪ್ತಾಹ–2026' ಕುರಿತು ನಡೆದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದರು.

# ಸಿಇಸಿ ಜ್ಞಾನೇಶ್‌ಕುಮಾರ್ ಬಿಜೆಪಿಯ ಏಜೆಂಟ್: ರಾಹುಲ್ ಗಾಂಧಿ ಬಂಧನ ಖಂಡಿಸಿ ಟಿ.ಎಂ. ಶಾಹಿದ್ ತೆಕ್ಕಿಲ್ ಕಿಡಿ




**ಬೆಂಗಳೂರು, ಅ.7:** ಕೇಂದ್ರ ಚುನಾವಣಾ ಆಯೋಗ ಹಾಗೂ ಕೇಂದ್ರ ಸರ್ಕಾರದ ಜನವಿರೋಧಿ ನೀತಿಗಳನ್ನು ಖಂಡಿಸಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿ ಅಧ್ಯಕ್ಷ (ಸಚಿವ ದರ್ಜೆ) ಟಿ.ಎಂ. ಶಾಹಿದ್ ತೆಕ್ಕಿಲ್ ಅವರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ನಡವಳಿಕೆ ಹಾಗೂ ಅಧಿಕಾರ ದುರ್ಬಳಕೆಯ ವಿರುದ್ಧ ವಾಗ್ದಾಳಿ ನಡೆಸಿದ ಅವರು, "ಚುನಾವಣಾ ಆಯೋಗವು ಸ್ವತಂತ್ರವಾಗಿ ಕಾರ್ಯನಿರ್ವಹಿಸುವ ಬದಲು ಬಿಜೆಪಿ ಮತ್ತು ಆರೆಸ್ಸೆಸ್ಸ ಕೈಗೊಂಬೆಯಂತೆ ವರ್ತಿಸುತ್ತಿದೆ. ಒಂದೇ ನಾಣ್ಯದ ಎರಡು ಮುಖಗಳಂತೆ ಕೇಂದ್ರ ಸರ್ಕಾರ ಮತ್ತು ಚುನಾವಣಾ ಆಯೋಗ ಕಾರ್ಯಾಚರಿಸುತ್ತಿವೆ" ಎಂದು ನೇರ ಆರೋಪ ಮಾಡಿದ್ದಾರೆ. "2019ರಲ್ಲಿ ಕೇಂದ್ರ ಗೃಹ ಸಚಿವಾಲಯದ ಜಮ್ಮು–ಕಾಶ್ಮೀರ ವಿಭಾಗದ ಜಂಟಿ ಕಾರ್ಯದರ್ಶಿಯಾಗಿದ್ದ ಜ್ಞಾನೇಶ್ ಕುಮಾರ್, 370ನೇ ವಿಧಿ ರದ್ದತಿ ಮತ್ತು 'ಜಮ್ಮು–ಕಾಶ್ಮೀರ ಪುನರ್ ವಿಂಗಡಣಾ ಕಾಯ್ದೆ 2019'ರ ಕರಡು ರಚನೆಯಲ್ಲಿ ಅಮಿತ್ ಶಾ ಅವರ ಜೊತೆಗೂಡಿ ಪ್ರಮುಖ ಪಾತ್ರ ವಹಿಸಿದ್ದರು. ಆ ಬಳಿಕ ಚುನಾವಣಾ ಆಯೋಗಕ್ಕೆ ಬಂದ ಅವರು, ಜಮ್ಮು ಮತ್ತು ಕಾಶ್ಮೀರದಲ್ಲಿ ಚುನಾವಣೆ ಮತ್ತು ಕ್ಷೇತ್ರ ಪುನರ್ವಿಂಗಡಣೆ ಹೆಸರಿನಲ್ಲಿ ಮುಸ್ಲಿಂ ಜನಸಂಖ್ಯೆ ಹೆಚ್ಚಿರುವ ಪ್ರದೇಶಗಳನ್ನು ವ್ಯವಸ್ಥಿತವಾಗಿ ಒಡೆದು, ಮುಸ್ಲಿಮರ ಮತಗಳನ್ನು ವಿಭಜಿಸಿ ಬಿಜೆಪಿಗೆ ಚುನಾವಣಾ ಲಾಭ ಮಾಡಿಕೊಡುವ ಕೆಲಸ ಮಾಡಿದ್ದಾರೆ. ಕೇರಳ ಪಿಡಬ್ಲ್ಯುಡಿ ಇಲಾಖೆಯಲ್ಲಿದ್ದಾಗಲೂ ಭ್ರಷ್ಟಾಚಾರದ ಗಂಭೀರ ಆರೋಪಗಳನ್ನು ಎದುರಿಸಿದ್ದ ಇಂತಹ ಅಧಿಕಾರಿಗಳನ್ನು ಪ್ರಮುಖ ಹುದ್ದೆಗಳಿಗೆ ತಂದು ಕೂರಿಸಿರುವ ಹಿಂದಿನ ಉದ್ದೇಶವೇ ಚುನಾವಣೆಯಲ್ಲಿ ಅಕ್ರಮವಾಗಿ ಬಿಜೆಪಿಗೆ ಲಾಭ ಮಾಡಿಕೊಡುವುದಾಗಿದೆ. ಪ್ರಜಾಪ್ರಭುತ್ವದ ಬೆನ್ನೆಲುಬಾಗಿರುವ ಮತದಾನದ ಹಕ್ಕನ್ನೇ ಕಸಿದುಕೊಳ್ಳುವ ವ್ಯವಸ್ಥಿತ ಹುನ್ನಾರ ನಡೆಯುತ್ತಿದೆ" ಎಂದು ಅವರು ಟೀಕಿಸಿದ್ದಾರೆ.

**ರಾಹುಲ್ ಗಾಂಧಿ ಬಂಧನಕ್ಕೆ ಖಂಡನೆ:**

ದೇಶದಲ್ಲಿ ಕಾನೂನು ಸುವ್ಯವಸ್ಥೆ ಮತ್ತು ನಾಗರಿಕರ ಸುರಕ್ಷತೆ ಸಂಪೂರ್ಣವಾಗಿ ಹದಗೆಟ್ಟಿದೆ ಎಂದಿರುವ ಶಾಹಿದ್ ತೆಕ್ಕಿಲ್, ದೇಶದ ಸಂವಿಧಾನ ಮತ್ತು ಜನರ ಪರವಾಗಿ ಶಾಂತಿಯುತವಾಗಿ ಹೋರಾಟ ನಡೆಸುತ್ತಿದ್ದ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಪೊಲೀಸರ ಮೂಲಕ ತಡೆದು ವಶಕ್ಕೆ ಪಡೆದಿರುವುದು ಕೇಂದ್ರ ಸರ್ಕಾರದ ಸರ್ವಾಧಿಕಾರಿ ಧೋರಣೆ ಹಾಗೂ ಸಂಪೂರ್ಣ ವೈಫಲ್ಯಕ್ಕೆ ನಿದರ್ಶನ. ಜನರ ಸಂಕಷ್ಟಗಳಿಗೆ ಧ್ವನಿಯಾಗುತ್ತಿರುವ ಕಾಂಗ್ರೆಸ್ ನಾಯಕರ ಹೋರಾಟವನ್ನು ಹತ್ತಿಕ್ಕಲು ಬಿಜೆಪಿ ಸರ್ಕಾರ ತನಿಖಾ ಸಂಸ್ಥೆಗಳು ಮತ್ತು ಪೊಲೀಸರನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ. ಆದರೆ ರಾಹುಲ್ ಗಾಂಧಿಯವರು ಜನರ ಪರವಾದ ಹೋರಾಟದಿಂದ ಎಂದಿಗೂ ಹಿಂದೆ ಸರಿಯುವುದಿಲ್ಲ; ಸಂವಿಧಾನ ರಕ್ಷಣೆಯ ಈ ಹೋರಾಟವನ್ನು ದೇಶಾದ್ಯಂತ ಇನ್ನಷ್ಟು ತೀವ್ರಗೊಳಿಸಲಾಗುವುದು" ಎಂದು ಎಚ್ಚರಿಸಿದ್ದಾರೆ.

ಕೇಂದ್ರದ ಈ ಅಸಂವಿಧಾನಿಕ ನಡೆಯ ವಿರುದ್ಧ ಕಾಂಗ್ರೆಸ್ ಪಕ್ಷ ಹಾಗೂ ಪ್ರಜ್ಞಾವಂತ ಜನತೆ ಬೀದಿಗಿಳಿದು ಹೋರಾಟ ಮುಂದುವರಿಸಲಿದ್ದಾರೆ ಎಂದು ಅವರು ತಿಳಿಸಿದ್ದಾರೆ.

# ಗ್ರಾಮೀಣ ಪತ್ರಕರ್ತರ ಬಸ್‌ಪಾಸ್ ನಿಯಮ ಮತ್ತಷ್ಟು ಸರಳೀಕರಣಕ್ಕೆ ಕೆಯುಡಬ್ಲ್ಯುಜೆ ಆಗ್ರಹ

**ಬೆಂಗಳೂರು, ಅ.7:** ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್ಪಾಸ್ ಸೌಲಭ್ಯ ಕಲ್ಪಿಸಿರುವ ಹಿನ್ನೆಲೆಯಲ್ಲಿ, ಬಸ್ಪಾಸ್ ಪಡೆಯಲು ಇರುವ ನಿಯಮಗಳನ್ನು ಮತ್ತಷ್ಟು ಸರಳೀಕರಣಗೊಳಿಸುವಂತೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ಕೆಯುಡಬ್ಲ್ಯುಜೆ) ಸರ್ಕಾರವನ್ನು ಆಗ್ರಹಿಸಿದೆ.

ಗ್ರಾಮೀಣ ಪತ್ರಕರ್ತರು ತಮ್ಮ ವೃತ್ತಿ ಕರ್ತವ್ಯ ನಿರ್ವಹಿಸಲು ಅನುಕೂಲವಾಗುವ ಉದ್ದೇಶದಿಂದ ಉಚಿತ ಬಸ್‌ಪಾಸ್ ಸೌಲಭ್ಯ ಕಲ್ಪಿಸಿರುವುದು ಸ್ವಾಗತಾರ್ಹ. ಆದರೆ ಪ್ರಸ್ತುತ ಇರುವ ಕೆಲವು ನಿಯಮಗಳು ಬಸ್‌ಪಾಸ್‌ಗೆ ಅರ್ಜಿ ಸಲ್ಲಿಸಲು ಹಾಗೂ ಸೌಲಭ್ಯ ಪಡೆಯಲು ತೊಡಕಾಗಿವೆ ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ಅವರು ಮುಖ್ಯಮಂತ್ರಿಗಳಿಗೆ ಸಲ್ಲಿಸಿರುವ ಮನವಿಯಲ್ಲಿ ತಿಳಿಸಿದ್ದಾರೆ.

ವಿಶೇಷವಾಗಿ ಜಿಲ್ಲಾ ಮಟ್ಟದಲ್ಲಿ ಪ್ರಕಟವಾಗುವ ಪತ್ರಿಕೆಗಳು ಹಾಗೂ ಪ್ರಾದೇಶಿಕ ಪತ್ರಿಕೆಗಳಲ್ಲಿ ಕಾರ್ಯ ನಿರ್ವಹಿಸುವ ತಾಲೂಕು ಮತ್ತು ಹೋಬಳಿ ಮಟ್ಟದ ವರದಿಗಾರರಿಗೆ ಬಸ್ಪಾಸ್ ಸೌಲಭ್ಯ ದೊರೆಯುವಂತೆ ನಿಯಮಗಳನ್ನು ಸರಳೀಕರಿಸಬೇಕು ಎಂದು ಕೆಯುಡಬ್ಲ್ಯುಜೆ ಒತ್ತಾಯಿಸಿದೆ. ಗ್ರಾಮೀಣ ಭಾಗದಲ್ಲಿ ಕಾರ್ಯ ನಿರ್ವಹಿಸುವ ಅರ್ಹ ಪತ್ರಕರ್ತರಿಗೆ ಯಾವುದೇ ಅನಗತ್ಯ ನಿಯಮಗಳಿಂದ ಸೌಲಭ್ಯ ವಂಚಿತ ವಾಗದಂತೆ, ಬಸ್‌ಪಾಸ್ ನಿಯಮಾವಳಿ ಗಳನ್ನು ಮರುಪರಿಶೀಲಿಸಿ ಅಗತ್ಯ ತಿದ್ದುಪಡಿ



ಮಾಡುವಂತೆ ಸಂಘ ಮನವಿ ಮಾಡಿದೆ. ಗ್ರಾಮೀಣ ಪತ್ರಕರ್ತರ ಹಿತದೃಷ್ಟಿಯಿಂದ ಮನವಿಯನ್ನು ಆದ್ಯತೆಯಿಂದ ಪರಿಗಣಿಸಿ, ನಿಯಮಗಳ ಸರಳೀಕರಣಕ್ಕೆ ಕ್ರಮ ಕೈಗೊಳ್ಳುವಂತೆ ಕೆಯುಡಬ್ಲ್ಯುಜೆ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ಮನವಿ ಮಾಡಿದ್ದಾರೆ.

# ಅಂತರಿಕ್ಷ ಹೊಂಗಿರಣ: ಸಾಧಕರಿಗೆ ಪುರಸ್ಕಾರ



**ಬೆಂಗಳೂರು, ಅ.7:** ಅಂತರಿಕ್ಷ ಅವರ 2ನೇ ವರ್ಷದ ಸ್ಮರಣಾರ್ಥ ಪೋಷಕರಾದ ಶುಭಾ ವಾಸುಕಿ ಮತ್ತು ವಾಸುಕಿ ಆಚಾರ್ಯ ದಂಪತಿ ಆಯೋಜಿಸಿದ್ದ "ಅಂತರಿಕ್ಷ ಹೊಂಗಿರಣ" ಕಾರ್ಯಕ್ರಮ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಅವರ ಕಚೇರಿಯ ಸಭಾಂಗಣದಲ್ಲಿ ನಡೆಯಿತು.

ಪ್ರಯಾಗ್‌ರಾಜ್ ಕುಂಭಮೇಳದಲ್ಲಿ ತಮ್ಮ ಪ್ರೀತಿಯ ಮಗನನ್ನು ಕಳೆದುಕೊಂಡ ದುಃಖದ ನಡುವೆಯೂ, ದಂಪತಿ ತಮ್ಮ ನೋವನ್ನು ಮರೆತು ಸಮಾಜ ಸೇವೆಗೆ ಮುಂದಾಗಿರುವುದು ಮಾನವೀಯತೆಯ ಅತ್ಯುನ್ನತ ಉದಾಹರಣೆಯಾಗಿದೆ.

ಕಾರ್ಯಕ್ರಮದಲ್ಲಿ ಚಲನಚಿತ್ರ ನಿರ್ಮಾಪಕಿ ಲಕ್ಷ್ಮೀ ಗೋವಿಂದರಾಜ್, ಗೋವಿಂದರಾಜ್, ನಿರ್ಮಾಪಕ ಬಾಮಾ ಹರೀಶ್ ಮತ್ತು ಎಸ್ಬಿಐ ನಿವೃತ್ತ ಮುಖ್ಯ ಪ್ರಧಾನ ವ್ಯವಸ್ಥಾಪಕ ವೆಂಕಟೇಶ್ ಭಾರದ್ವಾಜ್ ವಿಶೇಷ ಆಹ್ವಾನಿತರಾಗಿ ಭಾಗವಹಿಸಿದ್ದರು. ಸದಾ ಸ್ಫೂರ್ತಿಯ ಸೆಲೆಯಾಗಿ, ಹೊಂಗಿರಣದ ಚಿಲುಮೆಯಾಗಿ, ಕಲೆ ಮತ್ತು ಸಾಂಸ್ಕೃತಿಕ ಸೇವೆಯಲ್ಲಿ ತೊಡಗಿಸಿಕೊಂಡು ಸಾಮಾಜಿಕವಾಗಿ ಸೃಜನಶೀಲನಾಗಿ ಬಾಳಿ ಬದುಕಿದ ತಮ್ಮ ಪ್ರೀತಿಯ ಸುಪುತ್ರ ಅಂತರಿಕ್ಷನ. ಪರಿಸರ ಪ್ರೇಮ, ದೇಶಭಕ್ತಿ ಮತ್ತು ಸಾಮಾಜಿಕ ಕಳಕಳಿಯ ಪರಿಚಯವನ್ನು ದೊಡ್ಡ ಪರದೆಯ ಮೇಲೆ ಪ್ರದರ್ಶಿಸಲಾಯಿತು. ಈ ಸಂದರ್ಭದಲ್ಲಿ ಶ್ರೀ ಸಂಕಟಮೋಚನ ಪಾರ್ಶ್ವ ಭೈರವ ಗೋಶಾಲೆ, ಸ್ನೇಹದೀಪ ಅಂಧ ಮಕ್ಕಳ ಸಂಸ್ಥೆ, ಶ್ರೀಪತಂಜಲಿ ಯೋಗ ಶಿಕ್ಷಣ ಸಮಿತಿ ರಾಜ್ಯದ 10 ವಿಭಿನ್ನ ಸಂಘ–ಸಂಸ್ಥೆಗಳು ಮತ್ತು ವೈಯಕ್ತಿಕ ಸಾಧಕರಿಗೆ ಮಂಗಳ ದಾನ ನೀಡಿ ಗೌರವಿಸಲಾಯಿತು. ಶರತ್ ಆರ್ ಅಶೋಕ್ ಅದ್ವಿತೀಯ ಗಿನ್ನೀಸ್ ದಾಖಲೆಗಾಗಿ ಅವರನ್ನು ಪುರಸ್ಕರಿಸಲಾಯಿತು. ರಾಣೆಬೆನ್ನೂರಿನ ಸ್ನೇಹದೀಪ ದಿವ್ಯಾಂಗ ಸಂಸ್ಥೆಯ ಮಕ್ಕಳು ಪ್ರಸ್ತುತಪಡಿಸಿದ ಸಾಂಸ್ಕೃತಿಕ ಕಾರ್ಯಕ್ರಮ ಸಭಿಕರ ಮನಗೆದ್ದಿತು.

# ವಿಶ್ವ ಆರೋಗ್ಯ ಸಂಸ್ಥೆಯಿಂದ (ಡಬ್ಲ್ಯೂ.ಎಚ್.ಒ) ಒನ್‌ಸೈಟ್ ಎಸ್ಸಿಲಾರ್ ಲಕೋಟಿ ಕಾ ಫೌಂಡೇಶನ್ ಮತ್ತು ಕರ್ನಾಟಕ ಸರ್ಕಾರದ ದೂರದೃಷ್ಟಿಯ ಆಶಾಕಿರಣ ಉಪಕ್ರಮಕ್ಕೆ ಪ್ರಶಂಸೆ

**ಅಂಧತ್ವ ಮುಕ್ತ ಕರ್ನಾಟಕದ ಹಾದಿಯಲ್ಲಿ ಮಹತ್ವದ ಮೈಲಿಗಲ್ಲಾಗಿರುವ 'ಆಶಾಕಿರಣ' ಉಪಕ್ರಮದ ಭಾಗವಾಗಿ 393 ದೃಷ್ಟಿ ಕೇಂದ್ರಗಳನ್ನು ಸಾಂಸ್ಥಿಕಗೊಳಿಸಿರುವುದನ್ನು ವರದಿಯು ಎತ್ತಿ ತೋರಿದೆ...**

**ದೀರ್ಘಕಾಲದ ಸ್ಥಿರತೆಗಾಗಿ ಸಂಯೋಜಿತ ಕಾರ್ಯತಂತ್ರದ ಚೌಕಟ್ಟಿನ ಮೂಲ ತಿರುಳಾಗಿರುವ ಸರ್ಕಾರದ ಬದ್ಧತೆ, ಬಹುವಲಯ ಪಾಲುದಾರಿಕೆ ಮತ್ತು ಗುಣಮಟ್ಟದ ಭರವಸೆಯನ್ನು ದೃಷ್ಟಿ ಕೇಂದ್ರಗಳು ಪ್ರತಿಬಿಂಬಿಸುತ್ತವೆ...**



**ಬೆಂಗಳೂರು, ಅ.7:** ವಿಶ್ವ ದೃಷ್ಟಿ ದಿನದ (ಅಕ್ಟೋಬರ್ 8) ಅಂಗವಾಗಿ ಭಾರತದಲ್ಲಿ ಒನ್ ಸೈಟ್ ಎಸ್ಸಿಲಾರ್ ಲಕ್ಷೋಟಿಕಾ ಫೌಂಡೇಶನ್', ಕರ್ನಾಟಕ ಸರ್ಕಾರ ಮತ್ತು ವಿಶ್ವ ಆರೋಗ್ಯ ಸಂಸ್ಥೆ ಜಂಟಿಯಾಗಿ 'ಏಕೀಕೃತ ಜನಕೇಂದ್ರಿತ ಕಣ್ಣಿನ ಆರೈಕೆಯ ಪ್ರಗತಿ' ಎಂಬ ವರದಿಯನ್ನು ಇಂದು ಬಿಡುಗಡೆ ಮಾಡಿದವು. ಕರ್ನಾಟಕದ ಪ್ರಾಥಮಿಕ ಆರೋಗ್ಯ ಮೂಲಸೌಕರ್ಯದಲ್ಲಿ 'ಆಶಾಕಿರಣ' ಯೋಜನೆಯನ್ನು ಒಂದು ವಿಶಿಷ್ಟ ಸೇವೆಯಾಗಿ ಸಂಯೋಜಿಸಿರುವುದನ್ನು ಈ ವರದಿಯು ಎತ್ತಿ ತೋರಿದೆ. 2022ರಿಂದ ಇಲ್ಲಿಯವರೆಗೆ ಕರ್ನಾಟಕದ ಒಟ್ಟು ಎಂಟು ಜಿಲ್ಲೆಗಳಲ್ಲಿ ನಡೆಸಲಾದ ಹಂತ–ಹಂತದ ಅಧ್ಯಯನಗಳ ಸಾರಾಂಶವನ್ನು ಈ ದಾಖಲೆಯು ಒಳಗೊಂಡಿದೆ: ಈ ಅವಧಿಯಲ್ಲಿ ಒಟ್ಟು 14 ಮಿಲಿಯನ್ ಪ್ರಾಥಮಿಕ ತಪಾಸಣೆಗಳನ್ನು ನಡೆಸಲಾಗಿದ್ದು, 4.5 ಲಕ್ಷಕ್ಕೂ ಹೆಚ್ಚು ಉಚಿತ ಕನ್ನಡಕಗಳನ್ನು ವಿತರಿಸಲಾಗಿದೆ ಹಾಗೂ 2.5 ಲಕ್ಷಕ್ಕೂ ಹೆಚ್ಚು ಕೆಟರಾಕ್ಟ್ ಶಸ್ತ್ರಚಿಕಿತ್ಸೆಗಳನ್ನು ಯಶಸ್ವಿಯಾಗಿ ನಡೆಸಲಾಗಿದೆ. ಬಹಳ ಮುಖ್ಯವಾಗಿ ಸಮಾನತೆ, ಚಿಕಿತ್ಸೆಯ ಗುಣಮಟ್ಟ ಮತ್ತು ಸುಸ್ಥಿರತೆಯ ಮೇಲೆ ಗಮನಹರಿಸುವ ಮೂಲಕ, ರಾಜ್ಯ ಆರೋಗ್ಯ ವ್ಯವಸ್ಥೆಯ ಶಾಶ್ವತ ಅಂಗವಾಗಿ 393 ದೃಷ್ಟಿ ಕೇಂದ್ರಗಳನ್ನು ಸಾಂಸ್ಥಿಕಗೊಳಿಸಿರುವುದನ್ನು ಈ ವರದಿ ಪ್ರಮುಖವಾಗಿ ಗುರುತಿಸಿದೆ. ಈ ಕೇಂದ್ರಗಳು ಸಮುದಾಯ ಮಟ್ಟದಲ್ಲಿ ಸಮಗ್ರ ಕಣ್ಣಿನ ಆರೋಗ್ಯ ಸೇವೆಯನ್ನು ಒದಗಿಸುತ್ತವೆ. ಅಲ್ಲದೆ, ಪೊರೆ ಶಸ್ತ್ರಚಿಕಿತ್ಸೆ ಅಥವಾ ಕಣ್ಣಿನ ಸಂಕೀರ್ಣ ಕಾಯಿಲೆಗಳ ಸುಧಾರಿತ ಚಿಕಿತ್ಸೆಗಾಗಿ ಪ್ರತಿಯೊಂದು ದೃಷ್ಟಿ ಕೇಂದ್ರವನ್ನು ದ್ವಿತೀಯ ಹಂತದ ಶಸ್ತ್ರಚಿಕಿತ್ಸಾ ಕೇಂದ್ರಗಳೊಂದಿಗೆ ಜೋಡಿಸಲಾಗಿದ್ದು ರಾಜ್ಯದಲ್ಲಿ ಸಂಪೂರ್ಣ ಮತ್ತು ಸಮಗ್ರ ಕಣ್ಣಿನ ಆರೈಕೆಯನ್ನು ದೃಢೀಕರಿಸಲಾಗಿದೆ.

ಸಮಾನ ದೃಷ್ಟಿ ಆರೈಕೆಯನ್ನು ಒದಗಿಸುವ ಜಂಟಿ ಬದ್ಧತೆಯೊಂದಿಗೆ, ಈ ವರದಿಯನ್ನು ಕರ್ನಾಟಕ ಸರ್ಕಾರದ ಮಾನ್ಯ ಆರೋಗ್ಯ ಸಚಿವರಾದ ಶ್ರೀ ಯು ಟಿ. ಖಾದರ್ ಫರೀದ್ ಅವರು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಎಸ್ಸಿಲಾರ್ ಲುಕೋಟಿಕಾದ ಗ್ರೇಟರ್ ಇಂಡಿಯಾದ ಅಧ್ಯಕ್ಷ ಹಾಗೂ ಒನ್ಸೈಟ್ ಎಸ್ಸಿಲಾರ್ ಲುಕೋಟಿಕಾದ ಫೌಂಡೇಶನ್ ನಿರ್ದೇಶಕ ವೇಣು ಮತ್ತು ಡಬ್ಲ್ಯೂ.ಎಚ್.ಒ.ಇಂಡಿಯಾದ ಸಾಂಕ್ರಾಮಿಕವಲ್ಲದ ರೋಗಗಳ ವಿಭಾಗದ ನ್ಯಾಷನಲ್ ಪ್ರೊಫೆಷನಲ್ ಆಫೀಸರ್ ಡಾ. ಬಿ.ಮೊಹಮ್ಮದ್ ಅಶೀಲ್ (ಆನ್ಲೈನ್ ಮೂಲಕ) ಉಪಸ್ಥಿತರಿದ್ದರು.

ವರದಿ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಕರ್ನಾಟಕ ಸರ್ಕಾರದ ಮಾನ್ಯ ಆರೋಗ್ಯ ಸಚಿವ ಯು.ಟಿ.ಖಾದರ್ ಫರೀದ್ ಅವರು, "ಅಂಧತ್ವ ಮುಕ್ತವಾಗುವ ಸ್ಪಷ್ಟ ದೂರದೃಷ್ಟಿಯನ್ನು ಹೊಂದಿರುವ ಭಾರತದ ಕೆಲವು ಪ್ರಗತಿಪರ ರಾಜ್ಯಗಳಲ್ಲಿ ಒಂದಾಗಲು ನಾವು ಹೆಮ್ಮೆಪಡುತ್ತೇವೆ. ಆರೋಗ್ಯಕರ ದೃಷ್ಟಿಯ

ಹೀಗೆ ಲಭ್ಯತೆ ಸುಧಾರಿಸಲು ನಾವು ಅಳವಡಿಸಿಕೊಂಡ ವ್ಯವಸ್ಥಿತ ವಿಧಾನವು, ಈಗ ಭಾರತದಲ್ಲಿ ಸಮಗ್ರ ಕಣ್ಣಿನ ಆರೈಕೆ ಮಾದರಿಗೆ ಅತ್ಯುತ್ತಮ ಉದಾಹರಣೆಯಾಗಿ ದಾಖಲಾಗಿದೆ. ಸಮುದಾಯ ಆರೋಗ್ಯ ಕೇಂದ್ರಗಳು, ತಾಲೂಕು ಆಸ್ಪತ್ರೆಗಳು ಮತ್ತು ಜಿಲ್ಲಾ ಆಸ್ಪತ್ರೆಗಳಲ್ಲಿ ಹರಡಿರುವ 393 ದೃಷ್ಟಿ ಕೇಂದ್ರಗಳು 'ಆಶಾಕಿರಣ' ಯೋಜನೆಯ ಆಶಯಕ್ಕೆ ಪೂರಕವಾಗಿವೆ: ಸರಿಪಡಿಸದ ದೃಷ್ಟಿದೋಷ ಮತ್ತು ಪೊರೆ ತಡೆಗಟ್ಟಬಹುದಾದ ದೃಷ್ಟಿ ನಷ್ಟಕ್ಕೆ ಕಾರಣವಾಗುವ ಪ್ರಮುಖ ಎರಡು ಸಮಸ್ಯೆಗಳನ್ನು ಪರಿಹರಿಸುವ ಮೂಲಕ ಕರ್ನಾಟಕ ರಾಜ್ಯದಲ್ಲಿ ತಡೆಗಟ್ಟಬಹುದಾದ ಅಂಧತ್ವ ಮತ್ತು ದೃಷ್ಟಿಮಾಂದ್ಯತೆಯನ್ನು ನಿಯಂತ್ರಿಸುವುದು ಮತ್ತು ತಡೆಯುವುದು ಇದರ ಮುಖ್ಯ ಉದ್ದೇಶವಾಗಿದೆ.

ಸಾರ್ವಜನಿಕ ಆರೋಗ್ಯ ವ್ಯವಸ್ಥೆಯಲ್ಲಿ ಕಣ್ಣಿನ ಆರೈಕೆಯನ್ನು ಸಂಯೋಜಿಸುವ ಯಶಸ್ವಿ ಮಾದರಿಯಾದ 'ಆಶಾಕಿರಣ'ವನ್ನು ಸಾಂಸ್ಥಿಕಗೊಳಿಸುವ ನಮ್ಮ ಪ್ರಯಾಣದಲ್ಲಿ ನಮ್ಮೊಂದಿಗೆ ಪಾಲುದಾರರಾದ ಒನ್‌ಸೈಟ್ ಎಸ್ಸಿಲಾರ್ ಲುಕೋಟಿಕಾ ಫೌಂಡೇಶನ್ ಗೆ ನಾವು ಕೃತಜ್ಞರಾಗಿದ್ದೇವೆ,' ಎಂದು ಹೇಳಿದರು.

ಹೆಚ್ಚುವರಿಯಾಗಿ, ಮಾನ್ಯ ಸಚಿವರು, "ಒನ್‌ಸೈಟ್ ಫೌಂಡೇಶನ್ ಆಶಾಕಿರಣ ಯೋಜನೆಯೊಂದಿಗೆ ಸತತವಾಗಿ ಕಾರ್ಯ ನಿರ್ವಹಿಸುತ್ತಿದ್ದು, ಸಾರ್ವತ್ರಿಕ ಹಾಗೂ ಸಮುದಾಯ ಆಧಾರಿತವಾಗಿ ಮನೆಮನೆಗೆ ತೆರಳಿ ದೃಷ್ಟಿ ತಪಾಸಣೆ ನಡೆಸಲು ಮತ್ತು ಈ ಭಾಗದಲ್ಲಿ ತಡೆಗಟ್ಟಬಹುದಾದ ಅಂಧತ್ವವನ್ನು ಕಡಿಮೆ ಮಾಡಲು ಅವರ ಕೌಶಲ್ಯ, ಸಾಮರ್ಥ್ಯ ಮತ್ತು ಜ್ಞಾನವನ್ನು ವೃದ್ಧಿಸುತ್ತಿದೆ. 2026ರ ವಿಶ್ವ ದೃಷ್ಟಿ ದಿನದ ಆಚರಣೆಯ ಭಾಗವಾಗಿ 40,000 ಆಶಾಕಿರಣ ಕಾರ್ಯಕರ್ತರು ಫೌಂಡೇಶನ್‌ನಿಂದ ಉಚಿತ ಸನ್ ಗ್ಲಾಸ್‌ಗಳನ್ನು ಪಡೆಯಲಿದ್ದಾರೆ ಎಂದು ತಿಳಿಸಲು ನನಗೆ ಸಂತೋಷವಾಗುತ್ತದೆ. ಈ ಸಂದರ್ಭದ ಅಂಗವಾಗಿ ಫೌಂಡೇಶನ್ ವಿಧಾನ ಸೌಧದಿಂದ ಅಂಧರ ಜಾಗೃತಿ ನಡಿಗೆ ಆಯೋಜಿಸಿದ್ದು ಇದರಲ್ಲಿ ಸಮಾಜದ ಎಲ್ಲಾ ವರ್ಗಗಳ ನಾಗರಿಕರು ಭಾಗವಹಿಸುತ್ತಿದ್ದಾರೆ. ದೃಷ್ಟಿ ಆರೈಕೆಯನ್ನು ಮುನ್ನಡೆಸುವಲ್ಲಿ ನಿರಂತರವಾಗಿ ಶ್ರಮಿಸುತ್ತಿರುವ ಒನ್‌ಸೈಟ್ ಫೌಂಡೇಶನ್ ಪ್ರಯತ್ನಗಳು ಶ್ಲಾಘನೀಯ" ಎಂದು ಹೇಳಿದರು.

ಎಸ್ಸಿಲಾರ್ ಲಕ್ಕೋಟಿಕಾ ಗ್ರೇಟರ್ ಇಂಡಿಯಾದ ಅಧ್ಯಕ್ಷ ಹಾಗೂ ಒನ್‌ಸೈಟ್ ಎಸ್ಸಿಲಾರ್ ಲಕ್ಕೋಟ್ಟಿಕಾ ಫೌಂಡೇಶನ್ ನಿರ್ದೇಶಕರಾದ ವೇಣು ಅಂಬಟಿ ಅವರು "ನಮ್ಮ ಒನ್‌ಸೈಟ್ ಫೌಂಡೇಶನ್ ಮೂಲಕ ಸಮಾನ ದೃಷ್ಟಿ ಆರೈಕೆಯನ್ನು ಒದಗಿಸುವ ಹಾದಿಯಲ್ಲಿ ಕರ್ನಾಟಕ ಸರ್ಕಾರದೊಂದಿಗೆ ಪಾಲುದಾರರಾಗಲು ನಾವು ಹೆಮ್ಮೆಪಡುತ್ತೇವೆ. ಕರ್ನಾಟಕದಲ್ಲಿ 'ಆಶಾಕಿರಣ' ಮಾದರಿಯ ಯಶಸ್ಸು ಮತ್ತು 393 ದೃಷ್ಟಿ ಕೇಂದ್ರಗಳ ಸ್ಥಾಪನೆಯು ಈ ಯೋಜನೆಯ ವಿಸ್ತರಣಾ ಸಾಮರ್ಥ್ಯಕ್ಕೆ ಸಾಕ್ಷಿಯಾಗಿದೆ. ಅಂದರೆ ರಾಜ್ಯದ ಒಂದು ಆವಿಷ್ಕಾರವು ಜಾಗತಿಕವಾಗಿ ಅನುಕರಿಸಬಹುದಾದ ಮಾದರಿಯಾಗಿ ಬೆಳೆದಿದೆ.

ಆರೋಗ್ಯಕರ ದೃಷ್ಟಿಯನ್ನು ನಿರ್ಮಿಸುವ ನಮ್ಮ ಬದ್ಧತೆಗೆ ಅನುಗುಣವಾಗಿ, ರಾಷ್ಟ್ರೀಯ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಆಶಾಕಿರಣವನ್ನು ಒಂದು ಮಾದರಿಯನ್ನಾಗಿ ಇತರ ರಾಜ್ಯಗಳಲ್ಲೂ ಜಾರಿಗೆ ತರಲು ಅವರೊಂದಿಗೆ ಪಾಲುದಾರರಾಗಲು ನಾವು ಎದುರು ನೋಡುತ್ತಿದ್ದೇವೆ. ಆರೋಗ್ಯ ಕಾರ್ಯಕರ್ತರ ಜಾಲದ ಮೂಲಕ ಸಮುದಾಯ ಕೇಂದ್ರಿತ ತಪಾಸಣೆ ನಡೆಸುವುದು ಮತ್ತು ಪ್ರಾಥಮಿಕ ಆರೋಗ್ಯ ಸೇವೆಯ ಭಾಗವಾಗಿ ಶಾಶ್ವತ ದೃಷ್ಟಿ ಕೇಂದ್ರಗಳನ್ನು ಸ್ಥಾಪಿಸುವಾಗ, ಡಬ್ಲ್ಯೂ.ಎಚ್.ಒ.ದ ಏಕೀಕೃತ, ರೋಗಿ–ಕೇಂದ್ರಿತ ಕಣ್ಣಿನ ಆರೈಕೆಯ ಮೂಲ ತತ್ತ್ವಗಳನ್ನು ಅಳವಡಿಸಿಕೊಳ್ಳಲು ರಾಜ್ಯಗಳನ್ನು ಉತ್ತೇಜಿಸಬಹುದು. ಈ ಮಾದರಿಯನ್ನು ಜಂಟಿಯಾಗಿ ರೂಪಿಸಿದ್ದಕ್ಕಾಗಿ ನಾವು ಕರ್ನಾಟಕ ರಾಜ್ಯಕ್ಕೆ ಕೃತಜ್ಞತೆ ಸಲ್ಲಿಸುತ್ತೇವೆ ಹಾಗೂ ಸಮಗ್ರ ಕಣ್ಣಿನ ಆರೈಕೆ ನಿರ್ವಹಣೆಯನ್ನು ಉತ್ತೇಜಿಸುವ ಸಹಯೋಗದ ವ್ಯವಸ್ಥೆಯನ್ನು ನಿರ್ಮಿಸಲು ಪ್ರತಿಯೊಂದು ರಾಜ್ಯವೂ ಕೈಗೊಳ್ಳಬಹುದಾದ ಹಂತಗಳನ್ನು ಡಬ್ಲ್ಯೂ.ಎಚ್.ಒ. ಈ ವರದಿಯ ಮೂಲಕ ದಾಖಲಿಸಿರುವುದಕ್ಕೆ ನಮಗೆ ಹೆಮ್ಮೆಯಿದೆ' ಎಂದು ಹೇಳಿದರು.

ಡಬ್ಲ್ಯೂ.ಎಚ್.ಒ ಇಂಡಿಯಾದ ಕಣ್ಣಿನ ಆರೈಕೆ ವಿಭಾಗದ ಕಂಟ್ರಿ ಫೋಕಲ್ ಪಾಯಿಂಟ್ ಡಾ. ಮೊಹಮ್ಮದ್ ಅಶೀಲ್ ಮಾತನಾಡಿ: "ಆಶಾಕಿರಣ ಯೋಜನೆಯ ಮಹತ್ವವು ಕರ್ನಾಟಕದ ಕಣ್ಣಿನ

ಆರೈಕೆಗೆ ಮಾತ್ರ ಸೀಮಿತವಾಗಿರದೆ ಅದನ್ನೂ ಮೀರಿದ್ದಾಗಿದೆ. ಸಂಪನ್ಮೂಲಗಳ ಮಿತಿಯಿರುವ ವಾತಾವರಣದಲ್ಲೂ ಡಬ್ಲ್ಯೂ.ಎಚ್.ಒ.ನ ಏಕೀಕೃತ ಜನಕೇಂದ್ರಿತ ಕಣ್ಣಿನ ಆರೈಕೆ' (ಐಪಿಇಸಿ) ಯ ದೃಷ್ಟಿಕೋನವನ್ನು ಹೇಗೆ ಯಶಸ್ವಿಯಾಗಿ ಕಾರ್ಯರೂಪಕ್ಕೆ ತರಬಹುದು ಎಂಬುದಕ್ಕೆ ಈ ಉಪಕ್ರಮವು ಅತ್ಯುತ್ತಮ ಉದಾಹರಣೆಯಾಗಿದೆ.

ಸಮುದಾಯ ಆಧರಿತ ಸೇವಾ ವಿತರಣೆ, ಆರೋಗ್ಯ ಕಾರ್ಯಕರ್ತರ ಸಬಲೀಕರಣ, ಉತ್ತರದಾಯಿತ್ವ ಬಲಪಡಿಸಲು ತಂತ್ರಜ್ಞಾನದ ಬಳಕೆ, ಸಮಾನತೆಗಾಗಿ ಗುರಿ ಆಧಾರಿತ ವಿಧಾನಗಳು ಮತ್ತು ಪೂರಕ ವಾತಾವರಣದ ನಿರ್ಮಾಣ ಸೇರಿದಂತೆ ಈ ತತ್ತ್ವಗಳನ್ನು ಹೇಗೆ ಕಾರ್ಯಾಚರಣೆಯ ಕಾರ್ಯತಂತ್ರಗಳಾಗಿ ಪರಿವರ್ತಿಸಬಹುದು ಎಂಬುದನ್ನು ಆಶಾಕಿರಣ ಮಾದರಿಯು ತೋರಿಸಿಕೊಡುತ್ತದೆ. ವ್ಯವಸ್ಥಿತ ಚಿಂತನೆ, ರಾಜಕೀಯ ಬದ್ಧತೆ ಮತ್ತು ನೀತಿ ನಿಯಮಗಳನ್ನು ಕಾರ್ಯಾಚರಣೆಯ ವ್ಯವಸ್ಥೆಯಾಗಿ ಪರಿವರ್ತಿಸುವುದರ ಪ್ರಾಮುಖ್ಯತೆಯನ್ನು ಈ ಮಾದರಿಯು ಎತ್ತಿಹಿಡಿಯುತ್ತದೆ. ಈ ಕಾರಣಕ್ಕಾಗಿ, ಆಶಾಕಿರಣ ಯೋಜನೆಯು ದಾಖಲೀಕರಣ, ಕಲಿಕೆ ಮತ್ತು ಇತರ ಪ್ರದೇಶಗಳಲ್ಲಿ ಅಳವಡಿಸಿಕೊಳ್ಳಲು ಮೌಲ್ಯಯುತ ಪಾಠಗಳನ್ನು ಒದಗಿಸುತ್ತದೆ ಸಾರ್ವಜನಿಕ ಆರೋಗ್ಯ ಕಾರ್ಯಕ್ರಮದೊಳಗೆ ಡಬ್ಲ್ಯೂ.ಎಚ್.ಒನ ಚೌಕಟ್ಟುಗಳನ್ನು ನೀತಿಯಿಂದ ಅನುಷ್ಠಾನಕ್ಕೆ ಹೇಗೆ ತರಬಹುದು ಎಂಬುದನ್ನು ಇದು ಸ್ಪಷ್ಟವಾಗಿ ತೋರಿಸುತ್ತದೆ" ಎಂದು ಹೇಳಿದರು.

# ಬಾಕಿ ವೇತನ, ಶೇ.25ರಷ್ಟು ವೇತನ ಹೆಚ್ಚಳ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಸಾರಿಗೆ ನೌಕರರ ಆಗ್ರಹ

**ಬೆಂಗಳೂರು, ಅ.7:** ವೇತನ ಪರಿಷ್ಕರಣೆ, ಹಿಂಬಾಕಿ ಹಣ ಪಾವತಿ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ನಾಲ್ಕು ಸಾರಿಗೆ ನಿಗಮಗಳ ಸಾರಿಗೆ ಕಾರ್ಮಿಕರ ಜಂಟಿ ಕ್ರಿಯಾ ಸಮಿತಿ ವತಿಯಿಂದ ಇಂದು ನಗರದ ಫ್ರೀಡಂ ಪಾರ್ಕ್‌ನಲ್ಲಿ ಒಂದು ದಿನದ ಸಂಕೇತಿಕ ಧರಣಿ ನಡೆಸಲಾಯಿತು.

ಬೆಳಿಗ್ಗೆ 11 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ನಡೆದ ಧರಣಿಯಲ್ಲಿ ನೂರಾರು ಸಾರಿಗೆ ನೌಕರರು ಹಾಗೂ ನಿವೃತ್ತ ನೌಕರರು ಭಾಗವಹಿಸಿ ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರವನ್ನು ಒತ್ತಾಯಿಸಿದರು. ಈ ವೇಳೆ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ವಿಶೇಷವಾಗಿ 2020ರಲ್ಲಿ ಸೇವೆ ಸಲ್ಲಿಸಿ ಇದೀಗ ನಿವೃತ್ತರಾಗಿರುವ ನೌಕರರು ಹೆಚ್ಚಿನ ಸಂಖ್ಯೆಯಲ್ಲಿ ಧರಣಿಯಲ್ಲಿ ಪಾಲ್ಗೊಂಡಿದ್ದರು. 2020ನೇ ಸಾಲಿನ 12 ತಿಂಗಳ ಬಾಕಿ ವೇತನ ಸೇರಿದಂತೆ ನಿವೃತ್ತ ನೌಕರರಿಗೆ ಬರಬೇಕಿರುವ ವಿವಿಧ ಬಾಕಿಗಳನ್ನು ಪಾವತಿಸಬೇಕು ಎಂದು ಆಗ್ರಹಿಸಿದರು. 2024ರ ಜನವರಿ 1ರಿಂದ ಅನ್ವಯವಾಗುವಂತೆ ವೇತನ ಪರಿಷ್ಕರಣೆ ಮಾಡಬೇಕು ಎಂಬ ಬೇಡಿಕೆಯನ್ನೂ ಮುಂದಿಟ್ಟಿರುವ ನೌಕರರು, ಸರ್ಕಾರದ ಆದೇಶವನ್ನು ತಿದ್ದುಪಡಿ ಮಾಡಿ 2023ರ ಡಿಸೆಂಬರ್ 31ರಂದು ಚಾಲ್ತಿಯಲ್ಲಿದ್ದ ಮೂಲ ವೇತನದ ಮೇಲೆ ಶೇ.25ರಷ್ಟು ಹೆಚ್ಚಳವನ್ನು 2024ರ ಜನವರಿ 1ರಿಂದ 2027ರ ಡಿಸೆಂಬರ್ 31ರವರೆಗೆ ಜಾರಿಗೊಳಿಸಬೇಕು. ಪ್ರಸ್ತುತ ಕೈಗಾರಿಕಾ ಒಪ್ಪಂದಗಳನ್ವಯ 2022ರ ಜುಲೈ 1ರಂದು ಇದ್ದ ಶೇ.31ರಷ್ಟು ತುಟ್ಟಿ ಭತ್ಯೆಯನ್ನು ಮೂಲ ವೇತನದಲ್ಲಿ ವಿಲೀನಗೊಳಿಸಿ, ವಾರ್ಷಿಕ ಬಡ್ತಿಯನ್ನು ಹೆಚ್ಚಿಸುವ ಮೂಲಕ ಹೊಸ ವೇತನ ಶ್ರೇಣಿ ರಚಿಸಬೇಕು. ಈ ಅವಧಿಗೆ ಬಾಕಿ ಇರುವ ಹಣವನ್ನೂ ಪಾವತಿಸಬೇಕು ಎಂದು ಆಗ್ರಹಿಸಿದರು.

ಇದರೊಂದಿಗೆ ಬಾಟಾ ಸೇರಿದಂತೆ ವಿವಿಧ ಭತ್ಯೆಗಳನ್ನು ಹೆಚ್ಚಿಸುವುದು, ಮಂಜೂರಾದ 26 ತಿಂಗಳ ಹಿಂಬಾಕಿ ವೇತನದ 652 ಕೋಟಿ ಮೊತ್ತವನ್ನು ಒಂದೇ ಕಂತಿನಲ್ಲಿ ಪಾವತಿಸುವುದು, ತಾಂತ್ರಿಕ ಸಿಬ್ಬಂದಿಗೆ ಉತ್ಪಾದನಾ ಪ್ರೋತ್ಸಾಹಧನ ನೀಡುವುದು



ಹಾಗೂ ಫಾರಂ–4, ವೈದ್ಯಕೀಯ ಸೌಲಭ್ಯ ಸೇರಿದಂತೆ ಹಲವು ಬೇಡಿಕೆಗಳನ್ನು ಜಂಟಿ ಕ್ರಿಯಾ ಸಮಿತಿಯೊಂದಿಗೆ ಚರ್ಚಿಸಿ ಶೀಘ್ರ ಬಗೆಹರಿಸುವಂತೆ ಒತ್ತಾಯಿಸಿದರು.

ಸಾರಿಗೆ ನಿಗಮಗಳಿಗೆ ಶಕ್ತಿ ಯೋಜನೆಯಡಿ ಸರ್ಕಾರದಿಂದ ಬರಬೇಕಿರುವ ಬಾಕಿ ಮೊತ್ತವನ್ನು ಒಂದೇ ಕಂತಿನಲ್ಲಿ ಬಿಡುಗಡೆ ಮಾಡಬೇಕು. ನಿವೃತ್ತ ನೌಕರರಿಗೆ ನೀಡಬೇಕಿರುವ ಎಲ್ಲ ಬಾಕಿಗಳನ್ನು ಕೂಡಲೇ ಪಾವತಿಸುವುದರ ಜೊತೆಗೆ ಕನಿಷ್ಠ 7,500 ಮೂಲ ಮಾಸಿಕ ಪಿಂಚಣಿ ಹಾಗೂ ವೈದ್ಯಕೀಯ ಭತ್ಯೆ ನೀಡಬೇಕು. ಸರ್ಕಾರ ನಮ್ಮ ಬೇಡಿಕೆಗಳನ್ನು ಶೀಘ್ರ ಈಡೇರಿಸದಿದ್ದರೆ ಮುಂದಿನ ದಿನಗಳಲ್ಲಿ ಮತ್ತಷ್ಟು ತೀವ್ರ ಹೋರಾಟ ನಡೆಸಲಾಗುವುದು ಎಂದು ಜಂಟಿ ಕ್ರಿಯಾ ಸಮಿತಿ ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ.



ಮೈಸೂರಿನ ಕರ್ನಾಟಕ ಪ್ರದರ್ಶನ ಪ್ರಾಧಿಕಾರದ (KEA) ಮೈದಾನದ ವಾಹನ ನಿಲುಗಡೆ ಪ್ರದೇಶದಲ್ಲಿ, ಸಾಂಪ್ರದಾಯಿಕ ಮೈಸೂರು ದಸರಾ ಫಿರಂಗಿ ಸಿಡಿಸುವ ತಾಲೀಮಿನ ಮೊದಲ ಸುತ್ತು ಬುಧವಾರ ಯಶಸ್ವಿಯಾಗಿ ಆರಂಭವಾಯಿತು. ದಸರಾ ಮಹೋತ್ಸವದ ಅಂತಿಮ ಮೆರವಣಿಗೆಗೆ ಮುನ್ನ, ಫಿರಂಗಿ ಸಿಡಿಸುವಾಗ ಉಂಟಾಗುವ ಕಿವಿಕಚ್ಚುವ ಹಾಗೂ ಭಾರಿ ಶಬ್ದಕ್ಕೆ ದಸರಾ ಆನೆಗಳು ಮತ್ತು ಅಶ್ವದಳದ ಕುದುರೆಗಳು ಸಂಪೂರ್ಣವಾಗಿ ಒಗ್ಗಿಕೊಳ್ಳುವಂತೆ ಮಾಡುವುದು ಈ ಪ್ರಮುಖ ತಾಲೀಮಿನ ಉದ್ದೇಶವಾಗಿದೆ.

# ರಾಜ್ಯದಲ್ಲಿ ಭೀಕರ ಬರ: ರೈತರ ನೆರವಿಗೆ ಸರ್ಕಾರ ಬದ್ಧ- ಡಾ.ಜಿ.ಪರಮೇಶ್ವರ

**ಬಳ್ಳಾರಿ,ಅ.07.**ಕರ್ನಾಟಕದಲ್ಲಿ ಕಳೆದ 75 ವರ್ಷಗಳಲ್ಲೇ ಕಾಣದಂತಹ ಭೀಕರ ಬರಗಾಲ ಎದುರಾಗಿದ್ದು, ಸಂಕಷ್ಟದಲ್ಲಿರುವ ಅನ್ನದಾತರ ನೆರವಿಗೆ ನಮ್ಮ ಸರ್ಕಾರ ಸಂಪೂರ್ಣವಾಗಿ ಬದ್ಧವಾಗಿದೆ ಎಂದು ಉಪ ಮುಖ್ಯಮಂತ್ರಿ ಹಾಗೂ ಕಂದಾಯ ಸಚಿವರೂ ಆದ ಡಾ.ಜಿ. ಪರಮೇಶ್ವರ ಅವರು ಹೇಳಿದರು.

ಬುಧವಾರ, ಬಳ್ಳಾರಿ ತಾಲೂಕಿನ ಹಲಕುಂದಿ ಗ್ರಾಮದಲ್ಲಿ ಮಳೆ ಕೊರತೆಯಿಂದ ಹೊಲದಲ್ಲಿ ಒಣಗುತ್ತಿರುವ ತೊಗರಿ ಬೆಳೆಗಳನ್ನು ಖುದ್ದು ವೀಕ್ಷಿಸಿದ ಬಳಿಕ ಅವರು ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದರು.



**ಬರಪೀಡಿತ ತಾಲೂಕುಗಳ ಘೋಷಣೆ**

ಕರಾವಳಿ ತೀರದ 10?15 ತಾಲೂಕುಗಳನ್ನು ಹೊರತುಪಡಿಸಿ ರಾಜ್ಯದ ಉಳಿದೆಲ್ಲಾ ಭಾಗಗಳಲ್ಲಿ ಭೀಕರ ಬರ ಆವರಿಸಿದೆ. ಈಗಾಗಲೇ 216 ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದ್ದು, ಉಳಿದ 23 ತಾಲೂಕುಗಳಲ್ಲಿ ಕ್ಷೇತ್ರಗಳ ವಾಸ್ತವಿಕ ಪರಿಶೀಲನೆ ನಡೆಯುತ್ತಿದ್ದು, ಅವುಗಳಲ್ಲಿಯೂ 10 ರಿಂದ 15 ತಾಲೂಕುಗಳನ್ನು ಶೀಘ್ರವೇ ಬರಪೀಡಿತ ಪಟ್ಟಿಗೆ ಸೇರಿಸಲಾಗುವುದು. ರಾಜ್ಯದಲ್ಲಿ ಶೇಕಡಾ 90 ರಷ್ಟು ಬೆಳೆ ಹಾನಿಯಾಗಿದೆ. ರೈತರು ಬೆಳೆದ ತೊಗರಿ, ಜೋಳ ಸಂಪೂರ್ಣ ನೆಲಕಚ್ಚಿದ್ದು, ಕೈಗೆ ಬಂದ ತುತ್ತು ಬಾಯಿಗೆ ಬಾರದಂತಾಗಿದೆ ಎಂದು ತಿಳಿಸಿದರು.

**ಕುಡಿಯುವ ನೀರಿನ ಸಮಸ್ಯೆ ಮತ್ತು ಅನುದಾನ:**

ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿದ್ದು, ಪರಿಸ್ಥಿತಿ ನಿಭಾಯಿಸಲು ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಒಟ್ಟು ರೂ. 306 ಕೋಟಿ ವಿಶೇಷ ಅನುದಾನ ಬಿಡುಗಡೆ ಮಾಡಲಾಗಿದೆ. ಅಲ್ಲದೆ, ಜಿಲ್ಲಾಧಿಕಾರಿಗಳ ಖಾತೆಯಲ್ಲಿರುವ ಹಣವನ್ನು ಬಳಸಿಕೊಂಡು ತುರ್ತು ಪರಿಹಾರ ಕಾರ್ಯ ಕೈಗೊಳ್ಳಲು ಸೂಚಿಸಲಾಗಿದೆ ಎಂದರು.

**ಮೊದಲ ಕಂತಿನ ಪರಿಹಾರ:**

ರೈತರಿಗೆ ತಕ್ಷಣದ ನೆರವಿಗಾಗಿ ಮೊದಲ ಕಂತಿನಲ್ಲಿ ರೂ. 2,500 ಬರ ಪರಿಹಾರವನ್ನು ರಾಜ್ಯ ಸರ್ಕಾರವೇ ಬಿಡುಗಡೆ ಮಾಡಲು ಆದೇಶ ಹೊರಡಿಸಿದ್ದು, ಶೀಘ್ರ ರೈತರಿಗೆ ಪಾವತಿಯಾಗಲಿದೆ. ಬರದಿಂದಾಗಿ ರಾಜ್ಯಕ್ಕೆ ಒಟ್ಟು ರೂ. 46,000 ಕೋಟಿಗೂ ಹೆಚ್ಚು ನಷ್ಟ ಸಂಭವಿಸಿದೆ. ಎನ್‌ಡಿಆರ್‌ಎಫ್ ನಿಯಮಾವಳಿಗಳ ಪ್ರಕಾರ ರಾಜ್ಯ ಸರ್ಕಾರವು 11,000 ಕೋಟಿ ನೆರವು ನೀಡುವಂತೆ ಕೇಂದ್ರಕ್ಕೆ ಎರಡು ಬಾರಿ ಮನವಿ ಸಲ್ಲಿಸಿದೆ. ಕೇಂದ್ರ ಬರ ಅಧ್ಯಯನ ತಂಡ ರಾಜ್ಯದ ಹಲವು ಜಿಲ್ಲೆಗಳಿಗೆ ಭೇಟಿ ನೀಡಿ ಪರಿಶೀಲಿಸಿದ್ದು, ಅವರು ನೀಡುವ ವರದಿಯ ಆಧಾರದಲ್ಲಿ ಶೀಘ್ರವೇ ಕೇಂದ್ರದಿಂದ ಅನುದಾನ ಬಿಡುಗಡೆಯಾಗುವ ನಿರೀಕ್ಷೆಯಿದೆ ಎಂದರು.

**ರೈತರ ಸಾಲ ವಸೂಲಾತಿ ಮುಂದೂಡಿಕೆ:**

ಸಂಕಷ್ಟದಲ್ಲಿರುವ ರೈತರ ನೆರವಿಗೆ ಸರ್ಕಾರ ನಿಲ್ಲಲಿದ್ದು, ಯಾವುದೇ ಕಾರಣಕ್ಕೂ ರೈತರು ಆತ್ಮಹತ್ಯೆಯಂತಹ ಕಠಿಣ ನಿರ್ಧಾರ ಕೈಗೊಳ್ಳಬಾರದು ಎಂದು ಮನವಿ ಮಾಡಿದ ಉಪಮುಖ್ಯಮಂತ್ರಿಗಳು, ಸಹಕಾರಿ ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ರೈತರ ಸಾಲ ವಸೂಲಾತಿಯನ್ನು ವರ್ಷಕಾಲ ಮುಂದೂಡಲು ಸೂಚನೆ ನೀಡಲಾಗಿದೆ. ಇದಲ್ಲದೆ, ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳು ಹಾಗೂ ವಿದ್ಯುತ್ ಸಬ್ಸಿಡಿ ಮೂಲಕ ಬಡ ಹಾಗೂ ರೈತ ಕುಟುಂಬಗಳಿಗೆ ವಾರ್ಷಿಕ 60,000 ದಿಂದ 70,000 ಕೋಟಿ ರೂ. ಆರ್ಥಿಕ ನೆರವು ತಲುಪುತ್ತಿದೆ. ಬರ ಪರಿಹಾರ ಕಾಮಗಾರಿಗಳೇ ಸರ್ಕಾರದ ಮೊದಲ ಆದ್ಯತೆಯಾಗಿದೆ ಎಂದು ಅವರು ಸ್ಪಷ್ಟಪಡಿಸಿದರು.

**ರೈತರೊಂದಿಗೆ ಸಂವಾದ:**

ಇದಕ್ಕೂ ಮುನ್ನ ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ ಅವರು, ರೈತರೊಂದಿಗೆ ಸಮಾಲೋಚನೆ ನಡೆಸಿ, ಬೆಳೆನಷ್ಟ ಹಾಗೂ ರೈತರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಮಾಹಿತಿ ಪಡೆದರು. ಈ ಸಂದರ್ಭದಲ್ಲಿ ರೈತ ದುರ್ಗಣ್ಣ ಅವರು, ಒಂದು ಎಕರೆ ತೊಗರಿ ಬೆಳೆಯಲು ಈವರೆಗೆ ಸುಮಾರು 15 ಸಾವಿರ ವೆಚ್ಚವಾಗಿದೆ. ಸಮಯಕ್ಕೆ ಸರಿಯಾಗಿ ಉತ್ತಮ ಮಳೆಯಾಗಿದ್ದರೆ ಪ್ರತಿ ಎಕರೆಗೆ 5ರಿಂದ 6 ಕ್ವಿಂಟಲ್‌ವರೆಗೆ ತೊಗರಿ ಇಳುವರಿ ನಿರೀಕ್ಷಿಸಲಾಗಿತ್ತು. ಆದರೆ, ಈ ಬಾರಿ ಮಳೆ ಕೊರತೆಯಿಂದಾಗಿ ಬೆಳೆ ಒಣಗಿ ಸಂಪೂರ್ಣ ಹಾನಿಗೀಡಾಗಿದೆ. ಯಾವುದೇ ಇಳುವರಿ ಬಾರದ ಹಿನ್ನೆಲೆಯಲ್ಲಿ ಬೆಳೆಗಾರರಿಗೆ ಭಾರಿ ನಷ್ಟವಾಗಿದೆ. ಆದ್ದರಿಂದ ಸರ್ಕಾರ ರೈತರ ಬೆಳೆ ನಷ್ಟವನ್ನು ಪರಿಗಣಿಸಿ, ಸೂಕ್ತ ಪರಿಹಾರ ಒದಗಿಸಬೇಕು, ಅಲ್ಲದೆ ಬೆಳೆ ವಿಮೆ ಪರಿಹಾರವನ್ನೂ ಒದಗಿಸಬೇಕು ಎಂದು ಉಪಮುಖ್ಯಮಂತ್ರಿಯವರಲ್ಲಿ ಮನವಿ ಮಾಡಿದರು.

ಇನ್ಸೂರೆನ್ಸ್ ಕಂಪನಿಯವರಿಗೆ ಈಗಾಗಲೇ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಯಾವುದೇ ಕಾರಣಕ್ಕೂ ರೈತರು ಧೃತಿಗೆಡಬಾರದು, ವಿಮಾ ಕಂಪನಿಗಳಿಂದ ರೈತರಿಗೆ ಬರಬೇಕಾದ ಪರಿಹಾರದ ಹಣವನ್ನು ಕೊಡಿಸಿಯೇ ತೀರುತ್ತೇವೆ, ಅದಕ್ಕಾಗಿ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಲಿದೆ ಎಂದು ಸ್ಥಳದಲ್ಲೇ ಭರವಸೆ ನೀಡಿದರು.

ಬಳಿಕ ಮಳೆ ಕೊರತೆಯಿಂದ ಹಾನಿಗೊಳಗಾಗಿರುವ ತೊಗರಿ ಹಾಗೂ ಸಜ್ಜೆ ಬೆಳೆಗಳ ಜಮೀನುಗಳನ್ನು ಪರಿಶೀಲಿಸಿದರು. ಮಳೆಯ ಅಭಾವದಿಂದ ತೊಗರಿ ಬೆಳೆ ನಿರೀಕ್ಷಿತ ಪ್ರಮಾಣದಲ್ಲಿ ಬೆಳವಣಿಗೆಯಾಗದೆ ಕುಂಠಿತಗೊಂಡಿರುವುದು ಹಾಗೂ ಸಜ್ಜೆ ಬೆಳೆ ಸಂಪೂರ್ಣವಾಗಿ ಒಣಗಿ ಹೋಗಿರುವುದು ಸ್ಥಳ ಪರಿಶೀಲನೆ ವೇಳೆ ಕಂಡುಬಂದಿತು. ಈ ಸಂದರ್ಭದಲ್ಲಿ ರೈತರಾದ ಮಲ್ಲಿಕಾರ್ಜುನಗೌಡ ಹಾಗೂ ತಿಪ್ಪೇರುದ್ರಪ್ಪ ಅವರೊಂದಿಗೆ ನೇರವಾಗಿ ಮಾತಿಗಿಳಿದು, ಬೆಳೆ ಹಾನಿ, ಮಳೆ ಕೊರತೆ ಹಾಗೂ ತಾವು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಮಾಹಿತಿ ಪಡೆದರು. ರೈತರ ಅಹವಾಲುಗಳನ್ನು ಆಲಿಸಿದ ಡಿಸಿಎಂ ಅವರು, ಬರ ಪರಿಸ್ಥಿತಿಯಿಂದ ರೈತರಿಗೆ ಉಂಟಾಗಿರುವ ತೊಂದರೆಗಳ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

# ಕಾರ್ಮಿಕರ ಆರೋಗ್ಯ ತಪಾಸಣೆ ಹೆಸರಲ್ಲಿ ೮೦೦ ಕೋಟಿ ದುರ್ಬಳಕೆ: ಮಾಜಿ ಸಚಿವ ಆರಗ ಜ್ಞಾನೇಂದ್ರ ಆರೋಪ

**ಶಿವಮೊಗ್ಗ, ಅ.7:** ಕಾರ್ಮಿಕರ ಆರೋಗ್ಯ ತಪಾಸಣೆ ಹೆಸರಲ್ಲಿ ಕಾರ್ಮಿಕ ಇಲಾಖೆಯಲ್ಲಿ ಬಹುದೊಡ್ಡ ಹಗರಣ ನಡೆದಿದೆ. 3 ವರ್ಷದಲ್ಲಿ 800 ಕೋಟಿ ರೂ ಹಣ ದುರ್ಬಳಕೆ ಆಗಿದೆ. ರಾಜ್ಯದ ನೂರಾರು ಕೋಟಿ ಹಣ ದೆಹಲಿ, ಕೇರಳಕ್ಕೆ ವರ್ಗಾವಣೆ ಆಗಿದೆ ಎಂದು ಮಾಜಿ ಸಚಿವ ಆರಗ ಜ್ಞಾನೇಂದ್ರ ಗಂಭೀರ ಆರೋಪ ಮಾಡಿದ್ದಾರೆ. ಈ ಹಗರಣದ ವಿರುದ್ಧ ಬಿಜೆಪಿ ದೊಡ್ಡ ಹೋರಾಟ ಮಾಡಲಿದೆ ಎಂದು ಅವರು ಎಚ್ಚರಿಕೆ ಕೂಡ ನೀಡಿದ್ದಾರೆ.

ಶಿವಮೊಗ್ಗದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಆರಗ ಜ್ಞಾನೇಂದ್ರ, ರಾಜ್ಯದಲ್ಲಿ 27,13,000 ಕಟ್ಟಡ ಕಾರ್ಮಿಕರ ಆರೋಗ್ಯ ತಪಾಸಣೆ ಮಾಡಲಾಗಿದ್ದು, ಒಬ್ಬ ಕಾರ್ಮಿಕನ ಆರೋಗ್ಯ ತಪಾಸಣೆಗೆ 2,950 ರೂಪಾಯಿ ವೆಚ್ಚವಾಗಿದೆ. ಆ ಮೂಲಕ ಕಾರ್ಮಿಕರ ಆರೋಗ್ಯ ತಪಾಸಣೆ ಹೆಸರಲ್ಲಿ 3 ವರ್ಷದಲ್ಲಿ 800 ಕೋಟಿ ರೂ ಹಣ ಲೂಟಿ ಆಗಿದೆ. ಎಂಟು ಏಜೆನ್ಸಿಗಳ ಮೂಲಕ ಕಾರ್ಮಿಕ ಇಲಾಖೆಯಲ್ಲಿ ಹಗರಣವಾಗಿದೆ ಎಂದಿದ್ದಾರೆ.



ಪ್ರಕರಣವನ್ನು ಸಿಬಿಐ ಅಥವಾ ಇ.ಡಿ ತನಿಖೆಗೆ ನೀಡಬೇಕು. ಹಗರಣದಲ್ಲಿ ಐಎಎಸ್ ಅಧಿಕಾರಿಗಳು ಸೇರಿ ಎಲ್ಲರೂ ಭಾಗಿಯಾಗಿದ್ದಾರೆ. ಈ ಎಲ್ಲರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು. ಹಗರಣದ ಬಗ್ಗೆ ಕಾರ್ಮಿಕ ಸಚಿವ ಸಂತೋಷ್ ಲಾಡ್ಗೆ ಈಗಾಗಲೇ ದೂರು ನೀಡಲಾಗಿದೆ?. ಆದರೆ ಸಚಿವರು ಮಾತ್ರ ಈ ಬಗ್ಗೆ ಯಾವುದೇ ಗಮನಹರಿಸಿಲ್ಲ.

ಹೀಗಾಗಿ ನೈತಿಕ ಹೊಣೆಹೊತ್ತು ಸಂತೋಷ್ ಲಾಡ್ ರಾಜೀನಾಮೆ ನೀಡಬೇಕು. ಜೊತೆಗೆ ಹಗರಣದ ತನಿಖೆಯನ್ನು ಎದುರಿಸಬೇಕು. ಇಲ್ಲದಿದ್ದರೆ ಸರ್ಕಾರದ ವಿರುದ್ಧ ಬಿಜೆಪಿ ದೊಡ್ಡ ಹೋರಾಟ ಮಾಡಲಿದೆ ಎಂದು ಆರಗ ಜ್ಞಾನೇಂದ್ರ ಎಚ್ಚರಿಕೆ ನೀಡಿದರು.

ಸ್ಟಿಂಗ್ ಆಪರೇಷನ್ ಬಗ್ಗೆ ಎಚ್ಚರ ವಹಿಸಲು ಸಿಎಂ ಡಿಕೆ ಶಿವಕುಮಾರ್ ಸೂಚನೆ ವಿಚಾರವಾಗಿ ಮಾತನಾಡಿದ ಅವರು, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆ ಹಾಸ್ಯಾಸ್ಪದವಾಗಿದೆ. ಕಾಂಗ್ರೆಸ್ ಸರ್ಕಾರದಲ್ಲಿ ನಿರಂತರ ಭ್ರಷ್ಟಾಚಾರ ನಡೆಯುತ್ತಿದೆ.

ಈ ಹಿನ್ನೆಲೆ ಭ್ರಷ್ಟಾಚಾರ ಹೊರಗೆ ಬರದಂತೆ ಸಚಿವರಿಗೆ ಸೂಚನೆ ನೀಡಿದ್ದಾರೆ. ಡಿಕೆ ಶಿವಕುಮಾರ್ ಭಯದಲ್ಲಿದ್ದಾರೆ. ಈ ಹಿನ್ನೆಲೆ ಸ್ಟಿಂಗ್ ಆಪರೇಷನ್ ಕುರಿತು ಸರ್ಕಾರ ಅಲರ್ಟ್ ಆಗಿದೆ ಎಂದು ಹೇಳಿದ್ದಾರೆ.

# ಲೋಕಾಯುಕ್ತ ಬಲೆಗೆ ಸರ್ವೆಯರ್ ಹನುಮಂತಪ್ಪ

**ಬಳ್ಳಾರಿ ಅ 07.** ನಗರದ ಲೇಔಟ್ ಡೆವಲಪರ್ ಅರವಿಂದ ಎನ್ನುವವರು ಲೇಔಟ್ ರಚನೆಗೆ ಅಗತ್ಯವಿದ್ದ ರಸ್ತೆಗಳ ಸರ್ವೇ ನಕಾಶೆ ನೀಡಲು 20 ಸಾವಿರ ರೂ ಲಂಚಕ್ಕೆ ಬೇಡಿಕೆ ಇಟ್ಟಿದ್ದ ಇಲ್ಲಿನ ಸರ್ವೇ ಭೂಮಾಪನಾ ಇಲಾಖೆಯ ಸರ್ವೇಯರ್ ಹನುಮಂತಪ್ಪ 18 ಸಾವಿರ ರೂ ಲಂಚ ಪಡೆಯುವಾಗ ಲೋಕಾಯುಕ್ತ ಅಧಿಕಾರಿಗಳು ಬಂಧಿಸಿದ್ದಾರೆ.

ನಗರದ ಹಳೆಯ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿರುವ ಕಚೇರಿಯಲ್ಲಿ ಸರ್ವೇಯರ್ ಹನುಮಂತಪ್ಪ ಲೋಕಾಯುಕ್ತ ಬಲೆಗೆ ಬಿದ್ದರು.



ಅರವಿಂದಅವರು ರಸ್ತೆ ಸರ್ವೇ ನಕ್ಷೆ ಪಡೆಯಲು ಸರ್ವೇ ಇಲಾಖೆಗೆ ಅರ್ಜಿ ಸಲ್ಲಿಸಿದ್ದರು. ಅದನ್ನು ನೀಡಲು ಹನುಮಂತಪ್ಪ 20 ಸಾವಿರ ರೂ ಲಂಚ ನೀಡುವಂತೆ ಕೋರಿದ್ದರಂತೆ.

ಲಂಚ ನೀಡಲು ಇಚ್ಛಿಸದ ಅರವಿಂದ ಈ ಕುರಿತು ಲೋಕಾಯುಕ್ತ ಅಧಿಕಾರಿಗಳಿಗೆ ದೂರು ನೀಡಿದ್ದರು. ಅವರ ದೂರಿನ ಮೇಲೆ ಕಾರ್ಯಾಚರಣೆ ನಡೆಸಿದ ಲೋಕಾ ಅಧಿಕಾರಿಗಳು. ಅರವಿಂದ ಅವರಿಂದ 18 ಸಾವಿರ ರೂ ನಗದು ಹಣದ ಲಂಚದ ಹಣ ಸ್ವೀಕರಿಸುತ್ತಿದ್ದಾಗ ಹನುಮಂತಪ್ಪ ಅವರನ್ನು ಲೋಕಾಯುಕ್ತ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ. ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಕಾರ್ಯಾಚರಣೆ ಯಲ್ಲಿ ಡಿವೈಎಸ್ಪಿ ಎಸ್.ಎಸ್. ಬೀಳಗಿ, ತನಿಖಾಧಿಕಾರಿ ಗುರಣ್ಣ ಹೆಬ್ಬಾಳ್, ಸಿಪಿಐ ಸುರೇಶ್ ಹಾಗು ಸಿಬ್ಬಂದಿ ಉಪಸ್ಥಿತರಿದ್ದರು.

## ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸರ್ಕಾರ ಬದ್ಧ,

# ಕರಡು ಮೀಸಲು ಸಿದ್ಧ: ಸಚಿವ ಈಶ್ವರ ಖಂಡ್ರೆ

**ಬೀದರ್, ಅ. 7:** ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ರಾಜ್ಯ ಸರ್ಕಾರ ಬದ್ಧವಾಗಿದೆ. ಈ ಹಿನ್ನೆಲೆಯಲ್ಲಿ ಎಲ್ಲ ಅಗತ್ಯ ಕ್ರಮ ವಹಿಸಲಾಗಿದೆ. ಸದ್ಯ ವಿಧಾನ ಪರಿಷತ್ ಚುನಾವಣೆ ಮಾದರಿ ನೀತಿ ಸಂಹಿತೆ ಜಾರಿಯಲ್ಲಿ ಇರುವುದರಿಂದ ಚುನಾವಣಾ ಆಯೋಗ ಅನುಮತಿ ನೀಡಿದರೆ ತತ್‌ಕ್ಷಣವೇ ಅಧಿಸೂಚನೆ ಹೊರಿಡಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈರ್ಶವರ ಖಂಡ್ರೆ ತಿಳಿಸಿದರು.

ನಗರದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಈಗಾಗಲೇ ಗ್ರಾಮ ಪಂಚಾಯತಿಗಳ ಮೀಸಲಾತಿ ಪೂರ್ಣಗೊಂಡಿದೆ.

ತಾಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳ ಮೀಸಲಾತಿ ಪ್ರಕ್ರಿಯೆಯೂ ಮುಗಿದಿದ್ದು ಕರಡು ಅಧಿಸೂಚನೆ ಹೊರಡಿಸಲು ಸಿದ್ಧವಾಗಿದ್ದೇವೆ. ಆದರೆ ಪದವೀಧರ ಮತ್ತು ಶಿಕ್ಷಕರ ಕ್ಷೇತ್ರದ ಚುನಾವಣೆ ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವ ಕಾರಣ ಕೇಂದ್ರ ಚುನಾವಣೆ ಆಯೋಗದ ಅನುಮತಿ ಕೇಳಲಾಗಿದ್ದು, ಅನುಮತಿ ಸಿಕ್ಕರೆ ತಕ್ಷಣ ಕರಡು ಅಧಿಸೂಚನೆ ಹೊರಡಿಸಲಾಗುವುದು ಎಂದು ತಿಳಿಸಿದರು.



ಕರಡು ಅಧಿಸೂಚನೆ ಪ್ರಕಟವಾದ ಬಳಿಕ ಆಕ್ಷೇಪಣೆ ಸಲ್ಲಿಸಲು ನಿಯಮಾನುಸಾರ ಕಾಲಾವಕಾಶ ನೀಡಿ, ಪ್ರಕ್ರಿಯೆಯ ಬಳಿಕ ಅಂತಿಮ ಅಧಿಸೂಚನೆ ಹೊರಡಿಸಿ, ಉಚ್ಚ ನ್ಯಾಯಾಲಯಕ್ಕೆ ಪ್ರಮಾಣಪತ್ರ ಸಲ್ಲಿಕೆ ಮಾಡಲಾಗುವುದು.

ಬಳಿಕ ರಾಜ್ಯ ಚುನಾವಣೆ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಈಶ್ವರ ಖಂಡ್ರೆ ಮಾಹಿತಿ ನೀಡಿದ್ದಾರೆ.

# ವೇತನವಿಲ್ಲ, ಹೊಟ್ಟೆಗೆ ಹಿಟ್ಟಿಲ್ಲ, ಸಮಾಜಕಲ್ಯಾಣ ಇಲಾಖೆ ವಿರುದ್ಧ ಸಿಡಿದೆದ್ದ ಹೊರಗುತ್ತಿಗೆ ನೌಕರರು

**ಕಲಬುರಗಿ, ಅ. 7:** ಬೆಳಗ್ಗೆಯಿಂದ ಸಂಜೆಯವರೆಗೆ ಮಕ್ಕಳ ಭವಿಷ್ಯ ರೂಪಿಸುವ, ವಸತಿ ಶಾಲೆಗಳಲ್ಲಿ ಹಗಲಿರುಳು ಬೆವರು ಸುರಿಸಿ ದುಡಿಯುವ ಹೊರಗುತ್ತಿಗೆ ನೌಕರರ ಬದುಕು ಇದೀಗ ಬೀದಿಗೆ ಬಿದ್ದಿದೆ. ಕಳೆದ 3–4 ತಿಂಗಳಿಂದ ಬಿಡಿಗಾಸು ವೇತನವಿಲ್ಲದೆ, ಸಂಸಾರ ಸಾಗಿಸಲು ಪರದಾಡುತ್ತಿರುವ ಹಾಸ್ಟೆಲ್ ಸಿಬ್ಬಂದಿ ಇದೀಗ ಸಮಾಜಕಲ್ಯಾಣ ಇಲಾಖೆಯ ವಿರುದ್ಧ ರಣಕಹಳೆ ಮೊಳಗಿಸಿದ್ದಾರೆ.



ಕರ್ನಾಟಕ ರಾಜ್ಯ ಸರಕಾರಿ ಹಾಸ್ಟೆಲ್ ಮತ್ತು ವಸತಿ ಶಾಲಾ ಹೊರಗುತ್ತಿಗೆ ನೌಕರರ ಸಂಘ ಹಾಗೂ ಎಐ ಎಡಬ್ಲುಸಿ ನೇತೃತ್ವದಲ್ಲಿ, ಸಮಾಜ ಕಲ್ಯಾಣ ಇಲಾಖೆಯ ಕಚೇರಿ ಎದುರು ಕಳೆದ 5 ದಿನಗಳಿಂದ ನಿರಂತರ ಧರಣಿ ಸತ್ಯಾಗ್ರಹ ನಡೆಯುತ್ತಿದ್ದು, ಸರ್ಕಾರದ ನಿರ್ಲಕ್ಷ್ಯದ ವಿರುದ್ಧ ಕಾರ್ಮಿಕರ ಆಕ್ರೋಶ ಕಟ್ಟೆಯೊಡೆದಿದೆ.

ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ ಮತ್ತು ಇಂದಿರಾ ಗಾಂಧಿ ವಸತಿ ನಿಲಯಗಳಲ್ಲಿ ದುಡಿಯುತ್ತಿರುವ ನೌಕರರ ಪರಿಸ್ಥಿತಿ ಹೇಳತೀರದಾಗಿದೆ. ತಿಂಗಳುಗಟ್ಟಲೆ ಸಂಬಳವಿಲ್ಲದೆ ದಿನಸಿ ತರಲೂ ಪರದಾಡುತ್ತಿರುವ ಇವರಿಗೆ, ಕರಜಗಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಮತ್ತೊಂದು ಆಘಾತ ಎದುರಾಗಿದೆ. ಸಂಘದ ರಾಜ್ಯಾಧ್ಯಕ್ಷರಾದ ಭೀಮಶೆಟ್ಟಿ ಯಂಪಳ್ಳಿ ಸರ್ಕಾರದ ದ್ವಂದ್ವ ನೀತಿಯನ್ನು ಕಟುವಾಗಿ ಟೀಕಿಸಿದ್ದಾರೆ. "2026ರ ಮೇ 22 ರಂದೇ ಸರ್ಕಾರ ಪರಿಷ್ಕೃತ ಕನಿಷ್ಠ ವೇತನ ಜಾರಿಗೆ ಆದೇಶಿಸಿದೆ. ಬಿಟಿಎಂ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳಲ್ಲಿ ಆ ಆದೇಶ ಪಾಲನೆಯಾಗಿ ವೇತನ ಪಾವತಿಯಾಗಿದೆ. ಆದರೆ, ಕಲಬುರಗಿ ಸಮಾಜಕಲ್ಯಾಣ ಇಲಾಖೆ ಮಾತ್ರ ಈ ಆದೇಶವನ್ನು ಕಸದ ಬುಟ್ಟಿಗೆ ಹಾಕಿದೆ. ಬರೀ ಭರವಸೆಗಳಿಂದ ಹೊಟ್ಟೆ ತುಂಬುವುದಿಲ್ಲ, ತಕ್ಷಣವೇ ಆದೇಶ ಜಾರಿಯಾಗದಿದ್ದರೆ ಹೋರಾಟ ತೀವ್ರಗೊಳ್ಳಲಿದೆ," ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬೆವರು ಸುರಿಸುವ ಕಾರ್ಮಿಕರಿಗೆ ಸಂಬಳವಿಲ್ಲ, ಆದರೆ ಅಧಿಕಾರಿಗಳಿಗೆ ಹಾಗೂ ಏಜೆನ್ಸಿಗಳಿಗೆ ಮಾತ್ರ ಲಂಚದ ಸುರಿಮಳೆಯಾಗುತ್ತಿದೆ ಎಂಬ ಗಂಭೀರ ಆರೋಪಗಳು ಕೇಳಿಬಂದಿವೆ. ಹೊಸ ನೌಕರರ ನೇಮಕಾತಿಗಾಗಿ 1 ರಿಂದ 1.5 ಲಕ್ಷ ರೂಪಾಯಿ ಲಂಚ ಪಡೆಯಲಾಗುತ್ತಿದೆ ಎಂದು ಜಿಲ್ಲಾಧ್ಯಕ್ಷ ಪರಶುರಾಮ ಹಡಲಗಿ ದೂರಿದ್ದಾರೆ.

ಇದಕ್ಕೆ ದನಿಗೂಡಿಸಿದ ಜಿಲ್ಲಾ ಕಾರ್ಯದರ್ಶಿ ಮಹಮ್ಮದ್ ಜಮೀರುದ್ದೀನ್ ಬಾಬಾ, "ಮೈಸೂರಿನ 'ಶಾರ್ಪ್ ಏಜೆನ್ಸಿ'ಯ ಟೆಂಡರ್ ಅವಧಿ ಮುಗಿದಿದೆ. ಆದರೂ, ಕೇವಲ ಲಂಚದ ಪ್ರಭಾವದಿಂದ ತಾತ್ಕಾಲಿಕ ನೇಮಕಾತಿ ಆದೇಶವೂ ಇಲ್ಲದೆ ಅದೇ ಏಜೆನ್ಸಿಯನ್ನು ಮುಂದುವರಿಸಲಾಗುತ್ತಿದೆ. ಈ ಕೂಡಲೇ ಭ್ರಷ್ಟಾಚಾರದ ಬಗ್ಗೆ ಸಮಗ್ರ ತನಿಖೆಯಾಗಿ ಶಿಸ್ತುಕ್ರಮ ಕೈಗೊಳ್ಳಬೇಕು," ಎಂದು ಒತ್ತಾಯಿಸಿದ್ದಾರೆ. ಮತ್ತೊಂದೆಡೆ ಚಿಂಚೋಳಿ ತಾಲೂಕು ಅಧ್ಯಕ್ಷೆ ನರಸಮ್ಮ ಚಂದನಕೇರಾ ಅವರು ನೌಕರರ ದೈಹಿಕ ಯಾತನೆಯನ್ನು ಬಿಚ್ಚಿಟ್ಟರು. "100 ವಿದ್ಯಾರ್ಥಿಗಳಿಗೆ 5 ಸಿಬ್ಬಂದಿ ಇರಬೇಕಿದ್ದ ಕಡೆ ಈಗ 4 ಜನರಿಗೆ ಕಡಿತಗೊಳಿಸಲಾಗಿದೆ. ಕೆಲಸದ ಒತ್ತಡ ಹೆಚ್ಚಾಗಿ ನೌಕರರು ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ನಾವೂ ಮನುಷ್ಯರು, ನಮಗೂ ವಾರಕ್ಕೊಂದು ಕಡ್ಡಾಯ ರಜೆ ಬೇಕು. ಹಿಂದಿನಂತೆ 100 ವಿದ್ಯಾರ್ಥಿಗಳಿಗೆ 5 ಜನ ಸಿಬ್ಬಂದಿಯನ್ನು ನೇಮಿಸಬೇಕು," ಎಂದು ಆಗ್ರಹಿಸಿದರು.

ಕೂಡಲೇ ಕನಿಷ್ಠ ವೇತನ ಜಾರಿಗೊಳಿಸಿ, ಬಾಕಿ ವೇತನ ಪಾವತಿಸಿ, ವಜಾಗೊಂಡವರನ್ನು ಮರುನೇಮಕ ಮಾಡಿ ಹಾಗೂ ಇಲಾಖೆಯ ಭ್ರಷ್ಟಾಚಾರದ ತನಿಖೆ ನಡೆಸಿ. ಸರ್ಕಾರ ಈಗಲಾದರೂ ಎಚ್ಚೆತ್ತುಕೊಳ್ಳದಿದ್ದರೆ, ಮುಂಬರುವ ದಿನಗಳಲ್ಲಿ ಇಡೀ ರಾಜ್ಯಾದ್ಯಂತ ಉಗ್ರ ಸ್ವರೂಪದ ಹೋರಾಟ ರೂಪಿಸಲಾಗುವುದು ಎಂದು ಯಾದಗಿರಿ ಜಿಲ್ಲಾಧ್ಯಕ್ಷ ದಾವಲ್ ಸಾಬ್ ನಡಾಫ್ ಸರ್ಕಾರಕ್ಕೆ ನೇರ ಎಚ್ಚರಿಕೆ ರವಾನಿಸಿದ್ದಾರೆ.

## ಮತದಾರ ಪಟ್ಟಿಯಲ್ಲಿ ಸತ್ತವರು ಮಾಧ್ಯಮದ ಮುಂದೆ ಪ್ರತ್ಯಕ್ಷ...!

# ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಪಟ್ಟಿಯಲ್ಲಿದ್ದ ಮೃತ ಮಹಿಳಾ ಮತದಾರರ ಆಕ್ರೋಶ

**ವಿಜಯಪುರ, ಅ.7:** ಕರ್ನಾಟಕದಲ್ಲಿ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಕುರಿತ ವಿವಾದ ದಿನದಿಂದ ದಿನಕ್ಕೆ ತೀವ್ರಗೊಳ್ಳುತ್ತಿದೆ. ವಿಜಯಪುರ ನಗರ ಶಾಸಕ, ಹಿಂದೂ ಫೈರ್ ಬ್ರ್ಯಾಂಡ್ ಬಸನಗೌಡ ಆರ್. ಪಾಟೀಲ್ ಯತ್ನಾಳ್ ಅವರು ಸಲ್ಲಿಸಿದ ಮೃತ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರುಗಳಿವೆ ಎಂದು ತಿಳಿದುಬಂದ ಬಳಿಕ ಮೂವರು ಮಹಿಳಾ ಮತದಾರರು ಇದೀಗ ತಾವು ಜೀವಂತವಾಗಿರುವುದನ್ನು ಸಾಬೀತುಪಡಿಸಲು ಮಾಧ್ಯಮಗಳ ಮುಂದೆ ಪ್ರತ್ಯಕ್ಷರಾಗಿದ್ದಾರೆ.



ಅವರು ಮಾಧ್ಯಮಗಳ ಮುಂದೆ ಆಧಾರ್ ಸೇರಿದಂತೆ ಇತರ ದಾಖಲೆಗಳನ್ನು ಹಾಜರುಪಡಿಸಿ, ತಮ್ಮ ವಿರುದ್ಧ ನಡೆದಿದೆ ಎಂದು ಹೇಳಲಾದ ಸಂಚಿನ ಹಿಂದೆ ಇರುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ.

ನಗರದಲ್ಲಿಂದು ಪತ್ರಿಕೆ ಜೊತೆ ಮಾತನಾಡಿದ ವಿಜಯಪುರ ನಗರದ 35 ವರ್ಷದ ಮಹಾಬೂಬಿ ಪೀರಾಜಾದೆ ಜಹಾಗೀರ್‌ದಾರ್, ನನ್ನನ್ನು ಮೃತ ವ್ಯಕ್ತಿಯೆಂದು ಪಟ್ಟಿಯಲ್ಲಿ ಸೇರಿಸಲಾಗಿದೆ. ಆದರೆ ನಾನು ಇನ್ನೂ ಜೀವಂತವಾಗಿದ್ದೇನೆ. ಇದನ್ನು ನಿಮಗೆ ಸಾಬೀತುಪಡಿಸಲು ನಾನು ಇಲ್ಲಿಗೆ ಬರಬೇಕಾಯಿತು ಎಂದು ಹೇಳಿದರು.

ತಮ್ಮ ಹೆಸರನ್ನು ಮೃತ ವ್ಯಕ್ತಿಯ ಹೆಸರಾಗಿ ನಮೂದಿಸಿರುವುದು ತಿಳಿದು ತೀವ್ರ ಆಘಾತಕ್ಕೊಳಗಾಗಿದ್ದೆ. ನನ್ನ ಹೆಸರು ಮೃತರ ಪಟ್ಟಿಯಲ್ಲಿದೆ ಎಂಬ ವಿಚಾರವನ್ನು ತಮಗೆ ಈಗಲೂ ಅರಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದರು.

ಮಹಾಬೂಬಿ ಅವರೊಂದಿಗೆ ಜಿಲ್ಲೆಯ ಇನ್ನಿಬ್ಬರು ಮಹಿಳೆಯರಾದ 57 ವರ್ಷದ ಮಲನ್‌ಬಿ ಜಮಾದಾರ್ ಮತ್ತು 35 ವರ್ಷದ ರಝಿಯಾ ಶೇಖ್ ಕೂಡ ಇದ್ದರು. ಇವರ ಮೇಲೂ ಇದೇ ರೀತಿಯಲ್ಲಿ ದೂರು ದಾಖಲಿಸಲಾಗಿದೆ. ಈ ಮೂವರು ಮಹಿಳೆಯರು ವಿಜಯಪುರ ನಗರದ 1,054 ಮತದಾರರಲ್ಲಿ ಸೇರಿದ್ದಾರೆ. ಇವರ ಹೆಸರುಗಳನ್ನು ಎಸ್.ಐ.ಆರ್ ಸಂದರ್ಭದಲ್ಲಿ ಮತದಾರರ ಪಟ್ಟಿಯಿಂದ ಅಳಿಸುವಂತೆ ಯತ್ನಾಳ್ ಅವರು ಸಲ್ಲಿಸಿದ್ದ ಪಟ್ಟಿಯಲ್ಲಿ ಸೇರಿಸಲಾಗಿತ್ತು. ಈ ಪೈಕಿ ಎಂಟು ಮತದಾರರನ್ನು ಮರಣ ಪ್ರಮಾಣಪತ್ರಗಳ ಆಧಾರದ ಮೇಲೆ ಮೃತರೆಂದು ನಮೂದಿಸಲಾಗಿತ್ತು. ಈ ಮೂವರು ಮಹಿಳೆಯರೂ ಆ ಎಂಟು ಮಂದಿಯಲ್ಲಿ ಸೇರಿದ್ದಾರೆ.

ಆಗಸ್ಟ್ 31ರಂದು ಕೇಂದ್ರದ ಮಾಜಿ ಸಚಿವರೂ ಆಗಿರುವ ಯತ್ನಾಳ್ ಅವರು ಮಹಾನಗರ ಪಾಲಿಕೆ ಆಯುಕ್ತರು ಮತ್ತು ಸಹಾಯಕ ಮತದಾರರ ನೋಂದಣಿ ಅಧಿಕಾರಿಗಳಿಗೆ ಪತ್ರ ಬರೆದು ಈ ಹೆಸರುಗಳ ಕುರಿತು ಆಕ್ಷೇಪ ವ್ಯಕ್ತಪಡಿಸಿದ್ದರು. ಬಳಿಕ ಜಿಲ್ಲಾಧಿಕಾರಿಗಳು ಎಇಆರ್‌ಒಗೆ ದಾಖಲೆಗಳನ್ನು ಪರಿಶೀಲಿಸುವಂತೆ ಸೂಚಿಸಿದರು. ಇದರ ನಂತರ ಇಆರ್‌ಒ ಅವರು ಮಹಜರ್ ನಡೆಸುವಂತೆ ಆದೇಶಿಸಿದರು. ಈ ಪರಿಶೀಲನೆಯು 1,054 ಮತದಾರರು ಮೃತಪಟ್ಟಿದ್ದಾರೆ ಮತ್ತು ಆದ್ದರಿಂದ ಅವರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ಅಳಿಸಬೇಕು ಎಂಬ ಯತ್ನಾಳ್ ಅವರ ಹೇಳಿಕೆಯನ್ನೂ ಪ್ರಶ್ನಿಸಿತು.

ವಿಚಾರಣೆಯಲ್ಲಿ ಕನಿಷ್ಠ ಎಂಟು ಮತದಾರರಿಗೆ ಸಂಬಂಧಿಸಿದಂತೆ ಉಲ್ಲೇಖಿಸಲಾಗಿದ್ದ ಮರಣ ಪ್ರಮಾಣಪತ್ರಗಳನ್ನು ತಪ್ಪಾಗಿ ಜೋಡಿಸಿರುವುದು ಕಂಡುಬಂದಿದೆ. ಆ ಪ್ರಮಾಣಪತ್ರಗಳು ಅದೇ ಹೆಸರಿನ ಇತರ ವ್ಯಕ್ತಿಗಳಿಗೆ ಸೇರಿದ್ದವು ಅಥವಾ ನಕಲಿ ಮಾಡಲಾಗಿದೆ ಎಂದು ಆರೋಪಿಸಲಾಗಿದೆ.

ವಿಜಯಪುರ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಆನಂದ್ ಕೆ. ಅವರ ಪ್ರಕಾರ, ಎಸ್.ಐ.ಆರ್ ಪ್ರಕ್ರಿಯೆಯನ್ನು ನಿಯಂತ್ರಿಸುವ 1950ರ ಜನಪ್ರತಿನಿಧಿ ಕಾಯ್ದೆಯಡಿ ಯತ್ನಾಳ್ ಅವರ ಪತ್ರವನ್ನು ತನಿಖೆಗೆ ಕೈಗೆತ್ತಿಕೊಳ್ಳಲಾಗಿಲ್ಲ.

ಈ ಕಾಯ್ದೆಯಡಿ ಸುಳ್ಳು ಘೋಷಣೆ ಸಲ್ಲಿಸಿದರೆ ಒಂದು ವರ್ಷದವರೆಗೆ ಜೈಲು ಶಿಕ್ಷೆ, ದಂಡ ಅಥವಾ ಎರಡನ್ನೂ ವಿಧಿಸಬಹುದಾಗಿದೆ. ಆದರೆ ಯತ್ನಾಳ್ ಅವರ ದೂರಿನ ಕುರಿತು ವಿಚಾರಣೆಯನ್ನು ಜನನ ಮತ್ತು ಮರಣ ನೋಂದಣಿ ಕಾಯ್ದೆಯಡಿ ಕೈಗೆತ್ತಿಕೊಳ್ಳಲಾಗಿದೆ ಎಂದು ಆನಂದ್ ತಿಳಿಸಿದ್ದಾರೆ.

ಜನನ ಮತ್ತು ಮರಣ ನೋಂದಣಿ ವ್ಯವಸ್ಥೆಯ ಮುಖ್ಯಸ್ಥರಾಗಿರುವ ಆಯುಕ್ತರು ನಕಲಿ ಮರಣ ಪ್ರಮಾಣಪತ್ರಗಳ ಕುರಿತು ಬಂದ ದೂರುಗಳನ್ನು ಪರಿಶೀಲಿಸುವ ಜವಾಬ್ದಾರಿಯನ್ನೂ ಹೊಂದಿದ್ದಾರೆ. ಪರಿಶೀಲನೆಯ ನಂತರ ಮರಣ ಪ್ರಮಾಣಪತ್ರಗಳು ಮತದಾರರ ಹೆಸರಿನೊಂದಿಗೆ ಹೊಂದಿಕೆಯಾಗುವ ಇತರ ವ್ಯಕ್ತಿಗಳಿಗೆ ಸೇರಿದವು ಎಂದು ಪತ್ತೆಯಾಗಿದೆ ಎಂದು ಆನಂದ್ ಹೇಳಿದ್ದಾರೆ.

ಕುತೂಹಲಕಾರಿ ಸಂಗತಿಯೆಂದರೆ, ಮೂವರು ಮಹಿಳೆಯರ ಪ್ರಕರಣದಲ್ಲೂ ಅವರ ಹೆಸರುಗಳು ಮತ್ತು ಅವರ ಪತಿಯ ಹೆಸರುಗಳನ್ನು ಮರಣ ಪ್ರಮಾಣಪತ್ರಗಳಲ್ಲಿ ಸರಿಯಾಗಿ ನಮೂದಿಸಲಾಗಿತ್ತು. ಆದರೆ ಪ್ರಮಾಣಪತ್ರದಲ್ಲಿದ್ದ ವಿಳಾಸಗಳು ಮಾತ್ರ ಭಿನ್ನವಾಗಿದ್ದವು.

1,054 ಆಕ್ಷೇಪಣೆಗಳ ಪೈಕಿ ಯಾವುದಕ್ಕೂ ಜನಪ್ರತಿನಿಧಿ ಕಾಯ್ದೆಯನ್ನು ಅನ್ವಯಿಸಲಾಗಿಲ್ಲ. ಇದಕ್ಕೆ ಕಾರಣ, ಫಾರ್ಮ್ 7 ಅರ್ಜಿಗಳನ್ನು ಸಲ್ಲಿಸಲಾಗಿರಲಿಲ್ಲ ಎಂದು ಆನಂದ್ ತಿಳಿಸಿದ್ದಾರೆ. ಶಾಸಕರ ಲೆಟರ್‌ಹೆಡ್‌ನಲ್ಲಿ ಹೆಸರುಗಳ ಪಟ್ಟಿಯೊಂದನ್ನು ಮತ್ತು ಅದರೊಂದಿಗೆ ದೂರನ್ನು ಮಾತ್ರ ಸಲ್ಲಿಸಲಾಗಿತ್ತು.

ದೂರು ಸಲ್ಲಿಸಿದವರ ವಿರುದ್ಧ ಮುಂದಿನ ಕ್ರಮ ಹೇಗೆ ಕೈಗೊಳ್ಳಬೇಕು ಎಂಬ ಬಗ್ಗೆ ಅಧಿಕಾರಿಗಳು ಇನ್ನೂ ಕಾನೂನು ಅಭಿಪ್ರಾಯ ಪಡೆಯುತ್ತಿದ್ದಾರೆ. ಇದೇ ವೇಳೆ ಕಾರ್ಯಕರ್ತರು ಮಾಜಿ ಸಚಿವರ ವಿರುದ್ಧ ಎಫ್.ಐ.ಆರ್ ದಾಖಲಿಸಿ ಕ್ರಿಮಿನಲ್ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ.

ಬಣ್ಣದ ಛಾಯಾಚಿತ್ರಗಳಿರುವ ಮತದಾರರ ಪಟ್ಟಿಯನ್ನು ಬಿಜೆಪಿ ಶಾಸಕರೊಬ್ಬರು ಹೇಗೆ ಪಡೆಯಲು ಸಾಧ್ಯವಾಯಿತು ಎಂದು ಅವರು ಪ್ರಶ್ನಿಸಿದರು.

ಯತ್ನಾಳ್ ಅವರು ಮರಣ ಪ್ರಮಾಣಪತ್ರಗಳನ್ನು ಒದಗಿಸಿದ್ದ ಎಂಟು ಮತದಾರರಲ್ಲಿ ಇಬ್ಬರು ಪುರುಷರು ಮತ್ತು ಆರು ಮಂದಿ ಮಹಿಳೆಯರು. ಇವರಲ್ಲಿ ಒಬ್ಬರು ರಾಜ್ಯ ಸರ್ಕಾರಿ ನೌಕರರಾಗಿದ್ದಾರೆ.

ಸ್ಥಳೀಯ ಕಾರ್ಯಕರ್ತ ಇರ್ಫಾನ್ ಶೇಖ್ ಅವರ ಪ್ರಕಾರ, ಯತ್ನಾಳ್ ಅವರ ಪಟ್ಟಿಯಲ್ಲಿದ್ದ ಉಳಿದ 1,046 ಮತದಾರರೂ ಜೀವಂತವಾಗಿರುವುದು ಪತ್ತೆಯಾಗಿದೆ. ಅವರ ಪ್ರಕಾರ, ಒಂದೇ ಒಂದು ಅಪವಾದವಿದ್ದು, ಆ ಮತದಾರರು ಆಕ್ಷೇಪಣೆ ಮತ್ತು ಹಕ್ಕುಗಳ ಅವಧಿ ಮುಗಿದ ನಂತರ ಮೃತಪಟ್ಟಿದ್ದರು.

# ಪಂಡಿತ ತಾರಾನಾಥರ ವೈದ್ಯಕೀಯ, ಸಾಹಿತ್ಯ ಸೇವೆ ಅಪಾರ: ಸಾಹಿತಿ ಶಾಮಸುಂದರ ಬಣ್ಣನೆ




**ರಾಯಚೂರು, ಅ. 7:** ಉತ್ತರ ಕರ್ನಾಟಕದಲ್ಲಿ ಪಂಡಿತ ತಾರಾನಾಥರು ನಮ್ಮವರು ಎಂಬ ಹೆಮ್ಮೆ ರಾಯಚೂರು ಜನತೆಗಿದೆ. ಅವರು ಸ್ಥಾಪಿಸಿದ ಪ್ರೇಮಾಯತನ ಆಶ್ರಮದ ಆಯುರ್ವೇದ ಚಿಕಿತ್ಸಾಲಯವು ದೇಶ–ವಿದೇಶಗಳ ಅನೇಕ ರೋಗಿಗಳಿಗೆ ಚಿಕಿತ್ಸೆ ನೀಡಿ ಗುಣಮುಖರಾಗಲು ನೆರವಾಗಿದೆ. ಪಂಡಿತ ತಾರಾನಾಥರ ವೈದ್ಯಕೀಯ ಜ್ಞಾನ ಮತ್ತು ಮಾನವೀಯ ಸೇವೆ ಅತ್ಯಂತ ಪರಿಣಾಮಕಾರಿಯಾಗಿತ್ತು ಎಂದು ಸಾಹಿತಿ ಶಾಮಸುಂದರ ಬಿದರಕುಂದಿ ಅಭಿಪ್ರಾಯಪಟ್ಟರು.

ತಾಯಿ ಮತ್ತು ಮಗನ ಪರಿಶ್ರಮದಿಂದ ರೂಪುಗೊಂಡಿರುವ ಈ ಕೃತಿಗಳು ಪಂಡಿತ ತಾರಾನಾಥರ ವೈದ್ಯಕೀಯ, ಸಾಹಿತ್ಯಿಕ ಹಾಗೂ ಸಾಮಾಜಿಕ ಕೊಡುಗೆಗಳನ್ನು ಮನಮುಟ್ಟುವಂತೆ ಪರಿಚಯಿಸಿವೆ. ಪಂಡಿತ ತಾರಾನಾಥರು ಎಂಟು ಭಾಷೆಗಳಲ್ಲಿ ಪಾಂಡಿತ್ಯ ಹೊಂದಿದ್ದರು ಎಂದರು.

ಗದಗಿನ ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯದ ಕುಲಸಚಿವ ಅಮರೇಶ ಯತಗಲ್ ಮಾತನಾಡಿ, ಇತಿಹಾಸದಲ್ಲಿ ಪುರುಷರ ಸಾಧನೆಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿದ್ದು, ಪ್ರಮುಖ ಪಾತ್ರ ವಹಿಸಿದ ಮಹಿಳೆಯರ ಕೊಡುಗೆಗಳನ್ನು ನಿರ್ಲಕ್ಷಿಸಲಾಗಿದೆ. ಇತಿಹಾಸದ ಮರುಶೋಧನೆಯಿಂದ ಮಹಿಳೆಯರು, ರಾಣಿಯರ ಪಾತ್ರಗಳು ಬೆಳಕಿಗೆ ಬರುತ್ತಿವೆ ಎಂದು ಹೇಳಿದರು.

# ಬಳ್ಳಾರಿಯಲ್ಲಿ ಪುಂಡಪೋಕರಿಗಳ ಹಾವಳಿ ಮೂವರ ಮೇಲೆ ಹಲ್ಲೆ, ದರೋಡೆ

**ಬಳ್ಳಾರಿ ಅ 07.** ನಗರದ ಬ್ರೂಸ್‌ಪೇಟೆ ಪೊಲೀಸ್ ಠಾಣೆ ವ್ಯಾಪ್ತಿಯ ಮೋತಿ ಸರ್ಕಲ್ ಸಮೀಪ ರೈಲ್ವೆ ಟ್ರ್ಯಾಕ್ ಬಳಿ ಬುಧವಾರ ಬೆಳಗಿನ ಜಾವ ಮೂವರ ಮೇಲೆ ಕೆಲ ಪುಂಡಪೋಕರಿಗಳು ಹಲ್ಲೆ ನಡೆಸಿ, ಮೊಬೈಲ್ ಫೋನ್ ಹಾಗೂ ಹಣವನ್ನು ದೋಚಿಕೊಂಡು ಪರಾರಿಯಾಗಿರುವ ಘಟನೆ ನಡೆದಿದೆ.

ಬೆಳಗಿನ ಜಾವ ಸುಮಾರು 4 ಗಂಟೆ ವೇಳೆಯಲ್ಲಿ ಘಟನೆ ನಡೆದಿದ್ದು, ಹಲ್ಲೆಗೊಳಗಾದ ಮೂವರ ಪೈಕಿ ಇಬ್ಬರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಮತ್ತೊಬ್ಬರಿಗೆ ಗಂಭೀರ ಗಾಯಗಳಾಗಿವೆ ಎನ್ನಲಾಗಿದೆ. ಗಾಯಾಳುವಿಗೆ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿದೆ.

ಈ ಸಂಬಂಧ ಬ್ರೂಸ್‌ಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿಗಳ ಪತ್ತೆಗೆ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಬಳ್ಳಾರಿ ನಗರದಲ್ಲಿ ಪುಂಡಪೋಕರಿಗಳ ಹಾವಳಿ, ಪಿಕ್‌ಪಾಕೆಟ್, ಸರಗಳ್ಳತನ ಸೇರಿದಂತೆ ವಿವಿಧ ರೀತಿಯ ಕಳ್ಳತನ ಪ್ರಕರಣಗಳು ನಡೆಯುತ್ತಿರುವುದು ಸಾರ್ವಜನಿಕರಲ್ಲಿ ಆತಂಕಕ್ಕೆ ಕಾರಣವಾಗಿದೆ.

# 'ಯೋಗ' ದಸರಾಗೆ ಅ.14ರಂದು ಸಚಿವ ಯು.ಟಿ.ಖಾದರ್ ಉದ್ಘಾಟನೆ




**ಮೈಸೂರು, ಅ.7:** ದಸರಾ ಮಹೋತ್ಸವದ ಹಿನ್ನಲೆಯಲ್ಲಿ ಅ.14ರಿಂದ 19ರವರೆಗೆ 4 ದಿನ ಯೋಗ ದಸರಾ ನಡೆಯಲಿದ್ದು, ಅ.14ರಂದು ಆರೋಗ್ಯ ಸಚಿವ ಯು.ಟಿ.ಖಾದರ್ ಅವರು ಉದ್ಘಾಟನೆ ಮಾಡಲಿದ್ದಾರೆ ಎಂದು ಭೂ ದಾಖಲೆಗಳ ಉಪನಿರ್ದೇಶಕರು ಹಾಗೂ ಯೋಗ ದಸರಾ ಉಪ ವಿಶೇಷಾಧಿಕಾರಿ ರಮ್ಯಾ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ, ಅ.14, 16, 18 ಹಾಗೂ 19ರಂದು ನಾಲ್ಕು ದಿನಗಳ ಕಾಲ ಯೋಗ ದಸರಾ ಹಮಿಕೊಂಡಿದ್ದು ಅ.14 ರಂದು ಬೆಳಗ್ಗೆ 10 ಗಂಟೆಗೆ ನಗರದ ಜೆ.ಕೆ. ಮೈದಾನದಲ್ಲಿರುವ ಮೈಸೂರು ಮೆಡಿಕಲ್ ಕಾಲೇಜಿನ ಅಲ್ಯೂಮಿನಿ ಸಭಾಂಗಣದಲ್ಲಿ ಆರೋಗ್ಯ ಸಚಿವರಾದ ಯು.ಟಿ ಖಾದರ್ ಅವರು ಉದ್ಘಾಟನೆ ಮಾಡುವರು. ಅಂದು ಅದೇ ವೇದಿಕೆಯಲ್ಲಿ ಒಂದು ದಿನದ ಯೋಗ ವೈಜ್ಞಾನಿಕ ವಿಚಾರ ಸಂಕಿರಣ ಆಯೋಜಿಸಲಾಗಿದೆ. ವೈಜ್ಞಾನಿಕ ವಿಚಾರ ಸಂಕಿರಣದಲ್ಲಿ ಆರೋಗ್ಯಕರ ಜೀವನ ನಡೆಸಲು ಯೋಗದ ಪಾತ್ರ ಹಾಗೂ ಇನ್ನಿತರೆ ವಿಷಯಗಳ ಬಗ್ಗೆ ಡಾ: ಎಂ ಯು ಸುಜನ್, ಡಾ: ಪಿ ಸುಧಾಕರ್, ಡಾ ಹರೀಶ್ ಬಾಬು ಹಾಗೂ ಡಾ: ಅರುಣ್ ಪಿ.ಜಿ ಅವರುಗಳು ವಿಚಾರ ಸಂಕಿರಣ ನಡೆಸಿಕೊಡಲಿದ್ದಾರೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ಕೋರಿದೆ.ಜಿಲ್ಲಾ ಆಯುಷ್ ಅಧಿಕಾರಿ ಡಾ.ರೇಣುಕಾ ದೇವಿ ಮಾತನಾಡಿ, ಅ.16 ರಂದು ರಾಜ್ಯ ಮಟ್ಟದ ದಸರಾ ಯೋಗಾಸನ ಸ್ಪರ್ಧೆಯನ್ನು ವಸ್ತುಪ್ರದರ್ಶನ ಆವರಣದ ಪಿ.ಕಾಳಿಂಗರಾವ್ ಸಭಾಂಗಣದಲ್ಲಿ ಆಯೋಜಿಸಿದ್ದು, ಅಂದು ಬೆಳಗ್ಗೆ 10 ಗಂಟೆಗೆ ಶಾಸಕರಾದ ಟಿ.ಎಸ್.ಶ್ರೀವತ್ಸ ಅವರು ಉದ್ಘಾಟನೆ ಮಾಡಲಿದ್ದಾರೆ. ಈ ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವ ಸ್ಪರ್ಧಿಗಳು ಆನ್ ಲೈನ್ ಮುಖಾಂತರ ರಿಜಿಸ್ಟರ್ ಮಾಡಿಕೊಳ್ಳಬಹುದು, ಪ್ರಥಮ ಬಹುಮಾನ 3,000, ದ್ವಿತೀಯ ಬಹುಮಾನ 2,500 ಹಾಗೂ ತೃತೀಯ ಬಹುಮಾನ 2,000 ರೂ.ಗಳ ನಗದು ಬಹುಮಾನ ನೀಡಲಾಗುವುದು ಎಂದು ತಿಳಿಸಿದರು.

ಅ.18 ರಂದು ಗ್ರಾಮೀಣ ಯೋಗ ದಸರಾ ಕಾರ್ಯಕ್ರಮವನ್ನು ನಂಜನಗೂಡು ಸರ್ಕಾರಿ ಪದವಿಪೂರ್ವ ಕಾಲೇಜು ಆವರಣದಲ್ಲಿ ಆಯೋಜಿಸಲಾಗಿದ್ದು, ಶಾಸಕರಾದ ದರ್ಶನ್ ಧೃವನಾರಾಯಣ್ ಅವರು ಉದ್ಘಾಟಿಸುವರು ಎಂದು ಮಾಹಿತಿ ನೀಡಿದರು.

ಯೋಗ ದಸರಾ ಉಪಸಮಿತಿ ಕಾರ್ಯಾಧ್ಯಕ್ಷೆ ನಿರೂಪ್ ವೆಸ್ಲಿ ಮಾತನಾಡಿ, ಅ.19ರಂದು ಯೋಗ ಚಾರಣ ಹಾಗೂ ದುರ್ಗಾ ನಮಸ್ಕಾರ ಕಾರ್ಯಕ್ರಮ ಹಮಿಕೊಂಡಿದ್ದು ಅಂದು ಬೆಳಗ್ಗೆ 6 ಗಂಟೆಗೆ ಚಾಮುಂಡಿ ಬೆಟ್ಟದ ತಪ್ಪಲಿನಿಂದ ಮೆಟ್ಟಿಲುಗಳ ಮೂಲಕ ದೇವಸ್ಥಾನದವರೆಗೂ ಚಾರಣ ಮಾಡುವುದು ಹಾಗೂ ಬೆಳಗ್ಗೆ 8 ಗಂಟೆಗೆ ದೇವಸ್ಥಾನದ ಆವರಣದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದ್ದು ದುರ್ಗಾ ನಮಸ್ಕಾರ ಯೋಗಾಸನ ನಡೆಯಲಿದೆ. ಈ ಕಾರ್ಯಕ್ರಮದಲ್ಲಿ ಶಾಸಕರಾದ ಜಿ.ಟಿ.ದೇವೇಗೌಡ ಅವರು ಭಾಗ ವಹಿಸಲಿದ್ದಾರೆ ಎಂದು ತಿಳಿಸಿದರು.

# ಸೋಲುಗಳಿಂದ ಕಂಗೆಟ್ಟಿರೋ ಕಾಂಗ್ರೆಸ್ ಪಕ್ಷ ಕೊನೆಯದಾಗಿ ಎಸ್‌ಐಆರ್ ಅಸ್ತ್ರ ಬಳಸುತ್ತಿದೆ –ಮಾಜಿ ಸಚಿವ ಶ್ರೀರಾಮುಲು

**ಬಳ್ಳಾರಿ, ಅ.07:** ದೇಶದ ವಿವಿಧ ಚುನಾವಣೆಗಳಲ್ಲಿ ಸತತ ಸೋಲುಗಳಿಂದ ಕಂಗೆಟ್ಟಿರೋ ಕಾಂಗ್ರೆಸ್ ಪಕ್ಷ ಕೊನೆಯದಾಗಿ ಎಸ್‌ಐಆರ್ ಅಸ್ತ್ರ ಬಳಸುತ್ತಿದೆ ಎಂದು ಬಿಜೆಪಿ ಮುಖಂಡ ಬಿ.ಶ್ರೀರಾಮುಲು ಹೇಳಿದ್ದಾರೆ.

ಮಾಧ್ಯಮಗಳೊಂದಿಗೆ ಅವರು, ಎಸ್‌ಐಆರ್ ವಿಚಾರವನ್ನು ರಾಹುಲ್ ಗಾಂಧಿ ಟೋಲ್ ಕಿಟ್ ಆಗಿ ಬಳಸುತ್ತಿದ್ದಾರೆ. ವಿದೇಶದಲ್ಲಿ ದೇಶದ ಮರ್ಯಾದೆ ತೆಗೆಯುವ ನಾಯಕ ರಾಹುಲ್ ಗಾಂಧಿ ಮತ್ತು ಟೀಂ ಹೋರಾಟಕ್ಕೆ ದೇಶದ ಜನತೆ ಬೆಂಬಲ ಇಲ್ಲ ಎಂದರು.

ಇವಿಎಂ ಸೇರಿದಂತೆ ಇನ್ನಿತರ ವಿಚಾರದಲ್ಲಿ ಗೊಂದಲ ಸೃಷ್ಟಿ ಮಾಡಿದ್ದಾಯ್ತು. ಇದೀಗ ಎಸ್‌ಐಆರ್ ವಿಚಾರ ಮುಂದಿಟ್ಟ ಗೊಂದಲ ಮೂಡಿಸುತ್ತಿದ್ದಾರೆ. ಎಸ್‌ಐಆರ್ ವಿಚಾರದಲ್ಲಿ ಫಾರಂ 7 ದುರ್ಬಳಕೆಯಾಗಿದೆಂಬ ಆರೋಪದ ಬಗ್ಗೆ ಉತ್ತರಿಸಿ. ಬಿಜೆಪಿಯವರು ಯಾರು ಕೂಡ ಫಾರಂ 7 ಅಡಿಯಲ್ಲಿ ಮತದಾರರ ಹೆಸರುಗಳನ್ನು ಡಿಲಿಟ್ ಮಾಡಲು ಹೇಳಿಲ್ಲಸಂವಿಧಾನದ ಪ್ರಕಾರವೇ ಮರುಪರಿಶೀಲನೆ ಮಾಡಿ ಎಂದು ಕೇಳಿದೆ ಅಷ್ಟೇ. ಆದರೆ ರಾಜ್ಯದ ಕಾಂಗ್ರೆಸ್ ಸರ್ಕಾರ ರಾಜ್ಯಾದ್ಯಂತ ಡ್ರಗ್ಸ್



ಸೇರಿದಂತೆ ಇತರೆ ಅಕ್ರಮ ಚಟುವಟಿಕೆ ಮಾಡೋರನ್ನು ಬಂಧಿಸೋದಿಲ್ಲ. ಪೊಲೀಸರ ಮೂಲಕ ಬಿಜೆಪಿ ನಾಯಕರ ಮೇಲೆ ಹಲ್ಲೆ ಮಾಡಿಸೋದು, ಕೇಸ್ ಹಾಕೋದು ಬಂಧಿಸೋ ಕೆಲಸ ಮಾಡ್ತಿದ್ದಾರೆ.

ನಮಗೆ ಅಂಬೇಡ್ಕರ್ ಕಾನೂನು ಮತ್ತು ಸಂವಿಧಾನದ ಮೇಲೆ ಗೌರವ ಇದೆ. ಕಾಂಗ್ರೆಸ್ ಕಾನೂನು ಮೇಲೆ ಗೌರವ ಇಲ್ಲ.ಮತದಾರರ ಡಿಲಿಟ್ ಮಾಡೋದು ಸೇರಿಸೋದು ಅಧಿಕಾರಿಗಳ ಕೆಲಸ ನಾವು ಆಕ್ಷೇಪಣೆ ಮಾತ್ರ ಹಾಕಿದ್ದೇವೆ ಎಂದಿದ್ದಾರೆ.

# ದಸರಾ ಅಂಗವಾಗಿ ಅ.11ರಿಂದ 20ರವರೆಗೆ ಕನ್ನಡ ಪುಸ್ತಕ ಮಾರಾಟ ಮೇಳ ಡಾ. ಮಾನಸ

**ಮೈಸೂರು, ಅ. 7–** ದಸರಾ ಮಹೋತ್ಸವದ ಅಂಗವಾಗಿ ಅ.11 ರಿಂದ 20ರವರೆಗೆ ಮೈಸೂರು ದಸರಾ ಕನ್ನಡ ಪುಸ್ತಕಗಳ ರಿಯಾಯಿತಿ ಮಾರಾಟ ಮೇಳವನ್ನು ನಗರದ ಭಾರತ್ ಸೌಟ್ಸ್ ಮತ್ತು ಗೈಡ್ಸ್ ಮೈದಾನದಲ್ಲಿ ಆಯೋಜಿಸಲಾಗಿದೆ ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ.ಮಾನಸ ಅವರು ಹೇಳಿದರು.

ಸುದ್ದಿಗೋಷ್ಠಿ ನಡೆಸಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಶಿವರಾಜ್ ತಂಗಡಗಿ ಅವರು ಉದ್ಘಾಟಿಸಲಿದ್ದು, ನಗರದ ಕಲಾಮಂದಿರ ಆವರಣದಲ್ಲಿ ಪುಸ್ತಕ ಮೇಳದಲ್ಲಿ ಸುಮಾರು 70 ಪ್ರಕಾಶಕರು ಭಾಗವಹಿಸಲಿದ್ದು, 90 ಮಳಿಗೆಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ಪ್ರತಿ ದಿನ ಬೆಳಿಗ್ಗೆ ಹೊಸ ಪುಸ್ತಕಗಳ ಬಿಡುಗಡೆ ಸಮಾರಂಭ ಇರುತ್ತದೆ. ಹಾಗೆಯೇ ಸಂಜೆ ಸೆಲ್ಫಿ ವಿತ್ ಸಾಹಿತಿ ಮತ್ತು ವಿವಿಧ ಸಾಂಸ್ಕೃತಿಕ ಕಾಂರ್ಕ್ರವಂಗಳನ್ನು ಆಯೋಜಿಸಲಾಗುತ್ತಿದೆ ಎಂದು



ಮಾಹಿತಿ ನೀಡಿದರು. :ಅ.12 ರಂದು ಕನ್ನಡ ಪುಸ್ತಕ ಪ್ರಾಧಿಕಾರದಿಂದ ಮುದ್ರಣವಾಗಿರುವ 12 ಕೃತಿಗಳ ಬಿಡುಗಡೆ ಮಾಡಲಾಗುವುದು. ಅ.13 ರಂದು ಅಮ ರಾಮಚಂದ್ರ ರವರಿಂದ ಭಾವಗೀತೆ ಗಾಯನ, ಅ.14 ರಂದು ಯುವರಾಜ ಕಾಲೇಜು ವಿದ್ಯಾರ್ಥಿಗಳಿಂದ ನನ್ನ ಮೆಚ್ಚಿನ ಪುಸ್ತಕ ಓದು ಕಾರ್ಯಕ್ರಮ, ಅ.15 ರಂದು ಸಬ್ಬನಹಳ್ಳಿ ರಾಜು ಮತ್ತು ತಂಡದವತಿಯಿಂದ ಜನಪದ ಗೀತೆಗಳ ಗಾಯನ, ಅ.16 ರಂದು ಕರ್ನಾಟಕ ಸಾಹಿತ್ಯ ಅಕಾಡೆಮಿ, ಕರ್ನಾಟಕ ಲಲಿತಕಲಾ ಅಕಾಡೆಮಿ ಹಾಗೂ ಕೆ.ಎಸ್.ಎನ್.ಟ್ರಸ್ಟ್ ನವರ ವತಿಯಿಂದ ಕವಿಗೋಷ್ಠಿ ಮತ್ತು ಕುಂಚ, ಕಾವ್ಯ ಗಾಯನ ನಡೆಸಲಾಗುವುದು.ಅ.17 ರಂದು ಡಾ.ಗಂಗೂಬಾಯಿ ಹಾನಗಲ್ ಸಂಗೀತ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಂದ ರಂಗಗೀತೆ ಗಾಯನ, ಅ.18 ರಂದು ಚಾಮರಾಜನಗರದ ನರಸಿಂಹಮೂರ್ತಿ ಸಿ.ಎಂ. ಮತ್ತು ಬಸವರಾಜು ಬಿ. ತಂಡದ ವತಿಯಿಂದ ಕನಕ ಕೀರ್ತನೆ – ತತ್ವಪದಗಳು ಹಾಗೂ ಅ.19 ರಂದು ತುಮಕೂರಿನ ಎ.ಎನ್. ತಿಮ್ಮಯ್ಯ ಅವರಿಂದ ದೇವಿ ಮಹಾತ್ಮೆ ಮೂಡಲಪಾಯ ಯಕ್ಷಗಾನ ಪ್ರಸಂಗ ನಡೆಯಲಿದೆ ಎಂದು ತಿಳಿಸಿದರು.

ಪ್ರತೀ ದಿನ ಪುಸ್ತಕ ಮೇಳದಲ್ಲಿ ಕವಿತೆ ವಾಚಿಸಿ ಗಿಡ ಗಿಟ್ಟಿಸಿ ಎಂಬ ಹೊಸ ಕಾರ್ಯಕ್ರಮವನ್ನು ಆಯೋಜಿಸಿದ್ದು, ಆಸಕ್ತ ಕವಿಗಳು ತಮ ಕವಿತೆ ಓದಿ–ವಂದು ಗಿಡ ಪಡೆಯಬಹುದಾಗಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ದಸರಾ ಪುಸ್ತಕ ಮೇಳದ ಪೋಸ್ಟರ್ ಅನ್ನು ಬಿಡುಗಡೆಗೊಳಿಸಿದರು.

# ಸೇವಾ ಸಂಕಲ್ಪ ಯಾತ್ರೆ ಮೂಲಕ ಪ್ರಧಾನಿ ಕನಸು ನನಸು ಮಾಡುತ್ತೇವೆ: ಶಾಸಕ ಅಭಯ ಪಾಟೀಲ್

**ಬೆಳಗಾವಿ, ಅ.7:** ಜಿಲ್ಲೆಯಲ್ಲಿ ಈ ಯಾತ್ರೆ ಮೂಲಕ ಪ್ರಧಾನಿ ಕನಸು ನನಸಾಗಿಸುತ್ತೇವೆ ಎಂದು ಪಕ್ಷದ ಪ್ರತಿ ಕಾರ್ಯಕರ್ತರೂ ಸಂಕಲ್ಪ ಮಾಡಬೇಕು. ಇಡೀ ಜಿಲ್ಲೆಯಲ್ಲಿ ತಳಮಟ್ಟದಿಂದ ಬಿಜೆಪಿ ಸಂಘಟನೆ ಆಗಬೇಕಾದರೆ, ನಾವೆಲ್ಲರೂ ಮೋದಿಯವರ ಸಂದೇಶಗಳನ್ನು ಪಾಲಿಸುವ ನಿಟ್ಟಿನಲ್ಲಿ ಸಂಕಲ್ಪ ಮಾಡಿ ಹೆಜ್ಜೆ ಇರಿಸಬೇಕು' ಎಂದು ಶಾಸಕ ಅಭಯ ಪಾಟೀಲ ಹೇಳಿದರು.



ಇಲ್ಲಿನ ವ್ಯಾಕ್ಸಿನ್ ಡಿಪೊ ಮೈದಾನದಲ್ಲಿ ಬುಧವಾರ ನಡೆದ 'ವಿಕಸಿತ ಭಾರತ ಸೇವಾ ಸಂಕಲ್ಪ ಯಾತ್ರೆ'ಯಲ್ಲಿ, ಮಾಜಿ ಶಾಸಕ ಪಿ.ರಾಜೀವ್, ಈ ಹಿಂದೆ ಭಾರತ ಎಂದರೆ, ಬಡ ದೇಶ ಮತ್ತು ಭಿಕ್ಷುಕರ ದೇಶ ಎಂಬಂತೆ ವಿದೇಶಿಗರು ಕಾಣುತ್ತಿದ್ದರು. ಆದರೆ, ಇಂದು ಇಡೀ ವಿಶ್ವವೇ ಭಾರತವನ್ನು ಕಾಣುವ ದೃಷ್ಟಿಕೋನ ಬದಲಾಗಿದೆ. ಇಡೀ ಜಗತ್ತೇ ಭಾರತದ ಕಡೆ ತಿರುಗಿ ನೋಡುತ್ತಿದೆ. ಮೋದಿ ನಾಯಕತ್ವವೇ ಇದಕ್ಕೆ ಕಾರಣ' ಎಂದು ಬಣ್ಣಿಸಿದರು. ಇಲ್ಲಿಂದ ಪ್ರತಿ ಕ್ಷೇತ್ರಕ್ಕೆ ಹೋಗುವ ಜ್ಯೋತಿ ಯಾತ್ರೆ ಯಶಸ್ವಿ ಕಾರ್ಯಕ್ರಮರು ಶ್ರಮಿಸಿ, ಮನೆ–ಮನೆಗೆ ಮೋದಿ ಕೆಲಸವನ್ನು ತಿಳಿಸುವ ಕೆಲಸ ವಾಗಬೇಕು. ನಾವು ವಿಕಸಿತ ಭಾರತ ಮಾಡಿ ತೋರಿಸುತ್ತೇವೆ ಎಂಬ ಮೋದಿ ಘೋಷಣೆ ಮಾಡಿದ್ದಾರೆ. ಅದರ ಸಾಕಾರಕ್ಕೆ ಎಲ್ಲರೂ ಶ್ರಮಿಸಬೇಕು' ಎಂದರು.

ಶಾಸಕರಾದ ದುರ್ಯೋಧನ ಐಹೊಳೆ,ವಿಠ್ಠಲ ಹಲಗೇಕರ, ಈರಣ್ಣ ಕಡಾಡಿ, ವಿ ಮಹಾಂತೇಶ ಕವಟಗಿಮಠ, ಮಾಜಿ ಶಾಸಕರಾದ ಅರವಿಂದ ಪಾಟೀಲ, ಶ್ರೀಮಂತ ಪಾಟೀಲ, ಮಹೇಶ ಕುಮಠಳ್ಳಿ, ಸಂಜಯ ಪಾಟೀಲ, ಅನಿಲ ಬೆನಕೆ, ಮುಖಂಡರಾದ ಎಂ.ಬಿ.ಝಿರಲಿ, ಸುಭಾಷ ಪಾಟೀಲ, ಗೀತಾ ಸುತಾರ ಇದ್ದರು.

## ರಾಹುಲ್ ಗಾಂಧಿಗೆ ಬೆಂಬಲಿಸಿ ಎಸ್‌ಐಆರ್ ಅಕ್ರಮಕ್ಕೆ ವಿರೋಧ

# ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶಕುಮಾರ ವಜಾಕ್ಕೆ ಆಗ್ರಹಿಸಿ ಧರಣಿ

**ಕಲಬುರಗಿ, ಅ. 7:** ಹಲವು ಅಕ್ರಮಗಳನ್ನು ನಡೆಸಿರುವ ಮುಖ್ಯ ಚುನಾವಣಾ ಆಯುಕ್ತರಾದ ಜ್ಞಾನೇಶ ಕುಮಾರ ಅವರನ್ನು ವಜಾಗೊಳಿಸಿ, ಎಸ್‌ಐಆರ್ ನಿಲ್ಲಿಸಿ, ತಪ್ಪಾಗಿ ಹೊರಗಿಡಲಾದವರ ಮತದಾನ ಹಕ್ಕುಗಳನ್ನು ಮರುಸ್ಥಾಪಿಸಿ, ಭಾರತ ಚುನಾವಣಾ ಆಯೋಗದ ವಿಶ್ವಾಸಾರ್ಹತೆಯನ್ನು ಮರುಸ್ಥಾಪಿಸಲು ಒತ್ತಾಯಿಸಿ ರಾಹುಲ್ ಗಾಂಧಿ ಅವರು ದೆಹಲಿ ಯಲ್ಲಿ ನಡೆಸುತ್ತಿರುವ ಹೋರಾಟಕ್ಕೆ ಬೆಂಬಲಿಸಿ ನಗರದ ಟೌನ್ ಹಾಲ್ ಮುಂದಿರುವ ಮಹಾತ್ಮಾ ಗಾಂಧೀಜಿ ಪ್ರತಿಮೆಯ ಮುಂದೆ ಕಾಂಗ್ರೆಸ್ಸಿನ ನಾಗರಿಕರ ಹಕ್ಕುಗಳ ರಕ್ಷಣಾ ಆಂದೋಲನದ ಕಾರ್ಯಕರ್ತರು ಸತ್ಯಾಗ್ರಹ ಮಾಡಿದರು.

ಪ್ರತಿಭಟನೆಕಾರರು ನಂತರ ಜಿಲ್ಲಾಧಿಕಾರಿಗಳ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಪತ್ರ ಸಲ್ಲಿಸಿ, ಮೂವರು ಚುನಾವಣಾ ಆಯುಕ್ತರಲ್ಲಿ ಇಬ್ಬರು ಎತ್ತಿದ ಸಮಸ್ಯೆಗಳ ಕುರಿತು ಸೆಪ್ಟೆಂಬರ್ 23 ರಂದು ಇಂಡಿಯಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಪ್ರಕಟವಾದ ವರದಿಗಳು, ಪ್ರಸ್ತುತ ಮುಖ್ಯ




ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ಅಧೀನದಲ್ಲಿ ಚುನಾ ವಣಾ ಆಯೋಗ ಹೇಗೆ ಕಾರ್ಯ ನಿರ್ವಹಿಸುತ್ತಿದೆ ಎಂಬ ಬಗ್ಗೆ ಕೆಲವು ಮೂಲಭೂತ ಪ್ರಶ್ನೆಗಳನ್ನು ಎತ್ತುತ್ತವೆ. ಇವು ಕೇವಲ ಮತದಾರರ ಪಟ್ಟಿಗಳ ವಿಶೇಷ ತೀವ್ರ ಪರಿಶೀಲನೆ (ಎಸ್‌ಐಆರ್)ಗೆ ಸೀಮಿತವಲ್ಲ. ಭಾರತ ಚುನಾವಣಾ ಆಯೋಗದ ಕಾರ್ಯನಿರ್ವಹಣೆ ಮತ್ತು ಸಮಗ್ರತೆಯ ಬಗ್ಗೆಯೂ ಗಂಭೀರ ಆತಂಕಗಳನ್ನು ಎತ್ತುತ್ತವೆ. ಅವು ಮುಖ್ಯ ಚುನಾವಣಾ ಆಯುಕ್ತರ ಕಚೇರಿಯ ವಿರುದ್ಧ ದೋಷಾರೋಪಣೆಯಾಗಿದೆ ಮತ್ತು ಆ ಕಚೇರಿ ವಿಶ್ವಾಸಾರ್ಹತೆ ಕಳೆದುಕೊಂಡಿದೆ ಎಂದು ದೂರಿದರು.

ಮೂವರಲ್ಲಿ ಇಬ್ಬರು ಚುನಾವಣಾ ಆಯುಕ್ತರು ಕನಿಷ್ಠ 14 ಸಂದರ್ಭಗಳಲ್ಲಿ ಮತದಾರರ ನೋಂದಣಿ, ಹೆಸರುಗಳ ಅಳಿಸುವಿಕೆ ಮತ್ತು ಮರುಸ್ಥಾಪನೆ, ಹಾಗೂ ಎಸ್‌ಐಆರ್ ನಡವಳಿಕೆಗೆ ಸಂಬಂಧಿಸಿದ ನಿರ್ಧಾರಗಳಿಗೆ ಆಕ್ಷೇಪಗಳನ್ನು ದಾಖಲಿಸಿದ್ದಾರೆ. ತಮ್ಮ ಒಪ್ಪಿಗೆಯಿಲ್ಲದೆ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿರುವ ಬಗ್ಗೆ ಗಂಭೀರ ಆತಂಕಗಳನ್ನೂ ವ್ಯಕ್ತಪಡಿಸಿದ್ದಾರೆ. ಈಗ ಬಹಿರಂಗೊಂಡಿರುವ ಅಂಶಗಳು ವಿರೋಧ ಪಕ್ಷಗಳು ಮತ್ತು ನಾಗರಿಕ ಸಂಘಟನೆಗಳು ಪದೇ ಪದೇ ಎತ್ತಿದ ಆತಂಕಗಳನ್ನು ದೃಢಪಡಿಸುತ್ತವೆ ಮತ್ತು ಎಸ್‌ಐಆರ್ ಹಾಗೂ ಮತದಾರರ ಪಟ್ಟಿ ನಿರ್ವಹಣೆ ಪಾರದರ್ಶಕ ಹಾಗೂ ವಿಕೇಂದ್ರೀಕೃತ ಎಂಬ ಹೇಳಿಕೆಗಳ ಟೊಳ್ಳುತನವನ್ನು ಬಯಲು ಮಾಡುತ್ತವೆ ಎಂದು ಅವರು ಆರೋಪಿಸಿದರು.

# ಹಗರಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಅ.09 ರಂದು ಮೆಣಸಿನಕಾಯಿ ಸಾವಯುವ ಕೃಷಿ ವಿಶೇಷ ಕಾರ್ಯಾಗಾರ

**ಬಳ್ಳಾರಿ, ಅ.07:** ತಾಲೂಕಿನ ಹಗರಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಅ 9 ರಂದು ಶುಕ್ರವಾರ ಬೆಳಿಗ್ಗೆ 9.30ರಿಂದ ಸಂಜೆ 5 ರ ವರೆಗೆ ಮೆಣಸಿನಕಾಯಿ ಬೆಳೆ ಕುರಿತು, ವಿಶೇಷವಾಗಿ ಸಾವಯವ ಕೃಷಿ ಹಾಗೂ ಪ್ರಕೃತಿ ಕೃಷಿಯಲ್ಲಿ ಅನುಸರಿಸಬೇಕಾದ ಕ್ರಮಗಳು ಮತ್ತು ಬೆಳೆ ನಿರ್ವಹಣಾ ವಿಧಾನಗಳ ಬಗ್ಗೆ ವಿಶೇಷ ಕಾರ್ಯಾಗಾರ ಆಯೋಜಿಸಲಾಗಿದೆ. ಕಾರ್ಯಾಗಾರದಲ್ಲಿ ಭಾರತೀಯ



ತೋಟಗಾರಿಕಾ ಸಂಶೋಧನಾ ಸಂಸ್ಥೆಯ ಬೆಂಗಳೂರು, ಹೈದರಾಬಾದ್, ಗುಂಟೂರು ಹಾಗೂ ರಾಯಚೂರು ಕೃಷಿ ವಿಶ್ವವಿದ್ಯಾಲಯದ ಹಿರಿಯ ಹಾಗೂ ಅನುಭವಿ ವಿಜ್ಞಾನಿಗಳು ಮಾರ್ಗದರ್ಶನ ನೀಡಲಿದ್ದಾರೆ.ಒಂದು ದಿನದ ಕಾರ್ಯಾಗಾರದಲ್ಲಿ ಆಸಕ್ತಿ ಹೊಂದಿರುವವರು ಆಗಮಿಸಲು ಮನವಿ ಮಾಡಿದ್ದಾರೆ.

### ನದಿ ಜೋಡಣೆ ವಿಚಾರದಲ್ಲಿ ಡಿಪಿಆರ್‌ಗೂ ಮೊದಲೇ ತಜ್ಞರ ರೀತಿ ಮಾತನಾಡುವುದು ಬೇಡ:

# ವೀರಶೈವ ಮಠಾಧೀಶರ ಕುರಿತ ಸಿಎಂ ಹೇಳಿಕೆ, ಅವರ ನೈಜ ಗುಣ ಹೊರಬಂದಿದೆ: ಬಸವರಾಜ ಬೊಮ್ಮಾಯಿ



**ಹಾವೇರಿ, ಅ.07–** ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಅವರು ವೀರ ಶೈವ ಲಿಂಗಾಯತ ಮಠಾಧಿಪತಿಗಳ ಬಗ್ಗೆ ತಮ್ಮ ನೈಜ ಗುಣ ಒಳಗಡೆ ಮುಚ್ಚಿಟ್ಟುಕೊಂಡು ಬೇರೆ ತರ ಪ್ರೊಜೆಕ್ಟ್ ಮಾಡಲು ನೋಡಿದ್ದರು ಅವರ ನೈಜ ಗುಣಗುಣ ಇಷ್ಟು ದಿನ ಆದ ಮೇಲೆ ಆಚೆ ಬರುತ್ತಿದೆ. ಅದು ಅವರ ಸಂಸ್ಕೃತಿ, ಅದು ಹೊರಗಡೆ ಬಂದಿದೆ. ಅವರ ಹೇಳಿಕೆ ಬಗ್ಗೆ ಮುಂದೆ ಜನ ತೀರ್ಮಾನ ಮಾಡುತ್ತಾರೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಮಾಧ್ಯಮಗಳೊಂದಿಗೆ, ಪ್ರಧಾನಿ ನರೇಂದ್ರ ಮೋದಿಯವರು 25 ವರ್ಷ ಜನ ಸೇವೆ ಮಾಡಿರುವ ಹಿನ್ನೆಲೆಯಲ್ಲಿ ಸೇವಾ ಜ್ಯೋತಿ ಕಾರ್ಯಕ್ರಮ ಮಾಡಿದ್ದೇವೆ. ಆದರ್ಶಗಳು ನಶಿಸಿ ಹೋಗಿರುವ ಕಾಲದಲ್ಲಿ ಪ್ರಧಾನಿ ಮೋದಿಯವರು ಆದರ್ಶ ಆಡಳಿತ ತರುವ ಪ್ರಯತ್ನ ಮಾಡಿದ್ದಾರೆ. ಜಾಗತಿಕವಾಗಿ ನಮ್ಮ ದೇಶ ಆರ್ಥಿಕವಾಗಿ ಮೂರನೇ ಸ್ಥಾನದಲ್ಲಿದೆ. ಅದನ್ನು ಇನ್ನಷ್ಟು ಅಭಿವೃದ್ಧಿ ಮಾಡುವ ದೃಢ ಸಂಕಲ್ಪ ಮಾಡಿದ್ದೇವೆ ಎಂದರು.

ವೀರ ಶೈವ ಲಿಂಗಾಯತ ಮಠಾಧಿಪತಿಗಳು ನನ್ನ ಸೇವೆ ಮಾಡಬೇಕು ಎಂಬ ಸಿಎಂ ಡಿಕೆ ಶಿವಕುಮಾರ್ ಹೇಳಿಕೆ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಸಿಎಂ ಡಿ. ಕೆ ಶಿವಕುಮಾರ್ ಅವರು ತಮ್ಮ ನೈಜ ಗುಣ ಒಳಗಡೆ ಮುಚ್ಚಿಟ್ಟುಕೊಂಡು ಬೇರೆ ಥರ ಪ್ರೊಜೆಕ್ಟ್ ಮಾಡಲು ನೋಡಿದ್ದರು ಅವರ ನೈಜ ಗುಣ ಇಷ್ಟು ದಿನ ಆದ ಮೇಲೆ ಆಚೆ ಬರ್ತಾ ಇದೆ. ಅದು ಅವರ ಸಂಸ್ಕೃತಿ, ಅದು ಹೊರಗಡೆ ಬಂದಿದೆ. ಅವರು ಹೇಳಿರೋದು ಸ್ಪಷ್ಟವಾಗಿ ಬಹಿರಂಗವಾಗಿ ಇದೆ. ಈಗ ನಾನು ಹಾಗೇ ಹೇಳಿಲ್ಲ ಅಂತಾರೆ. ಅದನ್ನ ಮರಳಿ ಪಡೆಯಲು ಆಗುವುದಿಲ್ಲ, ಈ ಬಗ್ಗೆ ಮುಂದೆ ಜನ ತೀರ್ಮಾನ ಮಾಡುತ್ತಾರೆ ಎಂದು ಹೇಳಿದರು.

**ಖಾಸಗಿ ದೂರಿಗೆ ಅವಕಾಶ ಇಲ್ಲ:** ಎಸ್ ಐಆರ್ ಪ್ರಕ್ರಿಯೆಯಲ್ಲಿ ಬಿಜೆಪಿಯವರು ಫಾರಂ ನಂ– 7 ಕೊಟ್ಟು ಕಾಂಗ್ರೆಸ್ ಮತದಾರನ್ನು ತೆಗೆಸುತ್ತಿದ್ದಾರೆ ಎಂಬ ಕಾಂಗ್ರೆಸ್ ನಾಯಕರ ಆರೋಪದ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಎಸ್ ಐ ಆರ್ ನಲ್ಲಿ ಅರ್ಜಿ ಕೊಡಲು ಅಧಿಕಾರ ಇದೆ. ಸಾಮಾನ್ಯ ವ್ಯಕ್ತಿಯೂ ಅರ್ಜಿಕೊಡಬಹುದು

ಅದನ್ನ ನಾವು ಮಾಡಲು ಸಾಧ್ಯವೇ? ಎಸ್ ಐ ಆರ್ ಪಾರದರ್ಶಕವಾಗಿ ನಡೆದಿದೆ. ಜಸ್ಟಿಸ್ ಗಂಗಾಧರ್ ಅವರು ಕೂಡಾ ಅದನ್ನೇ ಹೇಳಿದ್ದಾರೆ. ಅರ್ಜಿ ಕೊಟ್ಟ ತಕ್ಷಣ ತಪ್ಪು ಅಂತ ಅಲ್ಲ, ಪರಿಶೀಲನೆ ಮಾಡಬೇಕು. ಕಾಂಗ್ರೆಸ್ ನವರು ನೀಡುತ್ತಿರುವುದು ಖಾಸಗಿ ದೂರುಗಳು. ಇವರಿಗೆ ಕಂಪ್ಲೇಂಟ್ ಮಾಡಲು ಅಧಿಕಾರವೇ ಇಲ್ಲ. ಎಲೆಕ್ಷನ್ ವಿಚಾರದಲ್ಲಿ ಲೋಪ ಆಗಿದ್ದರೆ ಎಲೆಕ್ಷನ್ ಕಮಿಷನ್ ಮಾತ್ರ ಕಂಪ್ಲೇಂಟ್ ಮಾಡಲು ಸಾಧ್ಯ. ಕಾಂಗ್ರೆಸ್ ನವರು ಅಲ್ಪ ಸಂಖ್ಯಾತರನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು.

**ಬೇಸರದ ಸಂಗತಿ:** ಏಷ್ಯನ್ ಗೇಮ್ಸ್ ನಲ್ಲಿ ಚಿನ್ನ ಗೆದ್ದ ಎಂ ಆರ್ ಪೂವಮ್ಮ ಅವರಿಗೆ ರಾಜ್ಯ ಸರ್ಕಾರದಿಂದ ನಿರ್ಲಕ್ಷ್ಯ ಮಾಡಿರುವ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಇದು ನನಗೂ ಬೇಸರ ಆಯ್ತು. ನಮ್ಮ ಸರ್ಕಾರ ಇದ್ದಾಗ ಒಲಂಪಿಕ್ ಟ್ರೇನಿಂಗ್ ಗೆ 10 ಲಕ್ಷ ರೂಪಾಯಿ ಕೊಡುತ್ತಿದ್ದೆವು. ಇವರಿಗೆ ಮಕ್ಕಳ ಸಾಧನೆ ಗುರುತಿಸಲೂ ಪುರುಸೊತ್ತಿಲ್ಲ. ಕಾಂಗ್ರೆಸ್ ನವರು ತಮ್ಮ ಅಧಿಕಾರದ ದರ್ಬಾರ್ ನಲ್ಲಿದ್ದಾರೆ ಎಂದು ವಾಗ್ದಾಳಿ ನಡೆಸಿದರು. ವಿಧಾನ ಪರಿಷತ್ತಿಗೆ ನಡೆಯುತ್ತಿರುವ ಪಶ್ಚಿಮ ಪದವೀಧರ ಕ್ಷೇತ್ರದ ಎಂ ಎಲ್ ಸಿ ಎಲೆಕ್ಷನ್ ನಲ್ಲಿ ಬಿಜೆಪಿ ಅಭ್ಯರ್ಥಿ ಎಸ್.ವಿ. ಸಂಕನೂರ್ ನೂರಕ್ಕೆ ನೂರು ಗೆಲ್ಲುವ ವಿಶ್ವಾಸ ಇದೆ ಎಂದು ಇದೇ ವೇಳೆ ತಿಳಿಸಿದರು.

**ತಜ್ಞರ ರೀತಿ ಮಾತನಾಡುವುದು ಬೇಡ:** ಬೆಡ್ತಿ ವರದಾ ಯೋಜನೆಗೆ ವಿರೋಧ ವ್ಯಕ್ತವಾಗುತ್ತಿರುವ ಕುರಿತು ಕೇಳಿದ ಪ್ರಶ್ನೆಗಡ ಈ ಕುರಿತು ಸಿಎಂ ಡಿ.ಕೆ. ಶಿವಕುಮಾರ್ ಗೆ ಪತ್ರ ಬರೆದಿದ್ದೇನೆ. ಡಿಪಿ ಆರ್ ಗೆ ಕೆಲವರು ಅಡ್ಡಿಪಡಿಸುತ್ತಿದ್ದಾರೆ. ಡಿ ಪಿ ಆರ್ ಬಂದ ಮೇಲೆ ಎಷ್ಟು ಅರಣ್ಯ ಹೋಗುತ್ತದೆ ಎನ್ನುವುದು ಗೊತ್ತಾಗುತ್ತದೆ. ಅದು ಬರುವ ಮೊದಲೇ ನಾವೇ ತಜ್ಞರ ತರ ಮಾತಾಡುವುದು ಬೇಡ. ಈ ಬಗ್ಗೆ ಚರ್ಚಿಸಲು ಜನ ಪ್ರತಿನಿಧಿಗಳು ಹಾಗೂ ಹೋರಾಟಗಾರರ ಸಭೆ ಕರೆಯುವಂತೆ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದೇನೆ. ಅವರು ಸಭೆ ಕರೆಯುವ ಭರವಸೆ ಇದೆ ಎಂದರು.

ಕಬ್ಬಿನ ಬೆಲೆ ನಿಗದಿ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಈ ಬಗ್ಗೆ ಅಕ್ಟೋಬರ್ 12 ರಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ನೇತೃತ್ವದಲ್ಲಿ ದೆಹಲಿಯಲ್ಲಿ ಸಭೆ ಇದೆ ಅಲ್ಲಿ ಎಫ್‌ಆರ್‌ಪಿ, ಎಂಎಸ್‌ಪಿ ಬಗ್ಗೆ ಚರ್ಚೆ ಆಗುತ್ತದೆ ಎಂದರು.

# ಭಗತ್ ಸಿಂಗ್ ದೇಶಕ್ಕಾಗಿ ಪ್ರಾಣವನ್ನೇ ತ್ಯಾಗ ಮಾಡಿದ ದೇಶಪ್ರೇಮಿ

**ಬೀದರ್, ಅ. 7:** ಭಗತ್ ಸಿಂಗ್ ಅವರ ದೇಶಪ್ರೇಮ ಮತ್ತು ದೇಶಕ್ಕಗಿ ಪ್ರಾಣವನ್ನೇ ತ್ಯಾಗ ಮಾಡುವಂಥ ಅವರ ಜೀವನವು ದೇಶದ ಯುವಜನತೆಗೆ ಮಾದರಿಯಾಗಿದೆ. ಅವರ ಧೈರ್ಯ, ತ್ಯಾಗ, ಜೀವನದ ಶಿಸ್ತು ಹಾಗೂ ಸಾಮಾಜಿಕ ಜವಾಬ್ದಾರಿಯ ಮಹತ್ವ ಅವರ ಜೀವನದಿಂದ ತಿಳಿದುಕೊಳ್ಳಬಹುದಾಗಿದೆ ಎಂದು ಭಗತ್ ಸಿಂಗ್ ಯೂತ್ ಬ್ರಿಗೇಡ್‌ನ ರಾಷ್ಟ್ರೀಯ ಅಧ್ಯಕ್ಷ ಜಸಪ್ರೀತ್ ಸಿಂಗ್ ಮೋಟಿ ಸಿಂಗ್ ಅವರು ಹೇಳಿದರು.

ಸ್ವಾತಂತ್ರ್ಯ ಹೋರಾಟಗಾರ ಶಹೀದ್ ಭಗತ್ ಸಿಂಗ್ ಅವರ ಜನ್ಮದಿನದ ನಿಮಿತ್ಯ ಭಗತ್ ಸಿಂಗ್ ವೃತ್ತದಲ್ಲಿ ಅವರ ಜಯಂತಿ ಆಚರಣೆ ಅಂಗವಾಗಿ ಭಗತ್ ಸಿಂಗ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿ, ಭಗತ್ ಸಿಂಗ್ ಅವರು ಕೇವಲ ಸ್ವಾತಂತ್ರ್ಯ ಹೋರಾಟಗಾರರಲ್ಲ, ದೇಶದ ಭವಿಷ್ಯವನ್ನು ರೂಪಿಸುವ



ಬೀದರ ನಗರದ ಭಗತ್ ಸಿಂಗ್ ವೃತ್ತದಲ್ಲಿ ಭಗತ್ ಸಿಂಗ್ ಯುವ ಬ್ರಿಗೇಟ್ ವತಿಯಿಂದ ಭಗತ್ ಸಿಂಗ್ ಜಯಂತಿ ಆಚರಿಸಲಾಯಿತು.

ಯುವಶಕ್ತಿಯ ಸಂಕೇತವಾಗಿದ್ದಾರೆ ಎಂದು ಅವರು ತಿಳಿಸಿದರು.

ಬ್ರಿಗೇಡ್ ಪ್ರಮುಖರಾದ ನರೇಂದ್ರ ಸಿಂಗ್, ಪುಷ್ಪಕ್ ಕುಮಾರ್ ಜಾಧವ್, ಜಸ್ವಿಂದರ್ ಸಿಂಗ್ ಜಾಂಟಿ, ಸ್ಟೇವಿ ಮೀರಿನ್ಸ್, ಓಂ ಕೋಟೆ, ಚರಣ್ ಸಿಂಗ್, ರಾಹುಲ್ ಜಾಧವ?, ಆಕಾಶ ಸಿಂಗ್, ಪ್ರಮೋದ್ ದೇಶಮುಖ್, ಸೂರ್ಯಕಾಂತ ದುಬಲಗುಂಡಿಕರ, ರತಿಕಾಂತ್ ಹುಮನಾಬಾದೆ, ಪ್ರಶಾಂತ್ ಪಾಟೀಲ್, ರಾಕಸಿಂಗ್, ಪೀಟರ್ ಉಪಸ್ಥಿತರಿದ್ದರು.

**ಕರ್ನಾಟಕ ರಕ್ಷಣಾ ವೇದಿಕೆ:** ವೇದಿಕೆಯ ಬೀದರ್ ಜಿಲ್ಲಾಧ್ಯಕ್ಷ ಅರುಣ್ ಕೊಡಗೆ ಅವರು ಭಗತ್ ಸಿಂಗ್ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು. ಬಳಿಕ ಮಾತನಾಡಿ, ಚಿಕ್ಕ ವಯಸ್ಸಿನಲ್ಲಿ ದೇಶಕ್ಕಾಗಿ ತಮ್ಮ ಪ್ರಾಣವನ್ನು ಪಣಕ್ಕೆ ಇಟ್ಟು ಬ್ರಿಟಿಷರ ವಿರುದ್ಧ ಹೋರಾಟ ಮಾಡಿದವರು ಭಗತ್ ಸಿಂಗ್. ಇಂತಹ ಮಹಾನ್ ಕ್ರಾಂತಿಕಾರಿ ಆದರ್ಶ ಇಂದಿನ ಯುವ ಪೀಳಿಗೆ ಸದಾ ನೆನಪಿನಲ್ಲಿ ಇರಿಸಿಕೊಳ್ಳಬೇಕೆಂದು ಹೇಳಿದರು.

ರಾಷ್ಟ್ರೀಯ ದಲಿತ ಬ್ರಿಗೇಡ್ ಸಂಸ್ಥಾಪಕ ಅಧ್ಯಕ್ಷ ಅವಿನಾಶ ದೀನೆ, ಅಮರ್‌ಗಾದಗಿ, ಪ್ರಭು ಮದರಗಿಕರ್, ಸೋಮನಾಥ ಮಡಕೆ, ಸಂತೋಷ ಭಾವಿಕಟ್ಟಿ ಮೈಲೂರ, ಸಿದ್ದಿವಿನಾಯಕ ಪದವಿ ಕಾಲೇಜಿನ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ರಾಯಚೂರು ರಿಪೋರ್ಟರ್ಸ್ ಗಿಲ್ಡ್ ಬೆಳ್ಳಿ ಮಹೋತ್ಸವ ಕ್ರಿಯಾಶೀಲ ಕಾರ್ಯ ಶ್ಲಾಘನೀಯ: ಭೋಸರಾಜು

**ರಾಯಚೂರು, ಅ. 7:** ಇಲ್ಲಿನ ರಿಪೋರ್ಟರ್ಸ್ ಗಿಲ್ಡ್ ತನ್ನ ಬೆಳ್ಳಿ ಮಹೋತ್ಸವ ವನ್ನು ಕ್ರಿಯಾಶೀಲ, ಜನಪರ, ಸಾಮಾಜಿಕ ಉತ್ಸವದ ರೀತಿ ಅರ್ಥಪೂರ್ಣವಾಗಿ ಆಚರಿಸುತ್ತಿರುವುದು ಶ್ಲಾಘನೀಯ ಎಂದು ವಿಧಾನ ಪರಿಷತ್ ಸದಸ್ಯ ಎನ್.ಎಸ್.ಬೋಸರಾಜು ಅಭಿಪ್ರಾಯಪಟ್ಟರು. ನಗರದ ಮಹಾತ್ಮ ಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ರಾಯಚೂರು ರಿಪೋ



ರ್ಟರ್ಸ್ ಗಿಲ್ಡ್ ಬೆಳ್ಳಿ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ ನೀಡಿ, 'ಈ ತಿಂಗಳ ಅಂತ್ಯದಲ್ಲಿ ನಡೆಯುವ ಬೆಳ್ಳಿ ಮಹೋತ್ಸವ ಕಾರ್ಯಕ್ರಮ ಅರ್ಥಪೂರ್ಣವಾಗಿ ಆಚರಿಸಲು ಎಲ್ಲಾ ಸಹಕಾರ ನೀಡಲಾಗುವುದು. ಮುಂದಿನ ದಿನಗಳಲ್ಲಿ ರಾಯಚೂರಿನಲ್ಲಿ ನಡೆಯಲಿರುವ ಪತ್ರಕರ್ತರ ರಾಜ್ಯ ಮಟ್ಟದ ಸಮ್ಮೇಳನವನ್ನು ಎಲ್ಲರೂ ಸೇರಿ ಯಶಸ್ವಿಯಾಗಿ ಆಚರಿಸಲು ಅಗತ್ಯ ಸಹಕಾರ ನೀಡಬೇಕು' ಎಂದು ಹೇಳಿದರು.

ರಾಯಚೂರು ರಿಪೋರ್ಟರ್ಸ್ ಗಿಲ್ಡ್ ಅಧ್ಯಕ್ಷ ವಿಜಯ ಜಾಗಟಗಲ್ ಮಾತನಾಡಿ, ರಿಪೋರ್ಟರ್ಸ್ ಗಿಲ್ಡ್ ಬೆಳ್ಳಿ ಮಹೋತ್ಸವದ ಅಂಗವಾಗಿ ಜಿಲ್ಲೆಯ ಪತ್ರಕರ್ತರಿಗೆ ವಿವಿಧ ಕ್ರೀಡಾಕೂಟ, ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆಗೆ ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ ಆರೋಗ್ಯ ಶಿಬಿರ, ರಕ್ತದಾನ ಶಿಬಿರ ಆಯೋಜಿಸಲಾಗುವುದು ಎಂದು ಹೇಳಿದರು.

# ಹೆಚ್.ಎಸ್.ಕೆ ಪಾಲಿಟೆಕ್ನಿಕ್‌ನ ಎನ್.ಎಸ್.ಎಸ್ ಘಟಕ, ಸ್ಪಂದನಾ ಬ್ಲಡ್ ಬ್ಯಾಂಕ್ ಸಹಯೋಗದೊಂದಿಗೆ ಸ್ವಯಂ ಪ್ರೇರಿತ ರಕ್ತದಾನ ಶಿಬಿರ

**ಬಳ್ಳಾರಿ, ಅ 07.**ಬಳ್ಳಾರಿ ನಗರದ ವೀ.ವಿ ಸಂಘದ ಅಧೀನದಲ್ಲಿರುವ ಹಾನಗಲ್ ಶ್ರೀ ಕುಮಾರೇಶ್ವರ ಪಾಲಿಟೆಕ್ನಿಕ್ ತಾಂತ್ರಿಕ ವಿದ್ಯಾಲಯದಲ್ಲಿ ಇಂದು "ಹೆಚ್.ಎಸ್.ಕೆ ಪಾಲಿಟೆಕ್ನಿಕ್‌ನ ಎನ್.ಎಸ್.ಎಸ್ ಘಟಕ ಹಾಗೂ ಸ್ಪಂದನಾ ಬ್ಲಡ್ ಬ್ಯಾಂಕ್ ಸಹಯೋಗದೊಂದಿಗೆ ಕಾಲೇಜಿನಲ್ಲಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಆಯೋಜನೆ". ಹೆಚ್.ಎಸ್.ಕೆ. ಪಾಲಿಟೆಕ್ನಿಕ್‌ನಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮದಲ್ಲಿ ಮಾತನಾಡಿದ ಪ್ರಾಂಶುಪಾಲರು ತಮ್ಮ ಭಾಷಣದಲ್ಲಿ ರಕ್ತದಾನ ಮಾಡುವುದು ನಮ್ಮ ಸಾಮಾಜಿಕ ಬದ್ಧತೆಯನ್ನು ತೋರಿಸುತ್ತದೆ ಮತ್ತು ಅದು ನಮ್ಮ ಕರ್ತವ್ಯ ಪ್ರಾಣ ಉಳಿಸುವಲ್ಲಿ ಮುಖ್ಯ ಪಾತ್ರ ವಹಿಸುತ್ತದೆ.

ನಂತರ ಮಾತನಾಡಿದ ಡಾ. ಪ್ರಕಾಶ್ ಪಾಟೀಲ್ ಈಗಿನ ಸಮಾಜದಲ್ಲಿ ರಕ್ತದಾನ ಬಹಳ ಮುಖ್ಯ ರಕ್ತದಾನ ಮಾಡಿದರೆ 24 ತಾಸುಗಳಲ್ಲಿ ರಕ್ತ ಉತ್ಪತ್ತಿಯಾಗುತ್ತದೆ. ಇದರಿಂದ ನಮ್ಮ ದೇಹದಲ್ಲಿನ ಕೊಬ್ಬಿನ ಅಂಶ ಕಡಿಮೆಯಾಗುತ್ತದೆ.ಹೃದಯಾಘತದ




ಅಪಾಯವು ಗಣನೀಯವಾಗಿ ತಪ್ಪುತ್ತದೆ.ಮಾನಸಿಕ ತೃಪ್ತಿ ಸಿಗುತ್ತದೆ, ನೆನಪಿನ ಶಕ್ತಿಯು ಕೂಡ ವೃದ್ಧಿಯಾಗುತ್ತದೆ ಆದ್ದರಿಂದ ತಾವೆಲ್ಲರು ಸ್ವಯಂ ಪ್ರೇರಿತವಾಗಿ ಬಂದು ಈ ರಕ್ತದಾನ ಮಾಡಿ ಎಂದು ಅಲ್ಲಿ ನೆರೆದಿದ್ದ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಮತ್ತು ಸಿಬ್ಬಂದಿ ವರ್ಗದರಿಗೆ ಕರೆ ನೀಡಿದರು.

ಕಾರ್ಯಕ್ರಮದ ನಿರೂಪಣೆಯನ್ನು ಉಪನ್ಯಾಸಕಿ ಸಾಯಿ ಸಿಂಧು ನಡೆಸಿಕೊಟ್ಟರು.ಆಯೋಜನೆ ಮತ್ತು ವಂದನಾರ್ಪಣೆಯನ್ನು ಎನ್.ಎಸ್.ಎಸ್ ಅಧಿಕಾರಿ ರಾಜೇಶ್ ಕುಮಾರ್ ಜೆ.ಎಂ ಸಮನ್ವಯ ಅಧಿಕಾರಿ ಕೆ.ಪಂಪನಗೌಡರು ನಡೆಸಿಕೊಟ್ಟರು.

# ಉಡುಪಿ ಫಲಿಮಾರು ಮಠದ ಯತಿದ್ವಯರು ಅ.9ರಂದು ಕಲಬುರಗಿ ನಗರಕ್ಕೆ



**ಕಲಬುರಗಿ, ಅ.07–** ಉಡುಪಿ ಫಲಿಮಾರು ಮಠದ ಯತಿದ್ವಯರಾದ ಪೂಜ್ಯ ಶ್ರೀ ವಿದ್ಯಾಧೀಶ ತೀರ್ಥ ಸ್ವಾಮೀಜಿಯವರು ಹಾಗೂ ಕಿರಿಯ ಸ್ವಾಮೀಜಿಗಳಾದ ಪೂಜ್ಯ ಶ್ರೀ ವಿದ್ಯಾರಾಜೇಶ್ವರ ತೀರ್ಥ ಸ್ವಾಮೀಜಿಯವರು ಅಕ್ಟೋಬರ್ 9ರಂದು ಕಲಬುರಗಿ ನಗರಕ್ಕೆ ಆಗಮಿಸಲಿದ್ದಾರೆ. ಉಡುಪಿ ಉಭಯ ಪೀಠಾಧಿಪತಿಗಳು ಶರನ್ನವರಾತ್ರಿ ಆಚರಣೆಯಲ್ಲಿ ಭಾಗವಹಿಸಲು ಮುಂಬೈ ಮಹಾನಗರಕ್ಕೆ ತೆರಳುತ್ತಿದ್ದು ಅ 9 ರಂದು ಶುಕ್ರವಾರ ಕಲಬುರಗಿ ನಗರಕ್ಕೆ ಆಗಮಿಸುತ್ತಿದ್ದಾರೆ. ಹೊಸ ಜೇವರ್ಗಿ ರಸ್ತೆಯ ಶ್ರೀರಾಮಮಂದಿರದಲ್ಲಿ ಬೆಳಿಗ್ಗೆ ಸಾಮೂಹಿಕ ಸಂಸ್ಥಾನ ಪೂಜೆ ಪ್ರಾತಃಕಾಲ 8 ಗಂಟೆಗೆ ನೆರವೇರಲಿದೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಗುರುವರ್ಯರ ಆಶೀರ್ವಾದ ಹಾಗೂ ಮಂತ್ರಾಕ್ಷತೆ ಪಡೆಯಬೇಕೆಂದು ಶ್ರೀರಾಮ ಮಂದಿರದ ವಕ್ತಾರರಾದ ಕಿಶೋರ ದೇಶಪಾಂಡೆ ಪತ್ರಿಕೆ ಹೇಳಿಕೆಯಲ್ಲಿ ತಿಳಿಸಿದ್ದಾರೆ.

